ಡಾ. ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

# ಭೂತದಯೆ ಮತ್ತು ದೈವತ್ವ

ತಟವರ್ತಿ ವೀರರಾಘವರಾವ್

ಅನುವಾದ : ಉಮಾ ಲೋಕೇಶ್



# ಭೂತದಯೆ ಮತ್ತು ದೈವತ್ವ


ಮೂಲ : ತಟವರ್ತಿ ವೀರರಾಘವರಾವು

ಕನ್ನಡ ಅನುವಾದಕರು : ಉಮಾ ಲೋಕೇಶ್

: ಹೆಚ್.ಎನ್. ಶ್ರೀನಿವಾಸ್



**ಶ್ರೀರಾಮ ಪಬ್ಲಿಕೇಶನ್ಸ್**

ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,

ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**

ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.
**M.: 9449695503, 8050082689, 9886532204**

| | | |
|---|---|---|
| ಮೊದಲನೇ ಮುದ್ರಣ | : | 2024 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503, 9886532204 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 80/– |
| ಪುಟಗಳು | : | v+83=88 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ

ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

**ಎಚ್.ಎನ್.ಶ್ರೀನಿವಾಸ**

ಮತ್ತು

**ಎಸ್.ಎನ್.ವಿಜಯಲಕ್ಷ್ಮಿ**

**ಸಂಸ್ಥಾಪಕರು,**

ಶ್ರೀರಾಮಧಾಮ ಧ್ಯಾನಕೇಂದ್ರ

# ವಿಷಯ ಸೂಚಿ


| | | |
|---|---|---|
| 1. | ಭೂತ ದಯೆ | 2 |
| 2. | ಭೂತ ದಯೆ ಯಾರಿಗೆ ಇದೆ | 6 |
| 3. | ಶತೃತ್ವ ಬಿಡಿ ಮಿತ್ರತ್ವ ಬೆಳೆಸಿಕೊಳ್ಳಿ | 10 |
| 4. | ಎಲ್ಲರಿಗೂ ಒಂದೇ ನ್ಯಾಯ | 13 |
| 5. | ವಿನೋದಗಳು ಸಂಭ್ರಮಗಳು ಹೇಗಿರಬೇಕು? | 16 |
| 6. | ಪ್ರಕೃತಿ ವೈಪರಿತ್ಯಗಳಿಗೆ ಕಾರಣ! | 19 |
| 7. | ಸೃಷ್ಟಿಸಿದ್ದಾಂತ: ಕೊಟ್ಟರೆ ಬರುತ್ತದೆ!– ಕೊಡದಿದ್ದರೆ ಬರುವುದಿಲ್ಲ! | 24 |
| 8. | ಮಾನವರಿಗೆ ಶಾಖಾಹಾರ ಪಾಪವೆ | 27 |
| 9. | ಭಗವದ್ಗೀತೆಯ ಅನುಸಾರ ಮಾನವನ ಆಹಾರ....... | 31 |
| 10. | ಮಾನವರು ಮಾಂಸವನ್ನು ತಿನ್ನದಿದ್ದರೆ, ಪ್ರಾಣಿಗಳು ಹೆಚ್ಚುತ್ತವೆಯೇ? | 35 |
| 11. | ಮೊಟ್ಟೆ ಶಾಖ ಹಾರವೇ? | 38 |
| 12. | ಫುಳ್ಚಾರ್–ಪಾಪದ ಸಾರು | 44 |
| 13. | ಆಹಾರವೇ ಪ್ರಧಾನವೇ? | 47 |
| 14. | ದುಷ್ಟರು ಶಿಷ್ಟರು | 50 |
| 15. | ಅಮೃತ ಯಾರಿಗೆ ಸಿಕ್ಕಿತು? | 53 |
| 16. | ತಂದೆ ತಾಯಿಯರನ್ನು ಗೌರವಿಸಬೇಕು ಹಿಂಸಿಸಬಾರದು | 55 |
| 17. | ಭೂತದಯೇ ತೋರಿಸಿ. ದೇವರಿಗೆ ಇಷ್ಟವಾಗಿ,..... | 57 |
| 18. | ರುಚಿ ದೊಡ್ಡದೇ ದಯೆ ದೊಡ್ಡದೇ? | 61 |
| 19. | ದೇಹ ಬಲವೇ ದಯೆ ಬಲವೇ | 63 |
| 20. | ಒಂದು ಮೇಕೆಯ ಆತ್ಮಕಥೆ | 65 |
| 21. | ಭೂತದಯೆ ಕುರಿತು ವಿವಿಧ ಧರ್ಮಗಳ ಹೇಳಿಕೆ | 71 |
| 22. | ಪ್ರಾಣಿಗಳ ಪ್ರಾರ್ಥನೆ | 79 |
| 23. | ಭೂತದಯೇ ಕುರಿತು ಮಹಾಪುರುಷರ ಅಭಿಪ್ರಾಯಗಳು | 80 |

# ಮುನ್ನುಡಿ

**ದೈವ ಸ್ವರೂಪರಾದ ಓ ಮಾನವರೇ!**

ಆ ದಿನ ಜೀವಿಗಳ ಪ್ರಾರ್ಥನೆ ಕೇಳಿದಿರಾ! ಅಮಾಯಕನ, ಮೂಕ ಪ್ರಾಣಿಗಳ ರೋಧನಗಳು ಕೇಳಿಸುತ್ತಿಲ್ಲವೇ ಇನ್ನೂ ನಿಮಗೆ ಅವುಗಳ ಮೇಲೆ ದಯೆ ಬರುತ್ತಿಲ್ಲವೇ ಅವು ಎಲ್ಲವೂ ಕೂಡ ಮನ ನಮ್ಮಂತೆ ದೇವರ ಮಕ್ಕಳೇ ಅಲ್ಲವೇ ಸೃಷ್ಟಿಯಲ್ಲಿ ಆತನಿಗೆ ಎಲ್ಲವೂ ಸಮಾನವೇ ಅಲ್ಲವೇ! "ಮೇಲಿನವನ ದಯವನ್ನು ಬಯಸುವ ನಾವು ನಮ್ಮ ಕೆಳಗೆ ಇರುವ ಜೀವಿಗಳ ಮೇಲೆ ಯಾಕೆ ದಯೆ ತೋರುತ್ತಿಲ!"

ಅವು ಬಾಯಿ ತೆರೆದು ಕೇಳಲು ಮಾತುಗಳು ಕೂಡ ಬರುವುದಿಲ್ಲ. ತಮ್ಮ ನೋವುಗಳನ್ನು ಪ್ರಕಟಿಸಲು ಸಾಧ್ಯವಾಗದ ಮೂಕ ಜೀವಿಗಳು ಅದು ಎಷ್ಟೋ ಹೊಡೆತಗಳನ್ನು ಸಹಿಸುತ್ತೇವೆ. ಆದರೆ ಬಾಯಿಂದ ಏನು ಹೇಳಲಾರವು ಅವು ದಯವಿಟ್ಟು ಕೇಳಲಾರವು ನಮ್ಮನ್ನು ದಯೆ ತೋರಿ ಬಿಡಿ ಎಂದು ಕೇಳಲಾರವು ಅಂತಹ ಅಮಾಯಕ ಮೂಕ ಜೀವಿಗಳ ಮೇಲೆ ಏಕೆ ದಯೆ ತೋರಲಾರೆವು

ಮಾನವ ಜನ್ಮವನ್ನೆತ್ತಿ ರಾಕ್ಷಸ ಕೃತ್ಯವಾದ ಜೀವ ಹಿಂಸೆ ಮಾಡಿ ಮಾಂಸ ಭಕ್ಷಿಸುವುದು ಸರಿಯೇ? ಅವುಗಳನ್ನು ಪ್ರೇಮಿಸಲಾರಿರಿ? ಅಯ್ಯೋ ಬೇಡ! ಬೇಡ! ಈ ರಾಕ್ಷಸ ಕೃತ್ಯ ಬಿಡಿ ದುರಾಚಾರವನ್ನು ಬಿಡಿ! ನಾವು ಮಾನವರು ಪ್ರೇಮ ನಮ್ಮ ಮತ ಎಲ್ಲರನ್ನೂ, ಎಲ್ಲವನ್ನು ಪ್ರೇಮಿಸೋಣ ಭಗವಂತನ ಸೃಷ್ಟಿಯಲ್ಲಿ ನಾವು ಎಲ್ಲಾ ಜೀವಿಗಳನ್ನು ಹಾಯಾಗಿ ಆನಂದವಾಗಿ ಜೀವಿಸಲು ಬಿಡೋಣ ನಾಲಿಗೆಯ ರುಚಿಗಾಗಿ ಅವುಗಳನ್ನು ಕೊಂದು ತಿಂದರೆ, ಅದು ಪಾಪ ಆಲೋಚಿಸಿ ಮಾಂಸಾ ರುಚಿ ಆಗಿರುವುದೇ? ಶುಚಿಯಾಗಿರುವುದೇ? ಹೆಸರಿನಲ್ಲಿಯೇ ನಂಜು ಇದೆ ಹಾಗಾದರೆ ಅದು ನೀಚವಾದ ಆಹಾರವಲ್ಲವೇ?

ನೋಡಿ ಒಂದು ಚಿಕ್ಕ ಪಾರಿವಾಳವನ್ನು ರಕ್ಷಿಸಲು ತನ್ನ ದೇಹವನ್ನೇ ಕೊಯ್ದು ಕೊಟ್ಟ ಸಿಬಿ ಚಕ್ರವರ್ತಿಯ ದಯೆ, ಪ್ರೇಮ ಆಗಲೇ ಮರೆತು ಹೋದೆವೇ ಶ್ರೀರಾಮ, ಬುದ್ಧ ಧರ್ಮದ ದರ್ಮಜನು, ಗಾಂಧಿ ಅಂತಹ ಮಹಾನುಭಾವರು ಜನಿಸಿದ ದೇಶದಲ್ಲಿ ಹುಟ್ಟಿ ನಾವು ರಾಕ್ಷಸರಾಗಿ ಹೇಗೆ ಪ್ರವರ್ತಿಸಬಲ್ಲೆವು

ಪ್ರೇಮ ಸ್ವರೂಪರೇ! ಶಾಶ್ವತವಲ್ಲದ ಈ ದೇಹವನ್ನು ನಂಬಿ ಜೀವಿಗಳನ್ನು ಕೊಂದು ಅವುಗಳ ಮಾಂಸದಿಂದ ಹೊಟ್ಟೆಯನ್ನು ತುಂಬಿಸಿಕೊಂಡು ಕೊನೆಗೆ ಭಗವಂತನೇ ಎದುರು ಹೇಗೆ ನಿಲ್ಲಬಲ್ಲೆವೂ ಈ ರಕ್ತದ ಆಹಾರ ಹೇಗೆ ತಿನ್ನಬಲ್ಲೆವು ಆಲೋಚಿಸಿ ಭಗವಂತನು ತಿನ್ನಲು ಎಷ್ಟೋ ಫಲಗಳು ತರಕಾರಿಗಳು ಕೊಟ್ಟರೆ ಮಾಂಸವನ್ನೇ ಬಕ್ಷಿಸಬೇಕೇ, ಪ್ರಾಣಿಗಳ ಶವಗಳನ್ನೇ ತಿನ್ನಬೇಕೆ..

ಆಲೋಚಿಸಿ ಈ ನಿರ್ದೋಷಿಗಳಾದ ಮೂಕ ಜೀವಿಗಳ ಮೇಲೆ 'ದಯೆ' ತೋರಿಸೋಣ ಅವುಗಳನ್ನು ಆನಂದವಾಗಿ ಜೀವಿಸಲು ಬಿಡಣ, ಶಾಖ ಹಾರಿಗಳಾಗೋಣ, ಧ್ಯಾನ ಮಾಡಿ ಬ್ರಹ್ಮರ್ಷಿ ಪತ್ರೀಜಿ ಮಾರ್ಗದಲ್ಲಿ ಪಯಣಿಸೋಣ.

# ಭೂತದಯೆ

ಭೂತಗಳು ಎಂದರೆ ಜೀವಿಗಳು ಅಂದರೆ ಪ್ರಾಣವಿರುವ ಪ್ರತಿಯೊಂದು.. ಅಂದರೆ,ಸಮಸ್ತ ಮಾನವರು, ಪ್ರಾಣಿಗಳು, ಪಕ್ಷಿಗಳು, ಕ್ರಿಮಿ–ಕೀಟಗಳು, ಜಲಚರಗಳು ಎಂದು ಅರ್ಥ ಮಾಡಿಕೊಳ್ಳಬೇಕು. ಅವುಗಳ ಮೇಲೆ ದಯೆ ತೋರಿಸುವುದನ್ನು ಭೂತದಯೆ ಎನ್ನುತ್ತಾರೆ.

## ದಯೆ

ತಮಗಿಂತ ಕಡಿಮೆ ಸ್ಥಾಯಿಯಲ್ಲಿರುವ ಯಾರಾದರೂ ಸರಿಯೇ, ಅಂದರೆ ಕೆಲಸದವರು, ಸ್ತ್ರೀಯರು, ಬಲಹೀನರು, ಅಲ್ಪರು, ನಿಸ್ಸಹಾಯಕರು ಕೊನೆಗೆ ಪ್ರಾಣಿಗಳು... ಯಾರಾದರೂ ಸರಿಯೇ ಕಾಪಾಡಿ ಎಂದು ರಕ್ಷಿಸಿ ಎಂದು ಪ್ರಾರ್ಥಿಸಿದಾಗ ಅವರ ಪ್ರಾರ್ಥನೆಯನ್ನು ಮನ್ನಿಸುವುದೇ ದಯೆ ತೋರಿಸುವುದು ಎನ್ನುತ್ತಾರೆ.

ಕೊನೆಗೆ ನಿನ್ನನ್ನು ಸಾಯಿಸಲು ಪ್ರಯತ್ನಿಸುವ ಶತ್ರುವಿನ ಮೇಲೆ ಒಮ್ಮೊಮ್ಮೆ ನಿನ್ನ ಕೈ ಮೇಲಾಗುತ್ತದೆ. ಶತ್ರುವನ್ನು ಸಾಯಿಸುವ ಅವಕಾಶ ಬರುತ್ತದೆ. ಆ ಶತ್ರು ಸಾಯಿಸಬೇಡ ಬಿಟ್ಟು ಬಿಡು ಎಂದು ನಿನ್ನಲ್ಲಿ ಪ್ರಾರ್ಥಿಸುತ್ತಾನೆ. ಅಂತಹವನ ಪ್ರಾರ್ಥನೆಯನ್ನು ಮನ್ನಿಸುವುದು ಸಹ ದಯೆ ತೋರಿಸುವುದು ಎಂದು ಹೇಳುತ್ತಾರೆ.

ಭಿಕ್ಷುಕ ಧನವಾಗಲಿ, ಅನ್ನವನ್ನಾಗಲಿ ಬೇಡುತ್ತಾನೆ ಅವನ ಬೇಡುವಿಕೆಯನ್ನು ಮನ್ನಿಸುವುದೇ ದಯೆ ತೋರಿಸುವುದು ಎಂದರೆ.

ಹಾಗೆ ದಯೆ ತೋರಿಸಿ ಬಲ್ಲವನೇ ದೈವದೊಂದಿಗೆ ಸಮಾನ

ಅದಕ್ಕೆ "**ದಯೆಯುಳ್ಳ ಹೃದಯುವೇ ಭಗವಾನ್ ನಿಲಯ**" ಎಂದು ಹೇಳುತ್ತಾರೆ.ದಯೆಯೇ ಧರ್ಮದ ಮೂಲವಯ್ಯ ಎಂದು ಬಸವಣ್ಣನವರು ಹೇಳಿದ್ದಾರೆ.

ಅಂದರೆ ದಯೆ ತೋರಿಸುವುದೇ ದೈವತ್ವ.

ಹಾಗೆ ನಮ್ಮ ಕೆಳ ಸ್ಥಾಯಿಯ ಜೀವಿಗಳಾದ ಅಮಾಯಕ,(ಏನೂ ತಿಳಿಯದ) ಮೂಕ, (ಬಾದೆಗಳನ್ನು ಯಾರಲ್ಲೂ ಹೇಳಿಕೊಳ್ಳಲಾರದ) ನಿಸ್ಸಹಾಯಕ, (ತನ್ನನ್ನು ರಕ್ಷಿಸಿಕೊಳ್ಳಲಾರದ) ನಿರ್ದೋಷಿಗಳಾದ (ಯಾರಿಗೂ ಅಪಕಾರ ಮಾಡದ) ಸಾಧು ಜೀವಿಗಳನ್ನು ಹಿಂಸಿಸುವುದು ದಯೆ ಎನಿಸುವುದಿಲ್ಲ. ದೈವತ್ವ ಎನ್ನುವುದಿಲ್ಲ ಕ್ರೂರತ್ವ ರಾಕ್ಷಸತ್ವ ಎನ್ನುತ್ತಾರೆ.

ಆ ಸಾಧು ಪ್ರಾಣಿಗಳನ್ನು ಯಾರಾದರೂ ಹಿಂಸಿಸುತ್ತಿದ್ದರೆ, ಸಾಯಿಸುವ ಪ್ರಯತ್ನ ಮಾಡಿದರೆ, ಅವು ಓಡಿ ಹೋಗಲು ಪ್ರಯತ್ನಿಸುತ್ತವೆ.ಬೇಡುತ್ತವೆ,ರೋಧಿಸುತ್ತವೆ ಆದರೆ ಅವುಗಳ ಭಾಷೆ ಮಾನವರಿಗೆ ಅರ್ಥವಾಗುವುದಿಲ್ಲ. ಅಂತವುಗಳ ಪ್ರಾರ್ಥನೆಯನ್ನು

ಮನ್ನಿಸುವುದೇ ದಯೆ ತೋರಿಸುವುದು ಎಂದರೆ.. ದಯೆಯುಳ್ಳವರು ಪ್ರಾಣಿಗಳನ್ನು ಪ್ರೇಮದಿಂದ ನೋಡುತ್ತಾರೆ. ಅವುಗಳೊಂದಿಗೆ ಸ್ನೇಹ ಮಾಡುತ್ತಾರೆ.

ಪ್ರಾಣಿಗಳನ್ನು ಪ್ರೇಮಿಸಿ, ಅವುಗಳೊಂದಿಗೆ ಸ್ನೇಹವನ್ನು ಮಾಡಿ ಅವು ನಿಮಗೆ ಎಷ್ಟೋ ಉಪಯೋಗವಾಗುತ್ತವೆ. ಕೊನೆಗೆ ನಿಮಗಾಗಿ ಅವು ತಮ್ಮ ಪ್ರಾಣವನ್ನು ಕೊಡಲು ಕೂಡಾ ಹಿಂದೆ ನೋಡುವುದಿಲ್ಲ. ಹಾಗೆ ಒಂದು ನಾಯಿಯನ್ನು ತೆಗೆದುಕೊಳ್ಳಿ ಅದು ಯಜಮಾನನ ಮೇಲೆ ಎಷ್ಟು ವಿಶ್ವಾಸ ತೋರಿಸುತ್ತದೆ. ಹಾಗೆ ಎತ್ತು, ಹಸು,ಕುರಿ, ಮೇಕೆ,ಕೋಳಿ,ಮೀನು ಎಲ್ಲವೂ ಮಾನವ ಜಾತಿಗೆ ಎಷ್ಟು ಉಪಕಾರ ಮಾಡುತ್ತಿವೆಯೋ... ಆಲೋಚಿಸಿ, ಅವುಗಳ ಮೇಲೆ ಮಾನವರಿಗೆ ಎಂಥ ಉಪಕಾರ ನಡೆಯುತ್ತಿದೆಯೋ ತಿಳಿದುಕೊಂಡರೆ ಅವುಗಳನ್ನು ನಿರ್ದಾಕ್ಷಿಣ್ಯವಾಗಿ ಸಾಯಿಸಿ ಭಕ್ಷಿಸುವುದಿಲ್ಲ ಅವುಗಳನ್ನು ರಕ್ಷಿಸುತ್ತೇವೆ ರಕ್ಷಿಸುವುದೇ 'ದಯೆ' ಭಗವಂತನ ಸೃಷ್ಟಿಯಲ್ಲಿ "**ರಕ್ಷಿಸುವವನು ಯಾವಾಗಲೂ ರಕ್ಷಿಸಲ್ಪಡುತ್ತಾನೆ ಹಿಂಸಿಸುವವನು ಯಾವಾಗಲೂ ಹಿಂಸಿಸಲ್ಪಡುತ್ತಾನೆ**"

ಹಾಗೆಯೇ ಜೀವಿಗಳು ಕಷ್ಟಪಡುತ್ತಿದ್ದರೆ ಅವುಗಳ ಕಷ್ಟ ನಿವಾರಣೆಗೆ ಪ್ರಯತ್ನಿಸುವುದನ್ನು ದಯೆ ತೋರಿಸುವುದು ಎಂದು ಹೇಳುತ್ತಾರೆ ಅಂದರೆ ಜೀವ ಹಿಂಸೆಯನ್ನು ನಿಲ್ಲಿಸುವ ಪ್ರಯತ್ನ ಮಾಡುವುದು, ಮಾಂಸ ಭಕ್ಷಣೆಯನ್ನು ಬಿಡಿಸುವುದು ಇವೆಲ್ಲವೂ ದಯೆ ಉಳ್ಳವರೇ ಮಾಡಬಲ್ಲರು. ಮಾಡುತ್ತಾರೆ ಕೂಡ ಅಂದರೆ ದಯವಿಟ್ಟು ದೈವತ್ವ ಇರುವವರಿಗೆ 'ದಯ' ಇರುತ್ತದೆ ಅಂದರೆ ದಯೆ ಇರುವವರೇ ದೇವರು ಆದ್ದರಿಂದ 'ಭೂತ ದಯೆಯೇ ದೈವತ್ವ' ಎನ್ನಲ್ಪಡುತ್ತದೆ.

## ಅನುಕಂಪ

ದಯಯಿಲ್ಲದೆ ಪ್ರವರ್ತಿಸುವವನು, ಅಂದರೆ ಪ್ರಾಣಿಗಳ ಮೊರೆ ಆಲಿಸದೆ ಅವುಗಳ ಬಾಧೆಯನ್ನು ಅರ್ಥಮಾಡಿಕೊಳ್ಳದೆ ತನ್ನ ವಿನೋದಕ್ಕಾಗಿ, ತನ್ನ ಆನಂದಕ್ಕಾಗಿ ಅವುಗಳನ್ನು ಸಾಯಿಸಿದರು, ಅವುಗಳ ಮಾಂಸವನ್ನು ಭಕ್ಷಿಸಿದರು, ಅದರ ಫಲಿತವಾಗಿ ಭವಿಷ್ಯತ್ತಿನಲ್ಲಿ ಪ್ರಕೃತಿ ಧರ್ಮದ ಪ್ರಕಾರ ಅಂದರೆ ಭಗವಂತನ ಧರ್ಮದ ಪ್ರಕಾರ ಶಿಕ್ಷಿಸಲ್ಪಡುತ್ತಾನೆ ಅಂತಹ ಶಿಕ್ಷೆಗಳು ಹೇಗಿರುತ್ತವೆ ಎಂದರೆ,ಕೆಲವರಿಗೆ ಆಕ್ಸಿಡೆಂಟಲ್ಲಿ ಕಾಲು ಹೋಗಬಹುದು, ಕೈಗಳು ಹೋಗಬಹುದು, ಶರೀರ ಸುಡಬಹುದು, ಯಾವ ಶರೀರ ಭಾಗವಾದರೂ ಅಂದುಕೊಳ್ಳದೆ ಸುಟ್ಟು ಹೋಗಬಹುದು, ಹೇಳಲಾರದ ರೋಗಗಳಿಗೆ ಗುರಿಯಾಗಬಹುದು, ಅಂತಹವರು ಕಾಪಾಡು ಎಂದು ಆರ್ಥಿಸಿದಾಗ ನಾವು ಅವರನ್ನು ನೋಡಿ ಅನುಕಂಪ ತೋರಿಸಬಹುದೇ ಹೊರತು ಅದಕ್ಕಿಂತ ಹೆಚ್ಚು ಏನು ಮಾಡಲಾರೆವು! ಅವರ ಕಾಲಾಗಲಿ, ಕೈಯಾಗಲಿ ಮರಳಿ ಕೊಡಲಾರೆವು, ಅವರ ಸುಟ್ಟುಹೋದ ಭಾಗಗಳನ್ನು ಮಾಮೂಲಾಗಿ ಇರುವಂತೆ ಸರಿ ಮಾಡಲಾರೆವು. ರೋಗಗಳ ಮೂಲಕ ಹಾಳಾದ ಶರೀರ ಭಾಗಗಳನ್ನು ಕಿಡ್ನಿಯಾಗಲಿ, ಲಿವರ್ರಾಗಲಿ, ಹೃದಯವಾಗಲಿ,

ಯಾವುದಾದರೂ ಸರಿಯೇ ಯಥಾ ಪ್ರಕಾರ ನಾವು ಮರಳಿ ಕೊಡಲಾರೆವು. ಅವರ ಮೇಲೆ ಅನುಕಂಪ ತೋರಿಸಬಹುದೆ ಹೊರತು ಮತ್ತೇನು ಮಾಡಲು ಸಾಧ್ಯವಿಲ್ಲ.

ಅಂದರೆ ಭಗವಂತನ ಧರ್ಮ ಸೂಕ್ಷ್ಮಗಳ ಅನುಸಾರ ಕೊಡಲಾದ ಶಿಕ್ಷೆಯ ವಿಷಯದಲ್ಲಿ ಅನುಕಂಪ ತೋರಿಸಬಹುದೇ ಹೊರತು ಇನ್ನೇನು ಮಾಡಲಾಗದು. ಅವರನ್ನು ಮಾಮೂಲಿ ಸ್ಥಿತಿಗೆ ತೆಗೆದುಕೊಂಡು ಬರಲಾರೆವು.

ಅಯ್ಯೋ ಪಾಪ! ಹೀಗೆ ಆಯಿತೇ! ಎಂದು ಅವರನ್ನು ಸಂತೈಸುತ್ತೇವೆ. ಏಕೆಂದರೆ ಅಯ್ಯೋ...ಪಾಪ ಮಾಡಿ ಇಂತಹ ಪರಿಸ್ಥಿತಿ ತಂದುಕೊಂಡೆಯಾ!? ಪಾಪ ಮಾಡದೇ ಇದ್ದಿದ್ದರೆ ಆ ಪರಿಸ್ಥಿತಿ ನಿನಗೆ ಬರುತ್ತಿರಲಿಲ್ಲ ಎಂದು ಅವರ ಮೇಲೆ ಅನುಕಂಪ ತೋರುತ್ತೇವೆ.

ಆದರೆ ನಾವು ಶಿಕ್ಷಿಸುವಾಗ ಮಾತ್ರವೇ ದಯೆ ಕೋರಿದವರ ಮೇಲೆ ದಯೆಯನ್ನು ತೋರಬಲ್ಲೆವು ಆ ಶಿಕ್ಷೆ ಆಗದಂತೆ ಮಾಡಬಲ್ಲೆವು, ಕಷ್ಟ ಉಂಟಾಗದಂತೆ ಮಾಡಬಲ್ಲೆವು. ಆದರೆ ಪ್ರಕೃತಿ ನಿಯಮಗಳನ್ನು ಅನುಸರಿಸಿ ಶಿಕ್ಷೆ ವಿಧಿಸಿದಾಗ ಮಾತ್ರ ಏನು ಮಾಡಲಾರೆವು. ಅನುಕಂಪ ತೋರಿಸಬಹುದೇ ಹೊರತು ಬೇರೇನೂ ಸಾಧ್ಯವಿರುವುದಿಲ್ಲ. ನಮ್ಮ ಕೈಯಲ್ಲಿ ಇದೆಯಾದ್ದರಿಂದ 'ದಯೆ' ಯನ್ನು ಮಾತ್ರ ತೋರಿಸಬಲ್ಲೆವು. ನಮ್ಮ ಕೈಯಲ್ಲಿ ಏನೂ ಇಲ್ಲ ಆದ್ದರಿಂದ ಅನುಕಂಪ ಮಾತ್ರ ತೋರಲು ಸಾಧ್ಯ.

ಗಮನಿಸಿದರೆ ನಾವು ಆರಾಧಿಸುವ ದೇವರುಗಳೆಲ್ಲರೂ ಪ್ರಾಣಿಗಳನ್ನು ಪ್ರೇಮಿಸಿದ್ದಾರೆ. ಅವುಗಳೊಂದಿಗೆ ಸ್ನೇಹದಿಂದ ಇರುತ್ತಿದ್ದರು. ಹಾಗೆ ಆ ಪ್ರಾಣಿಗಳು ಕೂಡ ಅವರೊಂದಿಗೆ ಸ್ನೇಹದಿಂದ ಇರುತ್ತಿದ್ದವು. ಅವರಿಗೆ ಎಷ್ಟು ಹತ್ತಿರವಾಗಿ ಸಂಚರಿಸುತ್ತಿದ್ದವು. ಅವರೊಂದಿಗೆ ಸೇರಿ ಆಡುತ್ತಿದ್ದವು. ಅವರಲ್ಲಿ ಒಂದು ಭಾಗವಾಗಿ ಜೀವಿಸುತ್ತಿದ್ದವು. ಅದಕ್ಕೆ ಎಷ್ಟೋ ಜನ ದೇವರುಗಳು ಅಂದರೆ ದೈವತ್ವವನ್ನು ಹೊಂದಿದವರು ಪ್ರಾಣಿಗಳ ಜೊತೆಗಿದ್ದು ಸ್ನೇಹ ಮಾಡುತ್ತಾರೆ . ನಾವು ಅವರನ್ನು ಫೋಟೋಗಳಲ್ಲಿ ಕೂಡ ನೋಡುತ್ತಿದ್ದೇವೆ. ಹಾಗೆ ದೇವರೆಲ್ಲರೂ ತಮ್ಮ ಕೆಳಗಿನ ಜೀವಿಗಳ ಮೇಲೆ ದಯೆಯುಳ್ಳವರೇ ಅವರೊಂದಿಗೆ ಸ್ನೇಹದಿಂದ ಇರುತ್ತಾರೆ ಎಂದು ಅವರನ್ನು ನಾವು ತಿಳಿದುಕೊಳ್ಳಬಹುದು. ಗಮನಿಸಿದರೆ, ಪ್ರಸ್ತುತ ಬ್ರಹ್ಮರ್ಷಿ ಪತ್ರೀಜಿಯವರು ಕೂಡ ಆ ಮೂಕ ಜೀವಿಗಳನ್ನು ಹಿಂಸಿಸಬೇಡಿ ಎಂದು ಅವುಗಳ ಮೇಲೆ ದಯ ತೋರಿ ಎಂದು ಪ್ರಪಂಚ ವ್ಯಾಪ್ತವವಾಗಿ ಎಲ್ಲರಿಗೂ ಭೋದಿಸುತ್ತಿದ್ದಾರೆ. ಅದಕ್ಕೆ ಕಾರಣವಾದ ಮಾಂಸ ಭಕ್ಷಣೆಯನ್ನು ಬಿಡಿಸುತ್ತಿದ್ದಾರೆ.

ಹಾಗೆ ಯಾರು ದಯೆಯಿಂದ ವರ್ತಿಸಿದರು ಅವರಲ್ಲಿ ದೈವತ್ವ ಇರುವಂತೆ..ಅವರು ದೇವರುಗಳೆ, ಆದ್ದರಿಂದ ಭೂತದಯೆಯೇ ದೈವತ್ವ ಎಂದು ತಿಳಿದುಕೊಳ್ಳಬೇಕು.

# ಕರುಣೆ

ಕಾಠಿಣ್ಯತೆ ಪ್ರದರ್ಶಿಸದೆ ಇರುವುದೇ, 'ಕರುಣೆ'

ಕಕ್ಷೆಯನ್ನು ಕಟ್ಟದಿರುವುದೇ 'ಕರುಣೆ'.

ಕಠಿಣವಾಗಿ ವ್ಯವಹರಿಸದಿರುವುದೇ 'ಕರುಣೆ'

ಹಗೆಯನ್ನು ಸಾಧಿಸದೆ ಇರುವುದೇ 'ಕರುಣೆ'.

ಕೆಲವು ಸಂದರ್ಭಗಳಲ್ಲಿ ತಾನು ಹೇಳಿದ್ದು ಕೇಳಲಿಲ್ಲ ಎಂದು, ತಾನು ಹೇಳಿದ್ದು ಮಾಡಲಿಲ್ಲ ಎಂದು,ತನ್ನ ಮಾತು ಕೇಳಲಿಲ್ಲ ಎಂದು, ಅವರನ್ನು ಕಠಿಣವಾಗಿ ದಂಡಿಸುತ್ತಾರೆ. ಅವರ ಮೇಲೆ ನಿರ್ಧಾಕ್ಷಿಣ್ಯವಾಗಿ ವ್ಯವಹರಿಸುತ್ತಾರೆ ಆದರೆ ಅಂತಹವರನ್ನು ಕಠಿಣವಾಗಿ ದಂಡಿಸದೆ ಇರುವುದೇ 'ಕರುಣೆ' ಎಂದು ಹೇಳುತ್ತಾರೆ. ನೋಡಿಯೂ ನೋಡದಂತೆ ಇರುವುದೇ 'ಕರುಣೆ'.

ಯಾವ ಚರ್ಯೆಯನ್ನು ತೆಗೆದುಕೊಳ್ಳದಿರುವುದು 'ಕರುಣೆ'

ಯಾವುದೇ ತಪ್ಪಿಗೆ ಶಿಕ್ಷಿಸದೆ ಇರುವುದೇ 'ಕರುಣೆ'

ಕರುಣೆಯುಳ್ಳವರು ಯಾವುದೇ ನಿರ್ಣಯವನ್ನು ಪ್ರಕೃತಿ ಅಂದರೆ ಭಗವಂತನಿಗೆ ಬಿಟ್ಟು ಬಿಡುತ್ತಾರೆ. ಅಷ್ಟೇ ಹೊರತು ಪ್ರತಿಯೊಂದನ್ನು ಮಾಡಿ..ತಾನು ಮತ್ತೊಂದು ತಪ್ಪು ಮಾಡುವುದಿಲ್ಲ ತಾನು ಮತ್ತೆ ಶಿಕ್ಷೆಗೆ ಪಾತ್ರನು ಆಗುವುದಿಲ್ಲ.

ಗೌತಮ ಬುದ್ಧನನ್ನು ಶತ್ರುವಾಗಿ ಭಾವಿಸುವ ದೇವದತ್ತನು ಬುದ್ಧನನ್ನು ಎಷ್ಟು ವಿಧವಾಗಿ ಭಾದಿಸಬೇಕೆಂದು ನೋಡಿದರು ಪ್ರತಿಯಾಗಿ ಏನು ಮಾಡಲಿಲ್ಲ.ಏನು ಹೇಳಲಿಲ್ಲ. ಇದನ್ನೇ 'ಕರುಣೆ' ಎನ್ನುತ್ತಾರೆ ಬುದ್ಧ ಕರುಣಾಮಯ ಆದ್ದರಿಂದ ಕರುಣೆ ಇದ್ದುದರಿಂದ ದೇವದತ್ತ ಏನು ಮಾಡಿದರೂ ಅವರು ಲೆಕ್ಕಿಸಲಿಲ್ಲ. ಕರುಣೆ ಕೂಡ ದೈವತ್ವದಲ್ಲಿ ಮತ್ತೊಂದು ಲಕ್ಷಣ ಆದ್ದರಿಂದ ನೀವು ಕೂಡ ಕರುಣೆ ಹೊಂದಿರಿ, ದೈವತ್ವವನ್ನು ಹೊಂದಿರಿ.

# ಭೂತದಯೆ ಯಾರಿಗೆ ಇದೆ?

ಭೂತದಯೆ ಉಳ್ಳವನು ಮಾಂಸವನ್ನು ತಿನ್ನುವುದಿಲ್ಲ. ಮಾಂಸವನ್ನು ತಿನ್ನುವವರಲ್ಲಿ, ಭೂತದಯೆ ಇರುವುದಿಲ್ಲ ಎಂದಲ್ಲ ಅವರಲ್ಲಿ ತುಂಬಾ ಜನ ತಿನ್ನುವುದು ನೋಡುತ್ತಾರೆ ಅವರು ರುಚಿಯಾಗಿ ಆಹಾರ ತಿನ್ನುತ್ತಿದ್ದೇವೆ, ಎಂದುಕೊಳ್ಳುತ್ತಿದ್ದಾರೆ ಆದರೆ ಮಾಂಸಾಹಾರ ತಯಾರಾಗಲು ಹಿಂದೆ ಆ ಪ್ರಾಣಿಗಳ ಮೇಲೆ ಕ್ರೂರವಾಗಿ ಎಷ್ಟು ಹಿಂಸೆ ನಡೆಯುತ್ತಿದೆ ಎಂದು ತುಂಬಾ ಜನರಿಗೆ ತಿಳಿಯದು ಅವೆಲ್ಲ ನೋಡಿದರೆ ಮಾಂಸವನ್ನು ತಿನ್ನುವುದಿಲ್ಲ ತುಂಬಾ ಜನರಿಗೆ ರಕ್ತವನ್ನು ನೋಡಿದರೇನೆ ಕಣ್ಣು ತಿರುಗುತ್ತದೆ ನೋಡಲಾರರು ಆಲೋಚಿಸಿ ರಕ್ತವನ್ನು ನೋಡಲಾರದವರು ರಕ್ತದೊಂದಿಗೆ ಕೂಡಿರುವ ಮಾಂಸವನ್ನು ಹೇಗೆ ತಿನ್ನುವರು!?

ಒಂದು ವಿಧವಾಗಿ ಹೇಳಬೇಕೆಂದರೆ ಆ ಪ್ರಾಣಿಗಳು ಹೇಗೆ ಕೊಲ್ಲಲ್ಪಡುತ್ತವೆ! ಎಂತಹ ಕ್ರೂರವಾದ ಪದ್ಧತಿಗಳನ್ನು ಕೊಲ್ಲಲು ಅನುಸರಿಸುತ್ತಾರೆ! ಎನ್ನುವುದು ತಮ್ಮ ಕಣ್ಣಿಂದ ಪ್ರತ್ಯಕ್ಷವಾಗಿ ನೋಡಿದರೆ ಮಾಂಸ, ಮೀನು ತಿನ್ನುವವರಲ್ಲಿ ನೂರಕ್ಕೆ 60 ರಿಂದ 70 ಜನ ಕೂಡಲೇ ಮಾಂಸವನ್ನು ತಿನ್ನುವುದನ್ನು ಬಿಡುತ್ತಾರೆ. ನೋಡಿದರೂ ತಿನ್ನುತ್ತಿದ್ದಾರೆ ಎಂದರೆ ಅವರೆಲ್ಲರೂ ರಾಕ್ಷಸರ ಸಮಾನರೇ ಆದ್ದರಿಂದ ಪ್ರಾಣಿಗಳನ್ನು ಸಾಯಿಸುವ ಘೋರ ವಿಧಾನಗಳಲ್ಲಿ ಕೆಲವನ್ನು ನೋಡೋಣ.

ಮೀನುಗಳನ್ನು ಹಿಡಿಯಲು ಎರೆಹುಳುಗಳನ್ನು ಗಾಳಕ್ಕೆ ಚುಚ್ಚುತ್ತಾರೆ. ಆ ಎರೆಹುಳು ಒದ್ದಾಡುತ್ತಿರುತ್ತದೆ. ಅದರಿಂದ ಮೀನಿನ ದೃಷ್ಟಿ ಆ ಎರೆಹುಳುವಿನ ಮೇಲೆ ಬಿದ್ದು ಆಕರ್ಷಿತವಾಗಿ ಅದು ಎರೆಹುಳುವನ್ನು ತಿನ್ನಲು ಪ್ರಯತ್ನಿಸಿ ಗಾಳಕ್ಕೆ ಸಿಕ್ಕಿ ಕೊಳ್ಳುತ್ತದೆ ಹಾಗೆ ಗಾಳಕ್ಕೆ ಸಿಲುಕಿದ ಮೀನನ್ನು ತೆಗೆದು ಬೇರೆ ದಾರಕ್ಕೆ ಕಟ್ಟುತ್ತಾರೆ ಅದು ಸಾಯದಂತೆ ನೀರಿನಲ್ಲಿ ಇಡುತ್ತಾರೆ. ಹಾಗೆ ಮಾಡುವುದರಿಂದ ಆ ಮೀನು ಓಡಿ ಹೋಗಲು ಆಗದೆ, ಸಾಯಲಾಗದೆ ನೀರಿನಲ್ಲಿ ಒದ್ದಾಡುತ್ತಾ ತುಂಬಾ ದಿನಗಳು ಇರುತ್ತದೆ.

ಉತ್ತರ ಪ್ರದೇಶದಲ್ಲಿ ಮೀನನ್ನು ಹಿಡಿಯುವರು ತುಂಬಾ ಜನ ಮೊಸಳೆಯ ಮಾಂಸವನ್ನು ಕೂಡಾ ತಿನ್ನುತ್ತಾರೆ. ಅವರು ಮೊಸಳೆಯನ್ನು ಹಿಡಿದುಕೊಂಡು ಹಗ್ಗಗಳೊಂದಿಗೆ ಬಂಧಿಸಿ ಅಗತ್ಯಕ್ಕೆ ಅನುಸಾರವಾಗಿ ಅದರ ಕಾಲು, ಬಾಲ ಕಡಿಯುತ್ತಾರೆ. ಹಾಗೆ ಎಷ್ಟೋ ದಿನಗಳು ಅದರ ಮಾಂಸವನ್ನು ಬಳಸುತ್ತಾರೆ ಅಷ್ಟು ದಿನಗಳು ಆ ಮೊಸಳೆ ಒದ್ದಾಡುತ್ತಾ ಇರುತ್ತದೆ.

ಹಂದಿಗಳನ್ನು ಸಾಯಿಸುವಾಗ ಕೆಲವರು ಕೋಲುಗಳಿಂದ ಹೊಡೆದು ಸಾಯಿಸುತ್ತಾರೆ. ಹಾಗೆ ಸಾಯಿಸಿದರೆ ಮಾಂಸ ರುಚಿಯಾಗಿ ಇರುತ್ತದೆ ಎಂದು ಅವರ ಉದ್ದೇಶ. ಇನ್ನೂ

ಕೆಲವರು ಹಂದಿಯನ್ನು ಹಗ್ಗಗಳಿಂದ ಬಂಧಿಸಿ ದೊಡ್ಡದಾದ ಕಬ್ಬಿಣದ ರಾಡನ್ನು ಅದರ ಹೃದಯಕ್ಕೆ ಇಳಿಸುತ್ತಾರೆ. ಅದು ನೋವಿನಿಂದ ಕಿರುಚುವುದು ಕಿಲೋಮೀಟರ್ ದೂರದಲ್ಲಿ ಕೇಳಿಸುತ್ತದೆ. ಒಂದು ವೇಳೆ ಅದು ಸರಿಯಾಗಿ ಹೃದಯದಲ್ಲಿ ಇಳಿದಿರದಿದ್ದರೆ,ತೆಗೆದು ಮತ್ತೆ ಅದನ್ನು ಚುಚ್ಚುತ್ತಾರೆ. ಆದರೆ ಹಂದಿ ಸಾಯಲು ತುಂಬಾ ಸಮಯ ಹಿಡಿಯುತ್ತದೆ. ಅದರ ರೋಧನೆ ವಿಕಾರವಾಗಿ ಇರುತ್ತದೆ. ಇನ್ನು ಕೆಲವು ಕಡೆ ಸುಡುತ್ತಿರುವ ಕಬ್ಬಿಣದ ಸಲಾಕೆಗಳಲ್ಲಿ ಅದರ ಹೃದಯವನ್ನು ಚುಚ್ಚುತ್ತಾರೆ.

ಇನ್ನೂ ಕೆಲವರು ಹಂದಿಯ ಕಾಲು, ಬಾಯಿಯನ್ನು ಹಗ್ಗಗಳಿಂದ ಬಂಧಿಸಿ ಉರಿಯುವ ಬೆಂಕಿಯಲ್ಲಿ ಹಾಕುತ್ತಾರೆ ಹಾಗೆ ಸುಡುತ್ತಿರುವ ಹಂದಿಗೆ ಅರಚಲು ಕೂಡ ಅವಕಾಶ ಕೊಡುವುದಿಲ್ಲ ಹಾಗೆ ಹಂದಿಗಳನ್ನು ಸಾಯಿಸಲು ಕ್ರೂರವಾದ ಪದ್ಧತಿಗಳನ್ನು ಅವಲಂಬಿಸುತ್ತಾರೆ. ಇಂತಹವರಿಗೆ ಭಗವಂತನು ಎಂತಹ ಶಿಕ್ಷೆ ಹಾಕುವನು?!




ಕೋಳಿಗಳ ವಿಷಯಕ್ಕೆ ಬಂದರೆ ಇನ್ನೂ ಸರಿ...ಆ ಕೋಳಿಗಳನ್ನು ಫಾರಂ ಗಳಿಂದ ವ್ಯಾರ್ಕೆಟ್ಗೆ ಎಷ್ಟೋ ನಿರ್ದಯೆಯಿಂದ ರವಾನೆ ಮಾಡುತ್ತಾರೆ.ಸೈಕಲ್ ಮೇಲೆ ಬೈಕುಗಳ ಮೇಲೆ ತಲೆಕೆಳಗಾಗಿ ತೂಗು ಹಾಕಿದರೆ , ಅವುಗಳ ತಲೆಗಳು ಚಕ್ರಗಳಿಗೆ ಕೂಡ ತಗಲುತ್ತಾ ಇರುತ್ತವೆ. ಪಾಪ ಅವು ಏನು ಮಾಡಲಾರವು ಮೂಕವಾಗಿ ರೋಧಿಸುತ್ತವೆ ಹೊರತು. ನಿಸಹಾಯಕವಾದ ಜೀವಿಗಳನ್ನು ಸಂತೆಯಲ್ಲಿ ಕೆಲವರು ಒಂದು ಕೈಯಿಂದ ತರಕಾರಿಗಳ ಚೀಲ... ಕೋಳಿಯ ರೆಕ್ಕೆಗಳನ್ನು ಮುರಿದು ಮತ್ತೊಂದು ಕೈಯಲ್ಲಿ ಇಟ್ಟುಕೊಳ್ಳುತ್ತಾರೆ ಅವು ಕೂಡ ಪ್ರಾಣವಿರುವ ಜೀವವಿರುವ ಜೀವಿಗಳೆಂದು ಆಲೋಚನೆ ಇರುವುದಿಲ್ಲ.ಅವುಗಳನ್ನು ಕೂಡ ತರಕಾರಿಗಳಂತೆ ಭಾವಿಸುತ್ತಾರೆ. ಇವು ಅತ್ಯಂತ ದಯನೀಯವಾದ ದೃಶ್ಯಗಳು.

ಕೋಳಿಗಳ ಅಂಗಡಿಗಳಲ್ಲಿ ಅವುಗಳನ್ನು ಕಬ್ಬಿಣದ ಗೂಡುಗಳಲ್ಲೊ, ಬುಟ್ಟಿಗಳಲ್ಲೋ ಬಂಧಿಸುತ್ತಾರೆ. ಅವು ಹಸಿವು ನೀರಡಿಕೆಯಿಂದ ಸಂಕಟಪಡುವಾಗ ಅವುಗಳ ಎದುರಲ್ಲಿಯೇ ಇತರ ಕೋಳಿಗಳನ್ನು ಒಂದೊಂದಾಗಿ ಕತ್ತರಿಸುತ್ತಾರೆ. ಹಾಗೆ ತಮ್ಮ ಸಹಚರರ ದುರ್ದೆಸೆಯನ್ನು ನೋಡುತ್ತಾ ತಮ್ಮ ಸರದಿ ಯಾವಾಗ ಬರುವುದೋ ಎಂದು ದೀನವಾಗಿ ಎದುರು ನೋಡುತ್ತಾ ಇರುತ್ತವೆ. ಅವು ಅದಕ್ಕಿಂತ ಏನು ಮಾಡಲು ಸಾಧ್ಯ

ಇಂತಹವರೆಲ್ಲ ಮನದಲ್ಲಿ ಪರಮೇಶ್ವರನೇ ದಯೆಯನ್ನು ಹುಟ್ಟಿಸಬೇಕು.

ಕಸಾಯಿ ಖಾನೆಯಿಂದ ಪ್ರಾಣಿಗಳನ್ನು ತೆಗೆದುಕೊಂಡು ಹೋಗುತ್ತಿರುವಾಗ ಏನಾಗುತ್ತಿದೆ ಎಂದು ಅವುಗಳಿಗೆ ತಿಳಿಯುತ್ತದೆ. ಮೇಕೆಗಳನ್ನು ಹಿಂದಿನ ಕಾಲುಗಳನ್ನು ಹಿಡಿದು ಬಿಸಾಡುತ್ತಾರೆ. ಕೋಲುಗಳಿಂದ ಹೊಡೆದು ಒಳಗೆ ದೂಡುತ್ತಾರೆ. ಹಾಗೆಯೇ ಹಸುಗಳನ್ನು, ಎಮ್ಮೆಗಳನ್ನು ಕೋಲ್ನಿಂದ ಹೊಡೆದು ಬಾಲವನ್ನು ತಿರುಗಿಸಿ ಮುಳ್ಳು ಕೋಲಿನಿಂದ ಚುಚ್ಚಿ ಒಳಗೆ ಎಳೆದುಕೊಂಡು ಹೋಗುತ್ತಾರೆ. ಅಷ್ಟೇ ಅಲ್ಲದೇ ಬದುಕಿರುವಾಗಲೇ ಅವುಗಳ ಮಾಂಸವನ್ನು ಕೊಯ್ಯುವ ವಿಧಾನ ಅತ್ಯಂತ ದಯನೀಯ ಹೃದಯ ವಿದ್ರಾವಕವಾಗಿ ಇರುತ್ತದೆ. ಹಾಗೆ ಅವುಗಳನ್ನು ತಲೆಕೆಳಕಾಗಿ ತೂಗುಹಾಕಿ ಬೇಕಾದ ಕಡೆ ಅವುಗಳ ಭಾಗಗಳನ್ನು ಕೊಯ್ದು ಅವುಗಳ ರಕ್ತವನ್ನು ಬಕೆಟ್ ನಲ್ಲಿ ಹಿಡಿಯುತ್ತಾರೆ. ಬದುಕಿರುವಾಗಲೇ ಅವುಗಳ ಚರ್ಮವನ್ನು ಸುಲಿಯುತ್ತಾರೆ ಅವುಗಳ ಮಾಂಸವನ್ನು ಪೀಸುಗಳಾಗಿ ಕೊಯ್ಯುತ್ತಾರೆ. ಅದು ಯಾವಾಗ ಸಾಯುತ್ತದೆ ಅದಕ್ಕೆ ತಿಳಿಯುವುದಿಲ್ಲ ಬದುಕಿರುವಾಗಲೇ ಈ ಕೆಲಸಗಳನ್ನು ಮಾಡಿದರೆ ಮಾಂಸ ರುಚಿಯಾಗಿರುತ್ತದೆ ಎಂದು ಅವರ ಉದ್ದೇಶ. ಗಮನಿಸಿದರೆ ಅವುಗಳ ಬಾಧೆ ವರ್ಣನಾತೀತ ಎಂದು ತಿಳಿಯುತ್ತದೆ. ಅವು ಹೇಳಿಕೊಳ್ಳಲಾರವು, ಏನು ಮಾಡಲಾರವು, ಮೂಕವಾಗಿ ರೋಧಿಸುವುದೇ ಹೊರತು.

ಆದರೆ ಈ ದಿನ ಅವುಗಳ ಪರಿಸ್ಥಿತಿ ಹೇಗಿದೆಯೋ ನಾಳೆ ಅವುಗಳನ್ನು ಸಾಯಿಸಿದ ಹಂತಕರ ಪರಿಸ್ಥಿತಿ ಕೂಡ ಹಾಗೆ ಇರುತ್ತದೆ. ಅವುಗಳನ್ನು ಹಾಗೆ ಸಾಯಿಸಲು ಕಾರಣರಾದವರು ಕೂಡ ನಂತರ ಅಂತಹ ನರಕವನ್ನು ಅನುಭವಿಸಲೇಬೇಕು.

ಆಲೋಚಿಸಿ ಇವೆಲ್ಲವನ್ನು ಕಣ್ಣಿನಿಂದ ನೋಡುವವರು ಎಷ್ಟು ಮಂದಿ ಮಾಂಸ ತಿನ್ನ ಬಲ್ಲರು!? ತುಂಬಾ ಜನರು ಸ್ವಯಂ ಆಗಿ, ಯಾವ ಪಕ್ಷಿಯನ್ನು ಪ್ರಾಣಿಯನ್ನು ಸಾಯಿಸಲಾರರು, ಸಾಯಿಸುತ್ತಿರುವಾಗ, ಅದನ್ನು ನೋಡಿ ತಡೆದುಕೊಳ್ಳಲು ಸಾಧ್ಯವಿಲ್ಲ. ಅಂತಹವರು ಮಾಂಸವನ್ನು ಮಾತ್ರ ಹೇಗೆ ತಿನ್ನಬಲ್ಲರು ಮಕ್ಕಳು ಮರಿಗಳು ಇರುವ ಮಹಿಳೆಯರು ಕಸಾಯಿ ಖಾನೆಗೆ ಹೋಗಿ ಪ್ರಾಣಿಗಳನ್ನು, ಹಂದಿಗಳನ್ನು ಸಾಯಿಸುವುದನ್ನು ನೋಡಬೇಕು. ಏಕೆಂದರೆ ಇತರ ಜೀವಿಗಳ ಮಕ್ಕಳ ಮೇಲೆ ಹೀಗೆ ಅತ್ಯಾಚಾರ ಮಾಡುತ್ತಿದ್ದಾರೆ ಎಂದು ಆಗ ಅವರಿಗೆ ತಿಳಿಯುತ್ತದೆ ದಯೆಯುಳ್ಳವರು ಅಂತಹ ಕೆಲಸಗಳನ್ನು ಮಾಡುವರೇ! ಪ್ರೋತ್ಸಾಹಿಸುವರೇ! ಹಿಂಸೆಗೆ ಕಾರಣರಾಗ ಬಲ್ಲರೆ?!

ಒಮ್ಮೆ ಕಸಾಯಿ ಖಾನೆಗೆ ಹೋಗಿ ಆ ಪ್ರಾಣಿಗಳ ಕಣ್ಣಿನಲ್ಲಿ ಕಣ್ಣಿಟ್ಟು ಅವುಗಳ ಭಾವಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ಅವು ದೀನತ್ವ ನಿಮಗೆ ಅರ್ಥವಾಗುತ್ತದೆ.

ಅವು ನಿಮ್ಮನ್ನು ರಕ್ಷಿಸಲು ಬೇಡಿಕೊಳ್ಳುತ್ತವೆ. ಕಾಪಾಡಿ ಎಂದು ಆರ್ಥಿಸುತ್ತವೆ. ನನ್ನ ಪರಿಸ್ಥಿತಿ ಹೀಗೆ ಆಗಿದೆ ಎಂದು ಸಂಕಟವನ್ನು ವ್ಯಕ್ತಪಡಿಸುತ್ತದೆ. ಅಂತಹ ಪರಿಸ್ಥಿತಿಗಳಲ್ಲಿ ಸ್ವಯಂ ನಾವೇ ಇದ್ದರೆ, ನಮ್ಮ ಭಾವಗಳನ್ನು ಹೇಗೆ ವ್ಯಕ್ತಪಡಿಸುತ್ತೇವೋ ಅವು ಕೂಡ ಹಾಗೆ ಆರ್ಥಿಸುತ್ತವೆ.

ಒಂದು ವಿಧವಾಗಿ ಹೇಳಬೇಕೆಂದರೆ ಅವು ನಿರ್ದೋಷಿಗಳು ಅವುಗಳು ತಮ್ಮ ಜೀವನದಲ್ಲಿ ಯಾರಿಗೂ ಅಪಕಾರ ಮಾಡಿಲ್ಲ ಏನಾದರೂ ಮಾಡಿದರೆ ಉಪಕಾರವೇ... ಅಪಕಾರ ಮಾಡಿ ದೋಷಿಗಳಾದವರಿಗೆ ಶಿಕ್ಷೆ ಹಾಕುವುದರಲ್ಲಿ ಅರ್ಥ ಇದೆ ಆದರೆ ಏನು ಅಪಕಾರ ಮಾಡದ ನಿರ್ದೋಷಿಗಳಾದ ಆ ಮೂಕ ಜೀವಿಗಳ ಮೇಲೆ ಎಷ್ಟು ಅತ್ಯಾಚಾರ ಎಷ್ಟು ಘೋರ ಶಿಕ್ಷೆ ನಿಜವಾಗಿ ಅಂತವುಗಳ ಮೇಲೆ ಅತ್ಯಾಚಾರವನ್ನು ನೋಡಿ ದಯೆ ಉಂಟಾಗದ ಹೃದಯ ನಿಜಕ್ಕೂ ಕಲ್ಲು ಬಂಡೆಯೇ!!

ಯೋಚಿಸಿ ಅಂತಃಕರಣವಿಲ್ಲದ ಹೃದಯ, ಸಹಾನುಭೂತಿ ಇಲ್ಲದವರು ಇತರರ ಬಾದೆಯನ್ನು ಹೇಗೆ ಅರ್ಥ ಮಾಡಿಕೊಳ್ಳಬಲ್ಲರು ತಮ್ಮ ಹೆಂಡತಿಯನ್ನಾಗಿ, ಗಂಡನನ್ನಾಗಲಿ, ತಂದೆಯನ್ನಾಗಲಿ, ಯಾರನ್ನಾದರೂ ಸರಿಯೇ, ಕುಟುಂಬ ಸದಸ್ಯರ ಬಾಧೆಯನ್ನು ಹೇಗೆ ಇಂತಹವರು ಅರ್ಥ ಮಾಡಿಕೊಳ್ಳಬಲ್ಲರು ಸಾಧ್ಯವಿಲ್ಲ. ಅಂತಹವರು ಒಂದು ಕುಟುಂಬದಲ್ಲಿ ಇದ್ದರೆ, ಆ ಕುಟುಂಬದಲ್ಲಿ ಸುಖ ಶಾಂತಿಗಳು ಹೇಗೆ ಇರುತ್ತದೆ.

ಭಾರತ ದೇಶದಲ್ಲಿ ಎಲ್ಲಾ ದೇಶಗಳಿಗಿಂತ ಹೆಚ್ಚಾಗಿ ಗುರುಗಳು, ಅವತಾರ ಪುರುಷರು,ಋಷಿ–ಮುನಿಗಳು ನೆಲೆಸಿದ್ದಾರೆ ಅಷ್ಟೇ ಅಲ್ಲ, ಇಲ್ಲಿ ಇರುವ ಮತಗ್ರಂಥಗಳು ವೇದ ಶಾಸ್ತ್ರಗಳು ಪುರಾಣ ಗ್ರಂಥಗಳಂತವು ಮತ್ತೆ ಇತರ ಯಾವ ದೇಶಗಳಲ್ಲು ಕೂಡ ಇರದಿರಬಹುದು. ಆದರೆ ಇಂತಹ ಭೂಮಿ ಮೇಲೆ ಇಂತಹ ಅತ್ಯಾಚಾರಗಳು ನಡೆಯುತ್ತಿದೆ ಎಂದರೆ ಆಶ್ಚರ್ಯ ಉಂಟು ಮಾಡುತ್ತದೆ.

ಮಾನವರೇ, ಆಲೋಚಿಸಿ ಪಾಪವನ್ನು ಸಂಪಾದಿಸುತ್ತಿರುವಿರಿ ಆದರೆ ಲೆಕ್ಕ ಕೊಡಬೇಕಾಗಿರುವಾಗ ನಿಮ್ಮನ್ನು ರಕ್ಷಿಸುವವರು ಯಾರು ಇರುವುದಿಲ್ಲ. ಆದ್ದರಿಂದ ಜೀವಿಗಳ ಹಿಂಸೆಗೆ ಕಾರಣವಾಗಿ ಅವುಗಳ ಮಾಂಸವನ್ನು ತಿನ್ನಬೇಡಿ. ಕಾರಣ **"ತಿನ್ನುವವನು ಇದ್ದರೆ, ಸಾಯಿಸುವವನು ಇರುತ್ತಾನೆ. ತಿನ್ನುವವನು ಇಲ್ಲದಿದ್ದರೆ ಸಾಯಿಸುವವನು ಇರುವುದಿಲ"**. ಆದ್ದರಿಂದ ತಿನ್ನುವವನೇ ಒಂದು ರೀತಿಯಲ್ಲಿ ಹಿಂಸೆಗೆ ಕಾರಣನು ಆದ್ದರಿಂದ ಮಾಂಸ ಸೇವನೆ ಬಿಡಿ ಶಾಕಾಹಾರಿಗಳಾಗಿ ಪ್ರಾಣಿಗಳ ಮೇಲೆ 'ದಯೆ' ತೋರಿ...ತಿಳಿಯಿರಿ ಹಿಂಸೆಯಲ್ಲಿ ಪಾಲ್ಗೊಳ್ಳದೆ ಇರುವವರಿಗೆ ಭೂತದಯೇ ಇದೆ ಎಂದು ಅರ್ಥ.

# ಶತ್ರುತ್ವವನ್ನು ಬಿಡಿ ಮಿತ್ರತ್ವವನ್ನು ಹೆಚ್ಚಿಸಿಕೊಳ್ಳಿ

ಒಂದು ವಿಧವಾಗಿ ವೈರತ್ವವನ್ನು ಬಿಡುವುದೇ 'ಕರುಣೆ'... ವೈರತ್ವ ಭಾವನೆಯಿಂದ ಇರುವವನು ಇತರರನ್ನು ಹಿಂಸಿಸುತ್ತಾನೆ.

ಯಾರಾದರೂ ಜೀವಿಗಳನ್ನು, ಪ್ರಾಣಿಗಳನ್ನು ಹಿಂಸಿಸುತ್ತಿದ್ದಾರೆ ಎಂದರೆ,ಅದಕ್ಕೆ ಕಾರಣ ಅವುಗಳ ಮೇಲೆ ತಮಗಿರುವ ವೈರತ್ವವೆ ಆಗಿರುತ್ತದೆ. ವೈರತ್ವ ಭಾವನೆಗೆ, ಶತೃತ್ವ ಕೂಡಾ ಕಾರಣವಾಗುತ್ತದೆ.ಉದಾಹರಣೆಗೆ ಸೊಳ್ಳೆಗಳನ್ನೆ ತೆಗೆದುಕೊಳ್ಳೋಣ ಅವು ತಮಗೆ ಹಾನಿ ಉಂಟು ಮಾಡುತ್ತಿವೆ ಎಂದು ಮಾನವರ ಅಭಿಪ್ರಾಯ... ಅವುಗಳಿಂದ ತಮಗೆ ವ್ಯಾಧಿಗಳು ಬರುತ್ತವೆ ಎನ್ನುವ ಭಾವದಿಂದ ಅವುಗಳನ್ನು ತಮ್ಮ ಶತ್ರುಗಳಾಗಿ ಭಾವಿಸಿದ ಮಾನವರು ಅವುಗಳನ್ನು ಸಾಯಿಸಲು ಮಮೂಲವಾಗಿ ನಾಶಮಾಡಲು, ನಿರ್ಮೂಲನೆ ಮಾಡಲು ವಿಧವಿಧವಾಗಿ ಪ್ರಯತ್ನಿಸುತ್ತಾ ಇರುತ್ತಾರೆ. ಹಾಗೆ ಅವುಗಳೊಂದಿಗೆ ಯಾವಾಗಲೂ ವೈರತ್ವವನ್ನೇ ಪ್ರದರ್ಶಿಸುತ್ತಾ ಇರುತ್ತಾರೆ. ಆದ್ದರಿಂದ ಅಲ್ಲಿ ಹಿಂಸೆ ಕಾಣುತ್ತವೆ.

ಹಾಗೆ ಸೊಳ್ಳೆಯನ್ನು ಮಾನವರು ಶತ್ರುವಾಗಿ ಭಾವಿಸಿದಾಗ ಆ ಸೊಳ್ಳೆಯ ಜಾತಿಯು, ಅಂದರೆ ಸೊಳ್ಳೆಗಳು ಕೂಡಾ ಮಾನವನ ಮೇಲೆ ಶತೃತ್ವವನ್ನು ಪ್ರದರ್ಶಿಸುತ್ತದೆ. ಹಾಗೂ ಮಾನವರನ್ನು ಬಾಧಿಸಲು ಪ್ರಯತ್ನಿಸುತ್ತದೆ.

ಮಾನವರ ಮಧ್ಯೆ ಹಿಂಸೆ ನಡೆಯಲು ಕಾರಣ ಕೂಡ ವೈರತ್ವವೆ ಅಂದರೆ ಶತೃತ್ವದಿಂದಲೇ ಹಾಗೆ "ಹಿಂಸೆಗೆ ಪ್ರತಿಯಾಗಿ ಹಿಂಸೆ" ಪರಿಷ್ಕಾರವೆನ್ನುವಂತೆ ಮಾನವರು ಭಾವಿಸುತ್ತಿದ್ದಾರೆ. ಉಗ್ರವಾದಕ್ಕೆ ಕಾರಣ ಇದೆ ಆದರೆ ವೈರತ್ವದಿಂದ ಹಿಂಸೆ ಮುಂದುವರೆಯುತ್ತಾ ಇರುತ್ತದೆ. ಹಿಂಸೆಗೆ ಅಂತ್ಯ ಎನ್ನುವುದು ಇರುವುದಿಲ್ಲ.

ತಿಳಿದುಕೊಳ್ಳಿ **ಹಿಂಸೆ ವೈರತ್ವವನ್ನು ಹೆಚ್ಚಿಸುತ್ತದೆ. ಅಹಿಂಸೆ ಮಿತ್ರತ್ವವನ್ನು ಹೆಚ್ಚಿಸುತ್ತದೆ "ಹಿಂಸೆ, ವೈರತ್ವವು ಶತ್ರುಗಳನ್ನು ತಯಾರಿಸುತ್ತದೆ"... "ಕರುಣೆ, ದಯೆ, ಅಹಿಂಸೆ, ಮಿತ್ರರನ್ನು ತಯಾರಿಸುತ್ತದೆ"** ಯಾವಾಗಲಾದರೂ, ಯಾರಿಗಾದರೂ ಶತ್ರುಗಳಿಂದಲೇ ಪ್ರಮಾದವಾಗುವುದೇ ಹೊರತು ಮಿತ್ರರಿಂದಲ್ಲ. ಶತ್ರುಗಳ ಬಗ್ಗೆ ಅಕ್ರಮ ಅಪ್ರಮತ್ತರಾಗಿ ಇರಬೇಕು,ಮಿತ್ರರ ಮೇಲೆ ಅಲ್ಲ.ಸುತ್ತಲೂ ಶತ್ರುಗಳು ಇದ್ದರೆ ಭಯದಿಂದ ಜೀವಿಸಬೇಕು ಆದರೆ ಸುತ್ತಲೂ ಮಿತ್ರರು ಇದ್ದರೆ ಸುಲಭವಾಗಿ ನಿರ್ವಹಿಸಬಹುದು. ಆದ್ದರಿಂದ **"ಶತ್ರುಗಳನ್ನು ಹೆಚ್ಚಿಸುವ ಹಿಂಸೆ ಬಿಡಬೇಕು ಮಿತ್ರರನ್ನು ಹೆಚ್ಚಿಸುವ ಅಹಿಂಸೆಯನ್ನು ಹಿಡಿದುಕೊಳ್ಳಬೇಕು."** ಅದು ಮಾನವರ ವಿಷಯದಲ್ಲಾಗಲಿ, ಪ್ರಾಣಿಗಳ ವಿಷಯದಲ್ಲಾಗಲಿ ಅನ್ವಯಿಸುತ್ತದೆ, ಹಿಂಸೆಯನ್ನು ಆಶಯಿಸಬಾರದು, ಅಹಿಂಸೆಯನ್ನು

ಆಶಯಿಸಬೇಕು. ಪ್ರಕೃತಿ ಎಂದರೇನು? ಎನ್ನುವುದನ್ನು ತಿಳಿದುಕೊಳ್ಳಬೇಕು. ತಾನು ಕೂಡ ಎಲ್ಲಾ ಜೀವಿಗಳಂತೆ ಪ್ರಕೃತಿಯ ಭಾಗವೇ ಎಂದು ತಿಳಿದುಕೊಳ್ಳಬೇಕು.

ತುಂಬಾ ಜನರು ಕೃಷಿ ಭೂಮಿಯಲ್ಲಿ ಕೀಟನಾಶಕಗಳನ್ನು, ವಿಷಭರಿತ ರಾಸಾಯನಿಕಗಳನ್ನು ಸಿಂಪಡಿಸುತ್ತಾ ಇರುತ್ತಾರೆ. ತಮ್ಮ ಹೊಲದಲ್ಲಿ ಏನೂ ಇಲ್ಲದಿದ್ದರೂ ಮುಂಜಾಗ್ರತಾ ಕ್ರಮವಾಗಿ ಆದರೂ ಅವುಗಳನ್ನು ಚೆಲ್ಲುತ್ತಾ ಇರುತ್ತಾರೆ. ಅಲ್ಲಿ ಇರುವ ಅಲ್ಪ ಸ್ವಲ್ಪ ಕ್ರಿಮಿಕೀಟಗಳನ್ನು, ಹುಳುಗಳನ್ನು ಸಾಯಿಸುತ್ತಾರೆ,ಹಾಗೆ ಮಾಡಿದಾಗ ಆ ಕೀಟ ಜಾತಿಯ ಕೋಪಕ್ಕೆ ಗುರಿಯಾಗುತ್ತಾರೆ. ಶೀಘ್ರದಲ್ಲೇ ಆ ಕ್ರಿಮಿಕೀಟ ಹುಳು ಹುಪ್ಪಟೆಯ ಗುಂಪು ಒಂದು ಗೂಡುತ್ತದೆ. ಹಾಗೂ ಅವರ ಬೆಳೆ ನಾಶಪಡಿಸಲು ಪ್ರಯತ್ನಿಸುತ್ತದೆ. ಅಗ ರೈತರು ತಮ್ಮ ಬೆಳೆಗಳ ಮೇಲೆ ಯುದ್ಧವನ್ನು ಘೋಷಿಸಿದಂತೆ ಹೆಚ್ಚು ಹೆಚ್ಚು ವಿಷವನ್ನು ಸಿಂಪಡಿಸಿ ಹುಳುಗಳನ್ನು ಸಾಯಿಸಿದರ ಪರಿಣಾಮವಾಗಿ ಕೊನೆಗೆ ಅವರ ಆಹಾರವೂ ವಿಷವಾಗುತ್ತದೆ. ಅದನ್ನು ತಿಂದರೆ ಕಾಯಿಲೆಗಳು ಬರುತ್ತವೆ. ಆ ಬೆಳೆಯಿಂದ ಬಂದ ಹಣವನ್ನೆಲ್ಲ ರೋಗ ರುಜಿನಗಳಿಗೆ ಖರ್ಚು ಮಾಡುತ್ತಾರೆ. ಕೊನೆಗೆ ಎಷ್ಟೇ ಬೆಳೆ ತೆಗೆದರು , ಎಷ್ಟೇ ಹಣ ಸಿಕ್ಕರೂ ನಷ್ಟವಾಗುತ್ತದೆ. ಅವರು ಕಷ್ಟಗಳ ಪಾಲಾಗುತ್ತಿದ್ದಾರೆ. ಇವುಗಳೆಲ್ಲಕ್ಕೂ ಕಾರಣ ಹಿಂಸೆ , ಏಕೆಂದರೆ ಆ ಜೀವಿಯ ಮೇಲೆ ವೈರತ್ವದ ಸ್ವಭಾವವು ಇರುವುದರಿಂದಲೇ ಕರುಣೆ ಇಲ್ಲದಿರುವುದರಿಂದಲೆ !

ಯಾರಾದರೂ ಸರಿ ಆ ಜೀವಿಗಳಿಗೆ ಮಿತ್ರ ಭಾವನೆಯಿಂದ ದಯೆಯನ್ನು ತೋರಿಸಿ ಹಿಂಸಿಸದೆ ಅಥವಾ ಕೊಲ್ಲದೆ ಪ್ರೀತಿಸಿದರೆ, ಅವುಗಳು ಕೂಡಾ ಆತನಿಗೆ ಮಿತ್ರರಾಗುತ್ತಾರೆ. ಮತ್ತು ಅವನಿಗೆ ಯಾವ ಹಾನಿ ಮಾಡುವುದಿಲ್ಲ. ಪ್ರಕೃತಿಯ ಭಾಗವಾಗಿರುವ ವಸ್ತುಗಳಿಗೆ ಕಿರುಕುಳ ನೀಡದಿದ್ದರೆ ಪ್ರಕೃತಿಯು ಸಹಕರಿಸುತ್ತದೆ, ಹವಾಮಾನವು ಅನುಕೂಲಕರವಾಗಿ ಬದಲಾಗಿ, ಹೇರಳವಾಗಿ ಬೆಳೆಗಳನ್ನು ಬೆಳೆಯಬಹುದು. ಸ್ನೇಹಿತ ಎಂದಿಗೂ ಹಾನಿ ಮಾಡುವುದಿಲ್ಲ ಎನ್ನುವುದನ್ನು ಅವುಗಳು ಸ್ಪಷ್ಟವಾಗಿ ತೋರಿಸುತ್ತವೆ. ಕಡಿಮೆ ವೆಚ್ಚದಲ್ಲಿ ನೀವು ಹೆಚ್ಚಿನ ಇಳುವರಿಯನ್ನು ಪಡೆಯಬಹುದು. ವಿಷಮುಕ್ತ ಆಹಾರ ಸೇವನೆಯಿಂದ ಆರೋಗ್ಯವಂತರಾಗಿ ಬದುಕಬಹುದು. ಔಷಧಿಗಳು ಮತ್ತು ರೋಗಗಳಿಗೆ ಯಾವುದೇ ವೆಚ್ಚವಿಲ್ಲ. ಸಂತೋಷವಾಗಿರಬಹುದು. ಆದುದರಿಂದ ಸಕಲ ಜೀವಿಗಳ ಬಗೆಗಿನ ದ್ವೇಷವನ್ನು ತೊರೆಯಿರಿ. ಹಿಂಸೆ ತಪ್ಪಿಸಿ. ಸ್ನೇಹವನ್ನು ಬೆಳೆಸಿಕೊಳ್ಳಿ. ಎಲ್ಲಾ ಪ್ರಾಣಿಗಳೊಂದಿಗೆ ಸ್ನೇಹದಿಂದಿರಿ, ಕರುಣೆ ತೋರಿಸಿ.

"ಹಿಮಾಲಯ ಗುರುಗಳೊಂದಿಗೆ ಸಹಜೀವನ" ಎನ್ನುವ ಪುಸ್ತಕವನ್ನು ಬರೆದಿರುವ ಸ್ವಾಮಿರಾಮ ಕೂಡಾ . "ಎಲ್ಲಾ ಜೀವಿಗಳನ್ನು ನಾವು ಪ್ರೇಮಿಸಿದಾಗ ಅವರೊಂದಿಗೆ ಮಿತ್ರತ್ವವನ್ನು ಮಾಡಿದಾಗ ಅವು ಯಾರಿಗೂ ಎಂತಹ ಅಪಕಾರವನ್ನು ಮಾಡುವುದಿಲ್ಲ ಮೇಲಾಗಿ ಎಷ್ಟೋ ಉಪಕಾರ ಮಾಡುತ್ತವೆ ಸ್ನೇಹ ಭಾವ ತೋರುತ್ತದೆ" ಎಂದು ತಿಳಿಸಿದ್ದಾರೆ.

ಇದೇ ವಿಷಯ "ರಾಮತೀರ್ಥ ವೇದಾಂತ ಬಾಷ್ಯಂ " ಎನ್ನುವ ಪುಸ್ತಕದಲ್ಲಿ ಸ್ವಾಮಿ ರಾಮತೀರ್ಥ ರವರು ಕೂಡ ತಿಳಿಸಿದ್ದಾರೆ. ಪ್ರಾಣಿಗಳೊಂದಿಗೆ ಸ್ನೇಹವಾಗಿರುವುದರಿಂದ ಕ್ರೂರ ಮೃಗಗಳು ಕೂಡ ಅವರಿಗೆ ಹಾನಿ ಮಾಡಲಾರವು ಅವರೊಂದಿಗೆ ಸ್ನೇಹವಾಗಿಯೇ ಇರುತ್ತದೆ ಎಂದು ಹೇಳಿದ್ದಾರೆ.

ಹಾಗೆ ದತ್ತಾತ್ರೇಯ ಸ್ವಾಮಿ ಸುತ್ತಲೂ ಪ್ರಾಣಿಗಳು ಇರುತ್ತವೆ ಸ್ನೇಹದಿಂದ ವರ್ತಿಸುತ್ತಾ ಇರುತ್ತವೆ ಆತನ ಫೋಟೋದಲ್ಲಿ ಮಾನವರು ಕಾಣಿಸುವುದಿಲ್ಲ... ಪ್ರಾಣಿಗಳೇ ಇರುವುದಕ್ಕೆ ಕಾರಣ ಆತ ಎಲ್ಲಾ ಪ್ರಾಣಿ ಜಾತಿಗಳನ್ನು ಪ್ರೇಮಿಸಿ ಎಂದು ಹೇಳುತ್ತಾರೆ, ಮಿತ್ರರಾಗಿ ಇರಿ, ಸ್ನೇಹರಾಗಿ ಇರಿ ಎಂದು ಹೇಳುವದಕ್ಕೆ ಸೂಚಕವಾಗಿಯೇ, ಶಿವನ ಶರೀರಕ್ಕೆ ಹಾವುಗಳು ಸುತ್ತುವರೆದಿರುವುದನ್ನು ನಾವು ನೋಡುತ್ತೇವೆ! ಜೀಸಸ್‌ರ ಕೈಯ್ಯಲ್ಲಿ ಕುರಿ ಮರಿ ಮೃದುವಾಗಿ ಲಾಲಿಸಲ್ಪಡುತ್ತಿರುತ್ತದೆ. ಆತನು ಕುರಿ ಕಾಯುವವನು, ಕಾವಲುಗಾರ ಎಂದು ಹೇಳುತ್ತಾರೆ. ಕಾರಣ ಆತ ಎಲ್ಲಾ ಜೀವಿಗಳನ್ನು ಪ್ರಾಣಿಗಳನ್ನು ರಕ್ಷಿಸುವವನು ಎಂದು ಅರ್ಥ.

ಹಾಗೆ ಯಾವ ಮಹಾನುಭಾವರನ್ನು ನೋಡಿದರು, ಮಹಾತ್ಮರನ್ನು ನೋಡಿದರೂ ಎಲ್ಲರೂ ಎಲ್ಲಾ ಪ್ರಾಣಿಗಳೊಂದಿಗೆ ಸ್ನೇಹದಿಂದ ಇರುವವರೇ ಎಲ್ಲವನ್ನು ಪ್ರೇಮಿಸಿದವರೇ ಆದ್ದರಿಂದ ನಾವು ಕೂಡ ಎಲ್ಲರೊಂದಿಗೆ, ಎಲ್ಲಾ ಜೀವಿಗಳೊಂದಿಗೆ ಸ್ನೇಹದಿಂದ ಇರುತ್ತಾ, ಮಿತ್ರತ್ವವನ್ನು ಬೆಳೆಸಿಕೊಳ್ಳೋಣ. ಶತೃತ್ವವನ್ನು ಬಿಡೋಣ ಆಗಲೇ ಮಿತ್ರತ್ವದಲ್ಲಿನ ಹಿರಿಮೆಯನ್ನು ನೋಡಲು ಸಾಧ್ಯ.

ಹಾಗೆ ಜೀವಿಸಬೇಕೆಂದರೆ "ಆತ್ಮಜ್ಞಾನವೂ" ಬೇಕೇ ಬೇಕು..ಆತ್ಮಜ್ಞಾನ ಉಂಟಾಗಬೇಕೆಂದರೆ ಧ್ಯಾನ ಮಾಡಬೇಕು ಧ್ಯಾನ ಮಾಡುವವರು ಹಿಂಸೆ ಮಾಡುವುದಿಲ್ಲ ವೈರತ್ವವನ್ನು ಬಿಡುತ್ತಾರೆ ಮಿತ್ರತ್ವವನ್ನು ಹೆಚ್ಚಿಸಿಕೊಳ್ಳುತ್ತಾರೆ. ದಯಾ ಪರರಾಗಿ ಇರುತ್ತಾರೆ ಅಹಿಂಸಾ ಮಾರ್ಗವನ್ನು ಸ್ವೀಕರಿಸುತ್ತಾರೆ. ಆನಂದವಾಗಿ ಜೀವಿಸುತ್ತಾರೆ.

ಕೊನೆಯದಾಗಿ ತಿಳಿದುಕೊಳ್ಳಿ **"ಸೃಷ್ಟಿಯಲ್ಲಿ ಯಾವ ಜಾತಿಗೂ ಮಾನವನು ಹಾನಿ ಮಾಡದಿದ್ದರೆ ಸೃಷ್ಟಿಯಲ್ಲಿನ ಯಾವ ಜೀವ ಜಾತಿಯಿಂದಲೂ ಮಾನವನಿಗೆ ಹಾನಿ ನಡೆಯುವುದಿಲ್ಲ"**. ಮೇಲಾಗಿ ಉಪಕಾರ ವಾಗುತ್ತದೆ ಎಂದು ಶಾಸ್ತ್ರಗಳಲ್ಲಿಯೇ ಇದೆ ಅಲ್ಲವೇ, ಆದ್ದರಿಂದ ಶತ್ರುತ್ವವನ್ನು ಬಿಟ್ಟು ಮಿತ್ರತ್ವವನ್ನು ಹೆಚ್ಚಿಸಿಕೊಳ್ಳಬೇಕು ಜೀವಿಗಳ ಮೇಲೆ ದಯೆ ಉಳ್ಳವರಾಗಿರಬೇಕು ಧ್ಯಾನ ಮಾಡಿದರೆ ಈ ಸತ್ಯಗಳನ್ನು ತಿಳಿಯಲು ಸಾಧ್ಯ.

**"ದಯೆಯುಳ್ಳ ಪುರುಷನು ಮಾತ್ರ ಧರ್ಮಾತ್ಮನಾಗಬಲ್ಲನು"**

# ಎಲ್ಲರಿಗೂ ನ್ಯಾಯ ಒಂದೇ

ಸೃಷ್ಟಿಯಲ್ಲಿ "ನ್ಯಾಯ" ಎನ್ನುವುದು ಎಲ್ಲರಿಗೂ ಸಮಾನ ಈ ವಿಷಯ ಮಾನವರು ನೆನಪಿಟ್ಟುಕೊಳ್ಳಬೇಕು. ಉದಾಹರಣೆಗೆ ಒಂದು ಸೊಳ್ಳೆ ಕಡಿದಾಗ ಉಂಟಾದ ಸ್ವಲ್ಪ ಹಿಂಸೆಗೆ ಮಾನವನು ಸೊಳ್ಳೆಯನ್ನು ಹೊಡೆದು, ಸಾಯಿಸಿ ತನ್ನ ಕೋಪವನ್ನು ತೀರಿಸಿಕೊಳ್ಳುತ್ತಿದ್ದಾನೆ. ಹಾಗೆ ಅಲ್ಲವೇ ಹಾಗೆ ಸಾಯಿಸಿದಕ್ಕೆ, ಸೊಳ್ಳೆಗಳಿಗೂ ಮಾನವನನ್ನು ಸಾಯಿಸಬಲ್ಲ ಸಾಮರ್ಥ್ಯ ಶಕ್ತಿ ಇದ್ದಿದ್ದರೆ ಅಸಲು ಭೂಮಿಯ ಮೇಲೆ ಮಾನವ ಜಾತಿ ಇರುವುದೇ!?



**ನಾವು ಸ್ವಲ್ಪ ಕಡಿದರೆನೆ ಸಹಿಸದ ಮಾನವರು ನಮಗೆ ಮರಣದಂಡನೆ ವಿದಿಸುತ್ತಾರೆ. ಆದರೆ ಪ್ರಾಣಿಗಳನ್ನು ಸಾಯಿಸುತ್ತಿರುವ ಈ ಮಾನವರಿಗೆ ಯಾವ ಶಿಕ್ಷೆ ನೀಡಬೇಕು?**

ಮಾನವನಿಗೆ ಬುದ್ಧಿವಂತಿಕೆ ಇದೆ ಆದ್ದರಿಂದ ಕಾನೂನನ್ನು ತನ್ನ ಕೈಯೊಳಗೆ ತೆಗೆದುಕೊಳ್ಳುತ್ತಿದ್ದಾನೆ ಅವುಗಳ ಪರಿಸ್ಥಿತಿ ಏನು? ಇವುಗಳಿಗೆ ನ್ಯಾಯವನ್ನು ಯಾರು ಕೊಡುತ್ತಾರೆ!? ಎಂದರೆ, ಸೃಷ್ಟಿಯಲ್ಲಿ ಯಾವಾಗಲೂ ಅಲ್ಪರಿಗೆ, ಬಲಹೀನರಿಗೆ ಭಗವಂತನು ನ್ಯಾಯವನ್ನು ದೊರಕಿಸಿ ಕೊಡುತ್ತಾನೆ.

ನಾವು ಆಗಾಗ ಅಂದುಕೊಳ್ಳುತ್ತೇವೆ, ಯಾರಿಂದಲಾದರೂ ಅನ್ಯಾಯ ನಡೆದರೇ ಅವರನ್ನು ಏನೂ ಮಾಡಲಾಗದೆ ಹೋದರೆ,ಭಗವಂತನೇ ಶಿಕ್ಷಿಸುತ್ತಾನೆ ಎಂದು.. ಶಿಕ್ಷಿಸಲೇ ಬೇಕೆಂದುಕೊಳ್ಳುತ್ತೇವೆ ಅಲ್ಲವೇ,ಹಾಗಾದರೆ ಮೂಕ ಜೀವಿಗಳು ತಮಗೆ ಅನ್ಯಾಯ ನಡೆದಾಗ ಭಗವಂತನನ್ನು ಕೋರುವುದಿಲ್ಲವೇ ಭಗವಂತನು ಅವಗಳಿಗೆ ನ್ಯಾಯ ಮಾಡುವುದಿಲ್ಲವೇ!?

ಖಂಡಿತವಾಗಿಯೂ ಮಾಡುತ್ತಾನೆ. **"ಸೃಷ್ಟಿಯಲ್ಲಿ ನ್ಯಾಯ ಎನ್ನುವುದು ಎಲ್ಲರಿಗೂ ಸಮಾನ"**. ಭಗವಂತನಿಗೆ ರಾಗ ದ್ವೇಷಗಳಿಲ್ಲ ಆತನಿಗೆ ಎಲ್ಲರೂ ಸಮಾನರೆ. ಎಲ್ಲ ಜಾತಿಗಳು ಆತನಿಗೆ ಒಂದೇ ಆಗಿದೆ. ಕಾರಣ ಎಲ್ಲಾ ಆತನಿಂದ ಸೃಷ್ಟಿಸಲ್ಪಟ್ಟಿದೆ. ಅವನಿಂದಲೇ ಏರ್ಪಡಿಸಲ್ಪಟ್ಟ ಧರ್ಮ ಸೂಕ್ಷ್ಮಗಳ ಪ್ರಕಾರವೇ ಸೃಷ್ಟಿ ನಡೆಯುತ್ತಿದೆ. ಭಗವಂತನ ಧರ್ಮ ಸೂಕ್ಷ್ಮಗಳಿಗೆ ವಿರುದ್ಧವಾಗಿ ಯಾರು ಪ್ರವರ್ತಿಸಿದರು ಶಿಕ್ಷೆಗೆ ಗುರಿ ಆಗಬೇಕು. ಕಷ್ಟಗಳ ಪಾಲು ಆಗಲೇಬೇಕು.

ಈ ವಿಷಯ ಮಾನವನು ನೆನಪಿನಲ್ಲಿಟ್ಟುಕೊಳ್ಳಬೇಕು. ತನಗೆ ಅಲ್ಲ, ಎಲ್ಲರಿಗೂ ಒಂದೇ ನ್ಯಾಯವಿದೆ, ಭಗವಂತನ ಸೃಷ್ಟಿಯಲ್ಲಿ ಬಲವಂತರಿಗೆ, ಬಲಹೀನರಿಗೆ, ಮೇಧಾವಿಗಳಿಗೆ, ಮೇಧಾವಿಗಳಲ್ಲದವರಿಗೆ "ಎಲ್ಲರಿಗೂ ಒಂದೇ ನ್ಯಾಯ" ಆದ್ದರಿಂದ ಈ ವಿಷಯವನ್ನು ಗ್ರಹಿಸಬೇಕು.ಹಿಂಸೆ ಮಾಡಬಾರದು ಎಲ್ಲದನ್ನು ಪ್ರೇಮಿಸಬೇಕು ತನಗೆ ಆಗುವ ನೋವು ಎಂತಹದು ಎಲ್ಲರ ನೋವು ಅಂತಹುದೇ ಎಂದು ತಿಳಿದುಕೊಳ್ಳಬೇಕು. ಇದೇ ವಿಷಯವನ್ನು ಗೀತೆಯಲ್ಲಿ ಕೂಡ ಹೇಳಲಾಗಿದೆ.

**ಮತ್ತೊಂದು ಶರೀರಕ್ಕೆ ಪ್ರಾಣ ನೀಡುವ ಶಕ್ತಿ ಇಲ್ಲದವನು ಬೇರೆ ಶರೀರದಿಂದ ಪ್ರಾಣಗಳನ್ನು ತೆಗೆಯಲು ಪಾಲ್ಗೊಳ್ಳುವುದರಲ್ಲಿ ನ್ಯಾಯ ಎಲ್ಲಿದೆ?! ----ತಿರುಮೂಲರ್**



**ಶ್ಲೋಕ ॥ ಆತ್ಮಾಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋ ಜ಼ುನ!**

**ಸುಖಂ ವಾಯದಿ ವಾ ದುಃಖ ಸಯೋಗಿ ಪರಮೋ ಮತಃ (ಭ. ಗೀ.6–32)**

ತಾ :– ಓ ಅರ್ಜುನ ಯಾರು ಸಮಸ್ತ ಭೂತಗಳ ಒಂದು ಸುಖ ದುಃಖಗಳು ತನ್ನ ಸುಖ ದುಃಖಗಳನ್ನಾಗಿ ನೋಡುವನೋ, ಅವನೇ ಎಲ್ಲರಿಗಿಂತ ನನಗೆ ಹೆಚ್ಚು ಪ್ರಿಯನಾದವನು. ಇದು ನನ್ನ ನಿಶ್ಚಿತ ಅಭಿಪ್ರಾಯ ಎಂದು ಶ್ರೀ ಕೃಷ್ಣ ಭಗವಾನನು ಹೇಳಿದ್ದಾನೆ.

ಅಂದರೆ ತನ್ನ ಶರೀರಕ್ಕೆ ಉಂಟಾದ ನೋವು ಎಷ್ಟು ಕಷ್ಟವಾಗಿ ಇರುವುದು ಹಾಗೆಯೇ ಸಮಸ್ತ ಜೀವಿಗಳ ಒಂದು ಬಾಧೆಯು ಸಹ ಅವುಗಳಿಗೆ ಅಷ್ಟು ಕಷ್ಟವಾಗಿರುತ್ತದೆ. ಎಂದು ತಿಳಿದುಕೊಳ್ಳಬೇಕು, ಹಿಂಸೆ ಮಾಡಬಾರದು, ಮಾಂಸ ಭಕ್ಷಣೆ ಬಿಡಬೇಕು.ಎಲ್ಲವನ್ನು ಪ್ರೇಮಿಸಬೇಕು, ಎಲ್ಲರೊಂದಿಗೆ ಸ್ನೇಹಪೂರ್ವಕವಾಗಿ ಜೀವಿಸಬೇಕು, ಎಲ್ಲಾ ಪ್ರಾಣಿಗಳ ಮೇಲೆ ದಯೆ ತೋರಿಸಬೇಕು ಕಾರಣ ಎಲ್ಲರೂ, ಎಲ್ಲಾ ಜೀವಿಗಳು ಒಂದೇ ಎಲ್ಲಾ ಭಗವಂತನ ರೂಪಗಳೇ ಅಲ್ಲವೇ. ಇದು ಸತ್ಯ ಇದೇ ಸೃಷ್ಟಿ ರಹಸ್ಯ. ಅದಕ್ಕೆ "**ಸರ್ವಂ ಖಲ್ವಿದಂ ಬ್ರಹ್ಮ**" ಎಂದಿದ್ದಾರೆ.

ಕೆಲವರು "ನಾವು ಅವುಗಳನ್ನು ಸಾಯಿಸದಿದ್ದರೆ ಅವು ನಮ್ಮನ್ನು ಕಚ್ಚಿ ಬಾಧಿಸುವುದಿಲ್ಲವೇ" ಎಂದು ಹೇಳುತ್ತಾರೆ ಆದರೆ ನೆನಪಿರಲಿ **"ಈ ಭಗವಂತನ ಸೃಷ್ಟಿಯಲ್ಲಿ ನಾವು ಯಾವ ಜೀವಿಗೂ ಯಾರಿಗೂ ಹಾನಿ ಮಾಡದಿದ್ದರೆ**

**ಯಾರಿಂದಲೂ ನಮಗೆ ಹಾನಿ ನಡೆಯುವುದಿಲ್ಲ" ಅಂದರೆ "ನಾವು ಯಾರ, ಯಾವುದರ ತಂಟೆಗೆ ಹೋಗದಿದ್ದರೆ ಯಾರೂ,ಯಾವುದು ನಮ್ಮ ತಂಟೆಗೆ ಬರುವುದಿಲ್ಲ".**

ಅದಕ್ಕೆ ಋಷಿಗಳು, ಮಹರ್ಷಿಗಳು ಅರಣ್ಯಗಳಲ್ಲಿ, ಬೆಟ್ಟಗಳಲ್ಲಿ ತಪಸ್ಸು, ಧ್ಯಾನ ಸಾಧನೆಗಳು ಮಾಡುತ್ತಿರುವಾಗ, ಯಾವ ಕ್ರೂರ ಪ್ರಾಣಿ, ಕ್ರೂರ ಮೃಗವು ಅವರಿಗೆ ಹಾನಿ ಮಾಡುತ್ತಿರಲಿಲ್ಲ. ಕಾರಣ ಅವರು ಅವುಗಳಿಗೆ ಯಾವ ಹಾನಿ ಮಾಡಿರಲಿಲ್ಲ ಮೇಲಾಗಿ ಅವುಗಳೊಂದಿಗೆ ಸ್ನೇಹದಿಂದ ಇರುತ್ತಿದ್ದರು.

ಹಾಗೆಯೇ ಕೆಲವರು ಋಷಿಗಳು, ಮಹಾ ಪುರುಷರು ಗುಹೆಗಳಲ್ಲಿ, ಮರದ ಬುಡಗಳಲ್ಲಿ ಸಾಧನೆ ಮಾಡುತ್ತಿದ್ದರು. ಅವರಿಗೆ ನಮ್ಮಂತೆ ಫ್ಯಾನ್,ಆಲ್ ಔಟ್, ಮಸ್ಕಿಟೋ ಕಾಯಿಲ್ ಇರುತ್ತಿರಲಿಲ್ಲ. ಸೊಳ್ಳೆಗಳು ಅವರಿಗೆ ಹಾನಿ ಮಾಡಿದ್ದರೆ, ಕಚ್ಚಿದರೆ ಅವರು ಬದುಕುತ್ತಿದ್ದರೆ? ಹಾಗೆ ಸಾಧನೆ ಮಾಡಲು ಆಗುತ್ತಿತ್ತೆ !?

ವಿಷ ಜಂತುವಾದರೂ, ಕೊನೆಗೆ ಹಾವಾದರೂ ಸರಿಯೇ ನೀವೇನು ಹಾನಿ ಮಾಡದಿದ್ದರೆ, ಅದು ನಿಮ್ಮ ತಂಟೆಗೆ ಬರುವುದಿಲ್ಲ. ಬಂದರು ಏನು ಮಾಡುವುದಿಲ್ಲ. ಸಹಜವಾಗಿ ಪ್ರಾಣಿಗಳಿಗೆ ಮಾನವನು ಎದುರಾದಾಗ,ಅವು ಮಾನವನ ಕಣ್ಣಿನಲ್ಲಿ ಕಣ್ಣಿಟ್ಟು ನೋಡುತ್ತವೆ. ಕಾರಣ ಮಾನವರ ಭಾವವನ್ನು ತಿಳಿದುಕೊಳ್ಳಬಲ್ಲ ಶಕ್ತಿ ಅವುಗಳಿಗೆ ಇದೆ. ಮಾನವರಾದ್ದರಿಂದ ಅವುಗಳಿಗೆ ಹಾನಿ ಮಾಡುವ ಉದ್ದೇಶದಿಂದ ಇದ್ದರೆ,ಮಾನವನಿಗಿಂತ ಮುಂಚೆ ಅವು ದಾಳಿ ಮಾಡುತ್ತವೆ. ಸಹಜವಾಗಿ ಅವು ಓಡಿ ಹೋಗಲು ಪ್ರಯತ್ನಿಸುತ್ತವೆ, ಆದರೆ ತೀರಾ ಅನಿವಾರ್ಯವಾದಾಗ , ಸುರಕ್ಷತೆ ಇಲ್ಲ ಎನಿಸಿದಾಗ ದಾಳಿ ಮಾಡುತ್ತವೆ.

ಸಹಜವಾಗಿ ಮಾನವರು ಯಾವುದನ್ನು ನೋಡಿದರೂ ಅದು ಇವರಿಗೆ ಹಾನಿ ಮಾಡುವುದೇನೋ ಎನ್ನುವ ಭಯದಿಂದಲೇ ಏನೋ ಒಂದು ಮಾಡಬೇಕೆಂದು ನೋಡುತ್ತಾರೆ. ಅಂತಹ ಭಾವ ಮಾನವನಲ್ಲಿ ಏರ್ಪಡಿಸಿದ ಕೂಡಲೇ ಆ ಪ್ರಾಣಿಗಳು ದಾಳಿ ಮಾಡುವವು.

ಆದ್ದರಿಂದ ಹಾನಿ ಉಂಟು ಮಾಡುವ ಭಾವ ನಿಮ್ಮಿಂದ ತೆಗೆದುಹಾಕಿ, ಎಲ್ಲವನ್ನು ಪ್ರೇಮಿಸಿ ಸ್ನೇಹ ಭಾವದಿಂದ ಇರಿ ಹಾಗೆ ಭಾವಿಸಿ ಅವು ಕೂಡ ನಿಮಗೆ ಮಿತ್ರರಾಗುತ್ತದೆ. ಈ ಸತ್ಯವನ್ನು ನೀವೂ ತಿಳಿಯಬೇಕೆಂದರೆ, ಅನುಭವಿಸಬೇಕೆಂದರೆ,ಧ್ಯಾನ ಮಾಡಲೇಬೇಕು.

# ವಿನೋದಗಳು- ಆಚರಣೆಗಳು ಹೇಗಿರಬೇಕು?

ಆಲೋಚಿಸಿ ಯಾರಾದರೂ ವಿವಾಹ, ಗೃಹಪ್ರವೇಶದಂತಹ ಶುಭಕಾರ್ಯ, ಪಾರ್ಟಿಯಂತಹ ವಿನೋದ ಕಾರ್ಯಕ್ರಮ, ಹುಟ್ಟಿನ ದಿನದ ಸಂಭ್ರಮ,ಮದುವೆಯ ದಿನದಂತಹ ಆಚರಣೆಗಳನ್ನು ಮಾಡುವಾಗ,ಯಾವದೇ ವಿಧವಾದ ಅಶುಭ ನಡೆದರೆ,ಅಂದರೆ ಯಾರಾದರೂ ಮರಣಿಸಿದರೆ,ಯಾರಿಗಾದರೂ ಅಪಘಾತವಾದರೆ, ಅಂದುಕೊಳ್ಳದಂತೆ ಎದೆ ನೋವಿನಂತಹ ತೀವ್ರ ಅಸ್ವಸ್ಥತೆ ಉಂಟಾದಾಗ ಕೂಡಲೇ ಆ ಕಾರ್ಯಕ್ರಮ ನಿಲ್ಲಿಸುತ್ತಾರೆ. ಆಚರಣೆಯನ್ನು ಮಾಡುವುದಿಲ್ಲ ಎಲ್ಲರೂ ವಿಷಾದದಲ್ಲಿ, ಅದೇ ವಿಚಾರದಲ್ಲಿ ಮುಳುಗುತ್ತಾರೆ.

ಅಂತಹ ಸಂದರ್ಭಗಳಲ್ಲಿ ಯಾರಾದರೂ ಹಾಸ್ಯ ಮಾಡಿದರೆ,ಕುಣಿದರೆ ಕೂಡಲೇ ಉಳಿದವರು ಹಿರಿಯರು ಬುದ್ಧಿ ಇಲ್ಲವೇ ಎನ್ನುತ್ತಾ, ಬೈಯುತ್ತಾರೆ ಹಾಗೆ ಇದ್ದಕ್ಕಿದ್ದಂತೆ ವಾತಾವರಣ ಬದಲಾಗುತ್ತದೆ. ಎಲ್ಲರೂ ವಿಷಾಧದಲ್ಲಿ ಮುಳುಗುತ್ತಾರೆ.

ಇದಕ್ಕೆ ಮುಖ್ಯ ಕಾರಣ ಎಲ್ಲರೂ ಅಷ್ಟು ವಿಷಾದದಲ್ಲಿ ಇರುವಾಗ ರೋಧಿಸುತ್ತಿರುವಾಗ ಅಲ್ಲಿ ವಿಷಾದ ತರಂಗಗಳು ಅಂದರೆ ನೆಗೆಟಿವ್ ವೈಬ್ರೇಶನ್ ಇರುವಾಗ ಮಾಡಿಕೊಳ್ಳುವ ವಿನೋದವಾಗಲಿ ಶುಭಕಾರ್ಯ ಆಗಲಿ ಸರಿಹೊಂದುವುದಿಲ್ಲ ಕಾರ್ಯಕ್ರಮ ಯಶಸ್ವಿಯಾಗುವುದಿಲ್ಲ. ಒಂದೊಂದು ಬಾರಿ ವಿವಾಹಗಳು ಗೃಹಪ್ರವೇಶಗಳು ನಿಂತು ಹೋಗುತ್ತವೆ. ಆದ್ದರಿಂದ ಯಾರು ವಿಷಾದದಲ್ಲಿ ವಿನೋದ ಮಾಡುವುದಿಲ್ಲ.

ಅಂದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು, **“ಒಬ್ಬರ ವಿಷಾದದಲ್ಲಿ ವಿನೋದಿಸುವುದೆಂದರೆ, ವಿನೋದಿಸುವಿಕೆ ಎನ್ನುವುದು ವಿಷಾದಕ್ಕೆ ದಾರಿಯಾಗುತ್ತದೆ ಹೊರತು, ವಿನೋದವನ್ನು ಉಂಟು ಮಾಡುವುದಿಲ್ಲ”**.

ಆದ್ದರಿಂದ ಪತ್ರೀಜಿ **“ವಿನೋದಿಸಿ ವಿನೋಧಿಸಬೇಕು ಆದರೆ ವಿಷಾದದಲ್ಲಿ ವಿನೋದಿಸಬಾರದು”** ಎನ್ನುತ್ತಾರೆ. ಆದರೆ ಪ್ರಸ್ತುತ ಸಮಾಜದಲ್ಲಿ ಗಮನಿಸಿದರೆ ಎಲ್ಲರೂ ಇತರರ ವಿಷಾದದಲ್ಲಿಯೇ ವಿನೋದಿಸಲು ಪ್ರಯತ್ನಿಸುತ್ತಿದ್ದಾರೆ.

ಏಕೆಂದರೆ ಭಗವಂತನ ಸೃಷ್ಟಿಯಲ್ಲಿ ಭಗವಂತನಿಗೆ ಪ್ರತಿ ಪ್ರಾಣಿಯೂ ಸಮಾನವೇ,ಅಂದರೆ ಮಾನವನೊಂದಿಗೆ ಪ್ರತಿ ಪ್ರಾಣಿಯು ಒಂದೇ, ಕಾರಣ ಪ್ರತಿಯೊಬ್ಬ ಪ್ರಾಣಿಗೂ ನೋವು ಬಾದೆಗಳು ಇರುತ್ತದೆ. ಆ ಬಾಧೆಯನ್ನು ಕಿರಿಚುವುದರ ಮೂಲಕ

ವ್ಯಕ್ತಪಡಿಸುತ್ತವೇ ಮಾನವರ ಹಾಗೆಯೇ, ಪ್ರತಿಭಟಿಸುತ್ತವೆ. ಅಷ್ಟೇ ಅಲ್ಲ ಮಾನವನಂತೆ ಅವುಗಳು ಕೂಡ ಸುಖವನ್ನು ಕೋರಿಕೊಳ್ಳುತ್ತದೆ. ಹಾಗೆ ಪ್ರಾಣಿಗಳಿಗೂ ಕೂಡ ಮಾನವರಂತೆ ಪುತ್ರ ವಾತ್ಸಲ್ಯ,ತಮ್ಮ ಮಕ್ಕಳ ಮೇಲೆ ಮಮಕಾರವಿರುತ್ತದೆ. ಇದು ನಾವು ಸೃಷ್ಟಿಯಲ್ಲಿ ಗಮನಿಸಿದರೆ ತಿಳಿಯುತ್ತದೆ. ಪ್ರತಿ ಪ್ರಾಣಿಗಳಿಗೆ ವಿಷಾದ ಉಂಟಾದರೂ ಅಲ್ಲಿ ವಿಷಾದ ತರಂಗಗಳು ಅಂದರೆ ನೆಗೆಟಿವ್ ವೈಬ್ರೇಶನ್ ಸೇರ್ಪಡೆಯಾಗುತ್ತದೆ

ಅಂತಹ ಅಮಾಯಕ ಪ್ರಾಣಿಗಳನ್ನು ಮಾನವನು 'ದಯೆ' ಇಲ್ಲದಂತೆ ಪಂಕ್ಷನ್ ಗಳಲ್ಲಿ,ಪಾರ್ಟಿಗಳಲ್ಲಿ ತಮ್ಮ ವಿನೋದಕ್ಕಾಗಿ ಕ್ರೂರವಾಗಿ ಸಾಯಿಸಿ ಅವುಗಳ ಮಾಂಸವನ್ನು ತಿನ್ನುತ್ತಾನೆ. ಪ್ರಾಣಿಗಳಿಗೆ ವಿಷಾದವನ್ನು ಉಂಟು ಮಾಡುತ್ತಿದ್ದಾನೆ. ಅವುಗಳ ವಿಷಾದದಲ್ಲಿ ತಾನು ವಿನೋದಿಸುತ್ತಿದ್ದಾನೆ. ಆದರೆ ಇಲ್ಲಿ ಮಾನವರಿಗೆ ತಿಳಿಯದಂತೆ ಆ ಪ್ರಾಣಿಗಳು ತಮ್ಮ ನೋವು ಸಂಕಟಗಳು ಹೊರಹಾಕಲು, ನೆಗೆಟಿವ್ ಅಂದರೆ ವಿಷಾದ ತರಂಗಗಳು ಏರ್ಪಡುತ್ತದೆ. ಆಲೋಚಿಸಿದರೆ ಇಂತಹ ವಿನೋದ ಮಾನವರಿಗೆ ಕ್ಷೇಮಕರವಲ್ಲ, ಲಾಭದಾಯಕ ಅಲ್ಲ. ಅಂತಹ ವಿನೋದ ಮಾಡಿದುದಕ್ಕೆ, ಆ ಪಾಪದಲ್ಲಿ ಪಾಲ್ಗೊಂಡಿದ್ದಕ್ಕೆ ಮಾನವರು ಕೊನೆಗೆ ತಮ್ಮ ಜೀವನದಲ್ಲೂ ಕೂಡ ವಿಷಾದವನ್ನು ಅನುಭವಿಸಬೇಕಾಗಿ ಬರುತ್ತದೆ.

ಆಲೋಚಿಸಿ ಒಬ್ಬರು ಮಡಿದರೆ ಅನಿಷ್ಟ ಎನ್ನುತ್ತಾ ಆಚರಣೆಗಳನ್ನು ನಿಲ್ಲಿಸುತ್ತೇವೆ. ಹಾಗೆ ಎಷ್ಟೋ ಜೀವಿಗಳನ್ನು ಕೊಂದು ಆಚರಣೆಗಳನ್ನು ಹೇಗೆ ಮಾಡುತ್ತಿದ್ದೇವೆ? ಇದು ಹೇಗೆ ಸಾಧ್ಯ!?ಅಂತಹ ಹಬ್ಬ ಆಚರಣೆಗಳು ಹೇಗೆ ಶುಭಕರವಾಗುತ್ತದೆ! ಲಾಭಕರವಾಗುತ್ತದೆ! ಆನಂದದಾಯಕವಾಗುತ್ತದೆ! ಆ ಪ್ರಾಣಿಗಳು ರೋಧಿಸುವುದಿಲ್ಲವೇ? ನೋಡಿ ಒಂದು ಕಾಗೆ ಸತ್ತರೆ ಉಳಿದ ಕಾಗೆಗಳೆಲ್ಲವೂ ಆಹಾರವನ್ನು ಬಿಟ್ಟು ಹೇಗೆ ರೋಧಿಸುತ್ತದೆಯೋ.. ಅಳುತ್ತವೆಯೋ. ಆದ್ದರಿಂದ ಶುಭಕಾರ್ಯಗಳು, ಹಬ್ಬಗಳು, ಆಚರಣೆಗಳು ನಡೆಸಬೇಕು ಎಂದುಕೊಂಡಾಗ ಯಾರು, ಯಾವ ಪ್ರಾಣಿಯ ಜೀವವನ್ನು ಬಲಿ ನೀಡಬಾರದು. ಅವುಗಳಿಗೆ ದುಃಖವನ್ನುಂಟು ಮಾಡಬಾರದು. ಎಲ್ಲರನ್ನೂ, ಎಲ್ಲವನ್ನು ಸಂತೋಷದಿಂದ ಇರಿಸಬೇಕು. ಆನಂದವನ್ನು ಕೊಡುವ ಕೆಲಸಗಳು ಮಾಡಬೇಕು. ಅಂತಹವು ನಮಗೆ ಶುಭಕರ.

ಅದಕ್ಕೆ ಶುಭ ಕಾರ್ಯಗಳಿಗೆ ಬಂದವರಿಗೆ ಹೋಗುವಾಗ ಏನೋ ಒಂದು ಕಾಣಿಕೆ,ಅಂದರೆ ಬಹುಮಾನ ಕೊಡುವುದು ಸಂಪ್ರದಾಯ.. ಕನಿಷ್ಠ ಒಂದು

ಹಣ್ಣನ್ನಾದರೂ ಕೊಡುತ್ತಾರೆ ಅಷ್ಟೇ ಅಲ್ಲ ಕೆಲಸದವರಿಗೆ ಸೇವೆಗಳು ಮಾಡಿದವರಿಗೆ ಕಾಣಿಕೆಗಳನ್ನು ಇಟ್ಟು ಸಂತೋಷಪಡಿಸುತ್ತಾರೆ. ಆನಂದಪಡಿಸುವುದೇ ಇದರ ಉದ್ದೇಶ ಆಚರಣೆ ಮಾಡಿದವರಿಗೆ ಶುಭಕರ ಎನಿಸುತ್ತದೆ ಲಾಭದಾಯಕವೂ ಕೂಡ ಎಂದು ಭಾವಿಸಿಕೊಂಡಿದ್ದರಿಂದ ಹಾಗೆ ಮಾಡುತ್ತಾರೆ.

ಮಾನವರು ಯಾವಾಗಲೂ ಯಾವ ವಿಷಯವನ್ನಾದರೂ ಅವರ ವರೆವಿಗೆ ಮಾತ್ರ ಆಲೋಚಿಸುತ್ತಾರೆ ಪ್ರಾಣಿಗಳನ್ನು ಪರಿಗಣಿಸುವುದಿಲ್ಲ ಆದರೆ ಪ್ರಾಣಿಗಳು ಕೂಡ ಮಾನವರಂತೆ ಭಗವಂತನ ಸೃಷ್ಟಿಯಲ್ಲಿನ ಪ್ರಾಣಗಳೇ! ಭಗವಂತನ ರೂಪಗಳೇ!, ಭಗವಂತನಿಗೆ ಎಲ್ಲವೂ ಸಮಾನವೇ. ಆದ್ದರಿಂದ ಯಾವ ಪ್ರಾಣಿಗೆ ವಿಷಾದವನ್ನು ಉಂಟು ಮಾಡಿದರೆ, ಶುಭ ಕಾರ್ಯದ ಮೂಲಕ ಅವರು ಹೊಂದಬೇಕೆಂದು ಕೊಂಡಿರುವ ಲಾಭವನ್ನು ಹೊಂದಲಾರರು. ಕೊನೆಗೆ ನಷ್ಟವನ್ನು ಹೊಂದುತ್ತಾರೆ.

ಆದ್ದರಿಂದ ಪ್ರಾಣಿಗಳನ್ನು ಹಿಂಸೆಮಾಡಿ ಯಾವ ಆಚರಣೆಗಳನ್ನು ಮಾಡಬಾರದು, ಒಂದು ವೇಳೆ ಯಾರಾದರೂ ಅಂತಹ ಆಚರಣೆಗಳನ್ನು ಮಾಡ್ತಾ ಇದ್ದರೆ ಅಂದರೆ ಮಾಂಸಹಾರದೊಂದಿಗೆ ಭೋಜನಕೂಟ ಏರ್ಪಡಿಸುತ್ತಿದ್ದರೆ, ಪಾಲ್ಗೊಳ್ಳಬಾರದು, ಯಾವುದೇ ಬಲವಂತಕ್ಕೆ ಒಳಗಾಗದೆ ಅವರಿಗೆ ಹೇಳಬೇಕು ನನಗೆ ಅಂತಹ ಸಂಭ್ರಮ ಆಚರಣೆ ಬೇಡ ನಾನು ಅಂತಹ ವಿಷಾದದಲ್ಲಿ ಕೂಡಿದ ಬೋಜನಗಳಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಹೇಳಬೇಕು.

ಕಾರಣ ಅಲ್ಲಿ ನಡೆಯುವುದು ಭಗವತ್ ಸ್ವರೂಪರಾದ ಜೀವಿಗಳ ಮೇಲೆ ನಡೆಯುವ ಹಿಂಸೆ ನಮಗೆ 'ಲೋಕಗಳ' ಜನರಿಗಿಂತ 'ಲೋಕೇಶ್ವರನೇ' ಮುಖ್ಯ. **"ಏನೇನು ಕೊಳ್ಳುತ್ತಾರೆಂದು ಪಾಲ್ಗೊಳ್ಳುವುದಲ್ಲ ಲೋಕೇಶ್ವರನು ಅಂದರೆ ಭಗವಂತನು ಏನೆಂದುಕೊಳ್ಳುತ್ತಾನೋ ಎಂದು ಆಲೋಚಿಸಿ"... "ಲೋಕಗಳನ್ನು ತೃಪ್ತಿಪಡಿಸುವುದು ಅಲ್ಲ ಲೋಕೇಶ್ವರನನ್ನು ಆನಂದ ಪಡಿಸಬೇಕು" ಅಷ್ಟೇ ಹೊರತು ಅವರನ್ನು ಪ್ರೋತ್ಸಾಹಿಸಿ ನೀವು ಕೂಡ ಪಾಪದಲ್ಲಿ ಪಾಲುದಾರರಾಗಬೇಡಿ ಪಾಪ ಕಾರ್ಯವನ್ನು ಸಮರ್ಥಿಸಬೇಡಿ.**

**ಪರಮಾತ್ಮ ತನ್ನ ಮೇಲೆ ದಯೆ ತೋರಿಸಬೇಕೆಂದು ಬಯಸುವವರು ಪ್ರತಿಯೊಬ್ಬರ ಮೇಲೆ ದಯೆಯನ್ನು ಹೊಂದಿರಬೇಕು.**

# ಪ್ರಕೃತಿ ವೈಪರಿತ್ಯಗಳಿಗೆ ಕಾರಣ?

ಮಾನವರ ಧರ್ಮಗಳಲ್ಲಿ ಒಂದು ಮುಖ್ಯ ಧರ್ಮ 'ಪ್ರಕೃತಿಯನ್ನು ಕಾಪಾಡುವ ಧರ್ಮ' **"ಆ ಧರ್ಮವನ್ನು ನಾವು ಕಾಪಾಡಿದರೆ ಆ ಧರ್ಮವೇ ನಮ್ಮನ್ನು ಕಾಪಾಡುತ್ತದೆ", ಅಂದರೆ "ಪ್ರಕೃತಿಯನ್ನು ನಾವು ಕಾಪಾಡಿದರೆ! ಆ ಪ್ರಕೃತಿಯೇ ನಮ್ಮನ್ನು ಕಾಪಾಡುತ್ತದೆ".**



ಹಾಗಾದರೆ ಪ್ರಕೃತಿ ಎಂದರೇನು? ಒಂದು ವಿಧವಾಗಿ ಪ್ರಕೃತಿ ಎಂದರೆ 'ಭಗವಂತನೇ'. ಕಾರಣ ಪ್ರಕೃತಿಯಲ್ಲಿ ಪಂಚಭೂತಗಳಿವೆ ಅವು "ಭೂಮಿ, ನೀರು, ಅಗ್ನಿ, ವಾಯು, ಆಕಾಶ".... ಇವೆಲ್ಲವೂ ಭಗವಂತನಿಂದ ಏರ್ಪಟ್ಟಿದೆ. ಹಾಗೆಯೇ ಸಕಲ ಚರಾಚರ ಸೃಷ್ಟಿ, ಪಂಚಭೂತಗಳಿಂದಲೇ ಏರ್ಪಟ್ಟಿದೆ.ಆದ್ದರಿಂದ ಪ್ರಕೃತಿಯಲ್ಲಿರುವ ಸಕಲ ಜೀವಿಗಳು, ಪ್ರಾಣಿಗಳು ಕೂಡಾ ಪ್ರಕೃತಿಯಲ್ಲಿನ ಒಂದು ಭಾಗವೇ ಅಂದರೆ 'ಭಗವಂತನೇ'.

ನಾವು ಪ್ರಕೃತಿಯನ್ನು ಪ್ರೇಮಿಸಬೇಕು, ಪ್ರೇಮದೊಂದಿಗೆ ನೋಡಬೇಕು, ಸ್ನೇಹ ಗಳಿಸಬೇಕು, ಸಹಜೀವನ ಮಾಡಬೇಕು, ಪ್ರಕೃತಿ ನಿರ್ಣಯಗಳನ್ನು ಗೌರವಿಸಬೇಕು, ಕಾಪಾಡಬೇಕು ಅಷ್ಟೇ ಅಲ್ಲ ಪ್ರಕೃತಿಯನ್ನು ನಾಶ ಮಾಡಬಾರದು. ದ್ವೇಷಿಸಬಾರದು, ಚಿಂತಿಸಬಾರದು,ಪ್ರಕೃತಿ ನಿರ್ಣಯಗಳನ್ನು ವಿಮರ್ಶಿಸಬಾರದು. ಇದೇ ಪ್ರಕೃತಿಯೊಂದಿಗೆ ಮಾನವರ ಧರ್ಮ.. ಇದಕ್ಕೆ ವಿರುದ್ಧವಾಗಿ ಪ್ರವರ್ತಿಸಿದರೆ ಪ್ರಕೃತಿ ವಿರುದ್ಧವಾಗಿ ಪ್ರವರ್ತಿಸಿದಂತೆ ಹಾಗೆ ಭಗವಂತನಿಗೆ ವಿರುದ್ಧವಾಗಿ ಪ್ರವರ್ತಿಸಿದಂತೆ ಅದರ ಫಲಿತವನ್ನು ಅನುಭವಿಸಲೇಬೇಕು.

ಪ್ರಕೃತಿಯ ಭಾಗವಾದ "ವೃಕ್ಷ ಜಾತಿ", ಪಂಚಭೂತಗಳಲ್ಲಿನ "ನೀರಿನಿಂದ" ಏರ್ಪಟ್ಟಿದೆ, "ಕ್ರಿಮಿ–ಕೀಟಗಳು, ಸರ್ಪಜಾತಿ", "ಭೂಮಿ, ಅಗ್ನಿಗಳೊಂದಿಗೆ" ಏರ್ಪಟ್ಟಿದೆ. "ಪಕ್ಷಿ ಜಾತಿ" "ನೀರು, ಅಗ್ನಿ,ವಾಯುಗಳೊಂದಿಗೆ" ಏರ್ಪಟ್ಟಿದೆ. "ಪ್ರಾಣಿ ಜಾತಿ"ಯು ಭೂಮಿ, ನೀರು, ಅಗ್ನಿ, ವಾಯುಗಳೊಂದಿಗೆ ಏರ್ಪಟ್ಟಿದೆ. ಹಾಗೆಯೇ "ಮಾನವಜಾತಿ"ಯು

"ಪಂಚಭೂತ"ಗಳೊಂದಿಗೆ ಏರ್ಪಟ್ಟಿದೆ. ಅಂದರೆ, ಪ್ರಕೃತಿಯಲ್ಲಿರುವ ಸಮಸ್ತ ಜೀವಿಗಳು ಪ್ರಕೃತಿಯಲ್ಲಿನ ಒಂದು ಭಾಗವೆಂದು ನಮಗೆ ತಿಳಿಯುತ್ತದೆ. ಆದ್ದರಿಂದ ಯಾರನ್ನು ದ್ವೇಷಿಸಿದರು, ಯಾವ ಜೀವಿಯನ್ನು, ಯಾವ ಪ್ರಾಣಿಯನ್ನು,ಯಾವ ಮಾನವನನ್ನು ಹಿಂಸಿಸಿದರು ಪ್ರಕೃತಿಯನ್ನು ಹಿಂಸಿಸಿದಂತೆ.

ಆದರೆ ಮಾನವರು ಇದನ್ನು ಗುರುತಿಸಿದೆ, ತಮ್ಮ ಸ್ವಾರ್ಥಕ್ಕಾಗಿ,ತಮ್ಮ ಆಧಿಪಥ್ಯಕ್ಕಾಗಿ ತುಚ್ಚವಾದ ತಮ್ಮ ಕೋರಿಕೆಗಳನ್ನು ನೆರವೇರಿಸಿಕೊಳ್ಳಲು ಪ್ರಕೃತಿಯನ್ನು, ಪ್ರಕೃತಿಯಲ್ಲಿನ ಜೀವಿಗಳನ್ನು ನಿತ್ಯವು ಎಷ್ಟೋ ವಿಧವಾಗಿ ಹಿಂಸಿಸುತ್ತಿದ್ದಾರೆ. ಪ್ರತಿದಿನವೂ ತಮ್ಮ ಆನಂದಕ್ಕಾಗಿ ತಮ್ಮ ನಾಲಿಗೆ ರುಚಿಗಾಗಿ ಎಷ್ಟೋ ಲಕ್ಷಗಳು ಪ್ರಾಣಿಗಳನ್ನು ಕ್ರೂರವಾಗಿ ಸಾಯಿಸಿ ಭಕ್ಷಿಸುತ್ತಿದ್ದಾರೆ. ರಕ್ತಪಾತ ಸೃಷ್ಟಿಸುತ್ತಾ ಪ್ರಕೃತಿಯನ್ನು ಬಾಧಿಸುತ್ತಿದ್ದಾರೆ. ಮರಗಳನ್ನು, ಕಾಡುಗಳನ್ನು ತಮ್ಮ ಇಷ್ಟಾನುಸಾರ ಕಡಿಯುತ್ತಾ ನಾಶ ಮಾಡುತ್ತಿದ್ದಾರೆ. ಸಮುದ್ರದಲ್ಲಿ ವಿಹರಿಸುತ್ತಿರುವ ಮೀನುಗಳನ್ನು ಹಿಡಿದು ಭಕ್ಷಿಸುತ್ತಿದ್ದಾರೆ. ಪ್ರಾಣಿಗಳ ಮಧ್ಯೆ ಪಂದ್ಯಗಳನ್ನು ಏರ್ಪಡಿಸಿ,ಅವು ಬಾಧೆಪಡುತ್ತಿದ್ದರೆ ತಾವು ವಿನೋದಿಸುತ್ತಿದ್ದಾರೆ ಪಕ್ಷಿಗಳನ್ನು, ಗಿಳಿಗಳನ್ನು ಪಂಜರಗಳಲ್ಲಿಟ್ಟು, ಮೀನುಗಳನ್ನು ತೊಟ್ಟಿಗಳಲ್ಲಿ ಹಾಕಿ ತಮ್ಮ ಆನಂದಕ್ಕಾಗಿ ಅವುಗಳಿಗೆ ಸ್ವೇಚ್ಚೆಯಿಲ್ಲದಂತೆ ಮಾಡುತ್ತಿದ್ದಾರೆ.




**ನಿಮ್ಮ ಆನಂದಕ್ಕೋಸ್ಕರ ನಮ್ಮ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದು ನ್ಯಾಯವಾ?**

ಅಷ್ಟೇ ಅಲ್ಲ ತನ್ನ ಸಹವರ್ತಿಗಳಾದ ಮಾನವರನ್ನು, ಬಲಹೀನರನ್ನು, ಸ್ತ್ರೀಯರನ್ನು ಹಿಂಸಿಸುತ್ತಿದ್ದಾರೆ. ದೌರ್ಜನ್ಯ ಮಾಡುತ್ತಿದ್ದಾರೆ. ಅಮಾಯಕರನ್ನು, ಸಾಮಾನ್ಯರನ್ನು ಮೋಸಗೊಳಿಸುತ್ತಿದ್ದಾರೆ. ಹಾಗೆ ಎಲ್ಲಿ ನೋಡಿದರೂ ಪ್ರಕೃತಿ ಮೇಲೆ ದೌರ್ಜನ್ಯಗಳು, ಮೋಸಗಳು, ಗೂಂಡಾಗಿರಿ ಹೆಚ್ಚೆಚ್ಚು ನಡೆಯುತ್ತಿದೆ. ತಮ್ಮನ್ನು ತಾವು ನೋಡಿಕೊಳ್ಳುತ್ತಿದ್ದಾರೆಹೊರತು, ಇತರರ ಕುರಿತು ಆಲೋಚಿಸುತ್ತಿಲ್ಲ ಎಲ್ಲಾ ಪ್ರಾಣಿಗಳು ನಮ್ಮಂತೆಯೇ ಎಂದು ಆಲೋಚಿಸುತ್ತಿಲ್ಲ. ಹಾಗೆ ಪ್ರಕೃತಿ ಮೇಲೆ ಹಿಂಸೆಯು ದಿನದಿನಕ್ಕೂ ಹೆಚ್ಚುತ್ತಾ ಇದೆ.

ಯಾರು ಪ್ರಕೃತಿ ಕುರಿತು ಆಲೋಚಿಸುತ್ತಿಲ್ಲ. ಅಸಲು ಪ್ರಕೃತಿ ಎಂದರೆ ಯಾರು? ಪ್ರಕೃತಿ ಪಾತ್ರ ಏನು? ಪ್ರಕೃತಿಯಿಂದ ಪ್ರಯೋಜನವೇನು? ಪ್ರಕೃತಿಯಿಂದ ತಾನು ಹೊಂದುತ್ತಿರುವ ಲಾಭವೇನು? ಪ್ರಕೃತಿಯ ಕುರಿತು ತನ್ನ ಧರ್ಮವೇನು? ಎಂದು ಯಾರು ಆಲೋಚಿಸುತ್ತಿಲ್ಲ. ಪ್ರಕೃತಿಯ ಕುರಿತು ತನ್ನ ಧರ್ಮ ನಿರ್ವಹಿಸಿದೆ ಇದ್ದರೆ ಏನು ನಡೆಯುತ್ತದೆ? ಅವುಗಳಿಂದ ತನಗೆ ಬರುವ ನಷ್ಟ ಏನಾದರು ಇದೆಯೇ? ಎಂದು ಆಲೋಚಿಸಬೇಕು.

ಏಕೆಂದರೆ ಪ್ರಕೃತಿ ಮಾನವರಿಗೆ ತಾಯಿಯಂತೆ. ಪ್ರಕೃತಿಯ ಮಡಿಲಲ್ಲಿ ನಾವು ಹಸುಗೂಸಿನಂತವರು. ಮಕ್ಕಳಿಗೆ ತಾಯಿ ಎಲ್ಲಾ ಅಗತ್ಯತೆಗಳನ್ನು ಹೇಗೆ ಹೊಂದಿಸಿಕೊಡುವಳೋ ಹಾಗೆ ಪ್ರಕೃತಿ ತಾಯಿ ನಮಗೆ ಎಲ್ಲವನ್ನು ಹೊಂದಿಸುತ್ತಾಳೆ. ನಮ್ಮ ಅಗತ್ಯಗಳಿಗೆ, ಆನಂದಗಳನ್ನು, ಬೇಕಾದದ್ದೆಲ್ಲವನ್ನು ಹೊಂದಿಸಿಕೊಡುತ್ತಾಳೆ.

ತಾಯಿಯು ಹಾಲನ್ನು ಕೊಟ್ಟು ಹಸಿವನ್ನು ನೀಗಿಸಿ ಬೊಂಬೆಗಳೊಂದಿಗೆ ಆಡಿಸುತ್ತಾ ಆನಂದಪಡಿಸುತ್ತಾಳೆ ಮಗುವಿನ ಆನಂದ ನೋಡಿ ಪರವಶಿಸುತ್ತಾಳೆ. ಮುದ್ದಾಡಿ ಆನಂದಿಸುತ್ತಾಳೆ.

ಹಾಗೆಯೇ ಪ್ರಕೃತಿ ತಾಯಿಯು ತನ್ನ ಅಂದಗಳಾದ ಹಿಮಾಲಯಗಳು, ಜಲಪಾತಗಳು, ನದಿಗಳು, ರಮಣೀಯ ದೃಶ್ಯಗಳೊಂದಿಗೆ ನಮ್ಮನ್ನು ಆನಂದ ಪಡಿಸುತ್ತಾಳೆ. ಮರಗಳು, ಹಣ್ಣುಗಳು, ತರಕಾರಿಗಳೊಂದಿಗೆ ನಮ್ಮ ಹಸಿವನ್ನು ನೀಗಿಸುತ್ತಾಳೆ.ನೀರನ್ನು ಕೊಟ್ಟು ದಾಹ ತೀರಿಸುತ್ತಾಳೆ. ಗಾಳಿಯನ್ನು ಕೊಟ್ಟು ಹಾಯಾಗಿ ಉಸಿರಾಡುವಂತೆ ಮಾಡುತ್ತಾಳೆ. ಸಮೃದ್ಧಿಯಾಗಿ ಬೆಳೆಗಳನ್ನು ನೀಡುತ್ತಾಳೆ, ಸಕಾಲದಲ್ಲಿ ಮಳೆಗಳನ್ನು ಸುರಿಸುತ್ತಾಳೆ. ಗಿಡಗಳು, ಮರಗಳು ಸೊಂಪಾಗಿ ಬೆಳೆಯುವಂತೆ ಮಾಡುತ್ತಾಳೆ. ಗಿಡಗಳಲ್ಲಿ ಹೂಗಳನ್ನು ಅರಳಿಸುತ್ತಾಳೆ. ಎಲ್ಲರೂ ಆನಂದವಾಗಿದ್ದರೆ ನೋಡಿ ಖುಷಿ ಪಡುತ್ತಾಳೆ. ಎಲ್ಲಾ ತನ್ನನ್ನು ಪ್ರೇಮಿಸುತ್ತಿದ್ದರೆ ಪರ ವಶಿಸುತ್ತಾಳೆ.

ಹಾಲನ್ನು ಕುಡಿಯುತ್ತಿದ್ದರೆ,ಆ ಮಗುವನ್ನು ತಾಯಿ ನೇವರಿಸುತ್ತಾಳೆ.ಆದರೆ ತಾಯಿಯ ಹಾಲು ಕುಡಿಯುತ್ತಾ ಎದೆಯನ್ನು ಕಚ್ಚಿದರೆ, ಗುದ್ದಿದರೆ ತಾಯಿಯು ಆಗ್ರಹಿಸುತ್ತಾಳೆ, ದಂಡಿಸುತ್ತಾಳೆ. ಮಗುವಿನ ಚೇಷ್ಟೆಗಳು ಮಿತಿಮೀರಿದರೆ,ಹಾಲು ಕೊಡುವುದಿಲ್ಲ ಎಂದು ಹೇಳುತ್ತಾಳೆ ಆಗ ಮಗು ತಲ್ಲಣಿಸುತ್ತಾನೆ.


ಹಾಗೆಯೇ ವಿಪರೀತ ಚೇಷ್ಟೆಗಳು ಅಂದರೆ ಜೀವ ಹಿಂಸೆ, ಮಾಂಸ ಭಕ್ಷಣೆ ಮಾಡಿದರೆ, ಜೀವಿಗಳು ಕೂಡ ಪ್ರಕೃತಿಯಲ್ಲಿ ಭಾಗಗಳೆಲ್ಲವೇ, ಆ ಬಾಧೆಯನ್ನು ತಡೆಯಲಾರದೆ, ಪ್ರಕೃತಿಮಾತೆ ತನ್ನ ಅಗ್ರಹವನ್ನು ವೈಪರೀತ್ಯಗಳ ಮೂಲಕ ಅಂದರೆ ಭೂಕಂಪಗಳು, ಪ್ರವಾಹಗಳು, ಸುನಾಮಿಗಳು, ಕಾಡ್ಗಿಚ್ಚುಗಳ ಮೂಲಕ ನಮಗೆ ಬುದ್ಧಿ ಹೇಳುತ್ತಾಳೆ. ಮಳೆಯೂ ಬೀಳುವುದಿಲ್ಲ, ಕ್ಷಾಮ ಡಾಮರಗಳು ಏರ್ಪಡುತ್ತದೆ. ಮಾನವರು ತಲ್ಲಣಿಸುತ್ತಾರೆ. ಆದ್ದರಿಂದ, ಭೂಮಿ ಮೇಲೆ ಇರುವ ಚರಾಚರ ವಸ್ತುಗಳು ಪ್ರಕೃತಿಯಲ್ಲಿನ ಭಾಗವೇ ಯಾವುದನ್ನು ಹಿಂಸಿಸಬಾರದು ಎಂದು ನಾವು ತಿಳಿದುಕೊಳ್ಳಬೇಕು. ಎಲ್ಲವನ್ನು ಪ್ರೇಮಿಸಬೇಕು. ಅಗತ್ಯಗಳಿಗೆ ತಕ್ಕಂತೆ ಬಳಸಿಕೊಳ್ಳುತ್ತಾ, ಅಲ್ಲಿಯವರೆಗೂ ಮಾತ್ರ ಪರಿಮಿತ ವಾಗಬೇಕೆಂದು ತಿಳಿದುಕೊಳ್ಳಬೇಕು.

ಹಾಲು ಕುಡಿದರೆ ತಾಯಿ ಸಾಯುವುದಿಲ್ಲ, ತಾಯಿಗೆ ನೋವಾಗುವುದಿಲ್ಲ ಭಾರ ಕಡಿಮೆಯಾಗುತ್ತದೆ. ಹಾಗೆಯೇ ಮರ ಗಿಡಗಳಲ್ಲಿರುವ ಹಣ್ಣು ತರಕಾರಿಗಳು ಕೊಯ್ದರೆ ಮರ ಗಿಡಗಳು ಸಾಯುವುದಿಲ್ಲ, ಮರದ ಭಾರ ಕಡಿಮೆಯಾಗುತ್ತದೆ. ಆದ್ದರಿಂದ ತರಕಾರಿಗಳು ಹಣ್ಣುಗಳನ್ನು ಕೊಯ್ದುಕೊಳ್ಳಿ. ಆದರೆ ಗಿಡಗಳನ್ನು ಮರಗಳನ್ನು ಕಡಿಯಬೇಡಿ, ಕೊಂಬೆಗಳನ್ನು ಮುರಿಯಬೇಡಿ, ಹೂಗಳನ್ನು ಕೊಯ್ಯಿರಿ ಎಲ್ಲಾ ವಿಷಯಗಳನ್ನು, ಎಲ್ಲಾ ವಿಷಯಗಳಲ್ಲೂ ಅಗತ್ಯಗಳಲ್ಲೂ ಪರಿಮಿತವಾಗಿರಿ .. ಪರಿಮಿತಿಯನ್ನು ಅನುಸರಿಸಿ.

**"ಪ್ರಕೃತಿಯನ್ನು ಹಿಂಸಿಸಿದರೆ ತಾಯಿಯನ್ನು ಹಿಂಸಿಸಿದರು ಒಂದೇ" ಪ್ರಕೃತಿಯಿಂದ ಎಲ್ಲಾ ಅಗತ್ಯಗಳನ್ನು ತೀರಿಸಿಕೊಳ್ಳುತ್ತಾ, "ಪ್ರಕೃತಿಯಲ್ಲಿ ಇರುವುದನ್ನೇ ಹಿಂಸಿಸುವುದು ಎಂದರೆ, ತಾಯಿ ಹಾಲು ಕುಡಿದು ತಾಯಿಯ ಎದೆಯನ್ನು ಒದ್ದಂತೆ"** ಅಗ ಅವನಿಗಿಂತ ದ್ರೋಹಿ ಯಾರು ಇರುವುದಿಲ್ಲ. ಅವನು ಶಿಕ್ಷಾರ್ಹನು.. ಹಾಗೆ ಭೂಮಿ ಮೇಲೆ ನಡೆಯುತ್ತಿರುವುದರಿಂದಲೇ, ಈ ಪ್ರಕೃತಿ ವೈಪರಿತ್ಯಗಳು ನಡೆಯುತ್ತಿವೆ.

**"ಪ್ರಕೃತಿ ವೈಪರಿತ್ಯ ಎಂದರೆ ಮಾನವರ ಬಾಧೆಗಳನ್ನು ಸಹಿಸಲಾರದೆ ತಡೆದುಕೊಳ್ಳಲಾರದೆ, ಪ್ರಕೃತಿ ಮಾತೆ ಆಗ್ರಹಿಸುವುದೇ ಆಗಿದೆ"** ಅಗ ತನ್ನ ಮಕ್ಕಳನ್ನು ಶಿಕ್ಷಿಸುತ್ತಾಳೆ. ಅವರಿಗೆ ಬುದ್ಧಿ ಹೇಳಲೆಂದೇ ಪ್ರಕೃತಿ ವೈಪರಿತಗಳು ಬರುತ್ತಿವೆ ಎಂದರೆ, ಮಾನವರು ಪ್ರಕೃತಿಯ ಕುರಿತು ತಮ್ಮ ಧರ್ಮ ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಅರ್ಥ.

ಅಷ್ಟೇ ಹೊರತು ಪ್ರಕೃತಿ ಪ್ರಕೋಪಿಸಿದೆ, ಕೋಪಿಸಿಕೊಂಡಿದೆ, ಕೃಷ್ಣಮ್ಮ ಉಗ್ರ ರೂಪ ತಳೆದಿದ್ದಾಳೆ,ಮತ್ತೆ ಶಾಂತಿಸುತ್ತಾಳೆ ಎಂದುಕೊಳ್ಳುತ್ತೇವೆ. ಅದೇ ಸಹಜವೆಂದು ಕೊಳ್ಳುತ್ತಾ, ನಿರ್ಲಕ್ಷಿಸಿ ಮತ್ತೆ ಮತ್ತೆ ಹಿಂಸೆ ಮಾಡುತ್ತಿದ್ದರೆ, ಮಾನವರು ಮತ್ತೆ ಪ್ರಕೃತಿಯ ಆಗ್ರಹಕ್ಕೆ ಬಲಿಯಾಗಲೇಬೇಕು.


ತಾಯಿ ಯಾವಾಗಲೂ ಮಕ್ಕಳನ್ನು ಶಿಕ್ಷಿಸುವುದಿಲ್ಲ ಅಲ್ಲವೇ, ತಡೆಯಲಾರದೆ ಹೋದಾಗ, ಶಿಕ್ಷಿಸುತ್ತಾಳೆ. ಹಾಗೆ ಪ್ರಕೃತಿ ಯಾವಾಗಲು ತನ್ನ ಕೋಪವನ್ನು ಪ್ರದರ್ಶಿಸುವುದಿಲ್ಲ ಮಾನವರ ಪ್ರವರ್ತನೆ ಮಿತಿಮೀರಿದಾಗಲಿ ಶಿಕ್ಷೆ ನೀಡುತ್ತಾಳೆ.

ಪ್ರಕೃತಿ ಕೋಪಿಸಿಕೊಂಡರೆ ಮಾನವರು ಒದ್ದಾಡುತ್ತಾರೆ. ಅರ್ತನಾದ ಮಾಡುತ್ತಾರೆ. ತಡೆಯಲಾರರು... ನೋಡಿ ಭೂಮಿ ಸ್ವಲ್ಪ ಕಂಪಿಸಿದರೂ ಅರ್ಧ ರಾತ್ರಿಯಾದರೂ ಎಲ್ಲರೂ ಮನೆ ಒಳಗಿನಿಂದ ಹೊರಗೆ ಓಡಿ ಬರುತ್ತಾರೆ. ಆದ್ದರಿಂದ ನೆನಪಿರಲಿ ಪ್ರಕೃತಿಯ ಬಗ್ಗೆ ನಮ್ಮ ಧರ್ಮವನ್ನು ತಿಳಿದುಕೊಳ್ಳಬೇಕು. ಪ್ರಕೃತಿಯನ್ನು ಪ್ರೇಮಿಸಬೇಕು ಹಿಂಸಿಸಬಾರದು. ಅಂದರೆ ಪ್ರಾಣಿಗಳನ್ನು ಸಾಯಿಸಬಾರದು. ಮಾಂಸವನ್ನು ತಿನ್ನಬಾರದು. ಸ್ತ್ರೀಯರನ್ನು ಗೌರವಿಸಬೇಕು ಬಲಹೀನರನ್ನು ಅಲ್ಪರನ್ನು ರಕ್ಷಿಸಬೇಕು. ಪ್ರಾಣಿಗಳ ಮೇಲೆ ದಯ ತೋರಬೇಕು. ಇದೇ ಪ್ರಕೃತಿಯ ಕುರಿತು ನಮ್ಮ ಧರ್ಮ.

ಈ ಧರ್ಮವನ್ನು ತಿಳಿದುಕೊಳ್ಳಬೇಕೆಂದರು, ಆಚರಿಸಬೇಕೆಂದರೆ ಯಾರಾದರೂ ಸರಿಯೇ ಧ್ಯಾನ ಮಾಡಲೇಬೇಕು. ಧ್ಯಾನ ವಿಶೇಷವಾಗಿ ಮಾಡಿದರೆ ಪ್ರಕೃತಿಯ ಕುರಿತು ಪ್ರಕೃತಿ ಧರ್ಮಗಳ ಕುರಿತು ತಿಳಿದುಕೊಳ್ಳಬಲ್ಲರು ಪ್ರಕೃತಿಗೆ ಅನುಗುಣವಾಗಿ ಜೀವಿಸಬಲ್ಲರು. ಅಗ ಪ್ರಕೃತಿ ಎಂದರೆ ಭಗವಂತನ ಸಹಕಾರದೊಂದಿಗೆ ಆನಂದವಾಗಿ ಜೀವಿಸಬಲ್ಲರು.

**ಪರಮಾತ್ಮನು ನೀಡಿದ ಬುದ್ಧಿಯನ್ನು ಉಪಯೋಗಿಸದವನು ಮನುಷ್ಯ ರೂಪದಲ್ಲಿರುವ ಪಶು**

# ಸೃಷ್ಟಿ ಸಿದ್ಧಾಂತ : ಕೊಟ್ಟರೆ ಬರುತ್ತದೆ! ಕೊಡದಿದ್ದರೆ ಬರುವುದಿಲ್ಲ!

ಲೋಕದಲ್ಲಿ ಎಷ್ಟೋ ಜನರು ಎಷ್ಟೋ ಕೋರುತ್ತಾರೆ, ಎಷ್ಟೋ ಪರಿಸ್ಥಿತಿಗಳು ಬರುವುದು ಬೇಡ ಎಂದುಕೊಳ್ಳುತ್ತಾರೆ. ಆದರೆ, ಬೇಕು ಎಂದುಕೊಂಡಿದ್ದು ಬರುವುದಿಲ್ಲ... ಬೇಡ ಎಂದುಕೊಂಡಿದ್ದು ಬರುತ್ತದೆ.ಇದಕ್ಕೆ ಮುಖ್ಯ ಕಾರಣ ಮಾನವರು,ಸೃಷ್ಟಿ ಸಿದ್ಧಾಂತಗಳು, ಸೃಷ್ಟಿ ಧರ್ಮಗಳನ್ನು ತಿಳಿದುಕೊಳ್ಳದೇ ಇರುವುದು. ಆ ವಿಧವಾಗಿ ಪ್ರವರ್ತಿಸದೆ ಇರುವುದು... ಮೇಲಾಗಿ ಅದಕ್ಕೆ ವಿರುದ್ಧವಾಗಿಯೇ ಪ್ರವರ್ತಿಸುವುದು.

ಸೃಷ್ಟಿಯಲ್ಲಿನ ಒಂದು ಸಿದ್ದಾಂತ ಏನೆಂದರೆ "**ಕೊಟ್ಟರೆ ಬರುತ್ತದೆ, ಕೊಡದಿದ್ದರೆ ಬರುವುದಿಲ್ಲ**".

ಅನೇಕರು ಹಣ ಬೇಕೆಂದುಕೊಳ್ಳುತ್ತಾರೆ ಆದರೆ ಯಾರಿಗೂ ಕೊಡಲು ಸಿದ್ದರಾಗಿರುವುದಿಲ್ಲ. ಅದಕ್ಕೆ ಹಣ ಅವರ ಬಳಿ ಬರುವುದಿಲ್ಲ. ಹಾಗೆಯೇ ಗಂಡನಿಂದ ಹೆಂಡತಿಗೆ, ಹೆಂಡತಿಯಿಂದ ಗಂಡನಿಗೆ ಪ್ರೇಮ ಆದ್ಯತೆ ಬಯಸುತ್ತಾರೆ ಆದರೆ ತಾವು ಮಾತ್ರ ಕೊಡುವುದಿಲ್ಲ.ಅದಕ್ಕೆ ತಮಗೆ ಬೇಕಾದವರಿಂದ ಬಯಸಿದ್ದು ಬರಲಾರದು. ಎಲ್ಲರ ಕೈಯಲ್ಲಿ ಗೌರವಿಸಲ್ಪಡಬೇಕೆಂದು, ಅವಮಾನ ಅಗಬಾರದು ಎಂದು ಕೋರಿಕೊಳ್ಳುತ್ತಾರೆ. ಆದರೆ ತಾವು ಮಾತ್ರ ಯಾರಿಗೂ ಗೌರವ ಕೊಡುವುದಿಲ್ಲ ಆದ್ದರಿಂದ ಅವರಿಗೂ ಅದು ಬರುವುದಿಲ್ಲ.

ಇದಕ್ಕೆ ಮುಖ್ಯ ಕಾರಣ ಅವರು ಕೋರಿಕೊಳ್ಳುವುದೇ ಹೊರತು ಯಾವುದು ಕೊಡುವುದಿಲ್ಲ ಮೇಲಾಗಿ ಅವುಗಳಿಗೆ ವಿರುದ್ಧವಾದದ್ದೆ ಕೊಡುತ್ತಿರುತ್ತಾರೆ. ಅದಕ್ಕಾಗಿಯೇ ಅವರು ಬಯಸಿದ್ದು ಬರುವುದಿಲ್ಲ ಅವುಗಳಿಗೆ ವಿರುದ್ಧವಾದದ್ದೇ ಬರುತ್ತದೆ. ಅಂದರೆ ಇದರ ಅರ್ಥ ಅವರು ಏನು ಕೊಟ್ಟರೆ ಅದೇ ಹೊಂದುತ್ತಾರೆ.

ಎಲ್ಲರಿಂದಲೂ ಪ್ರೇಮವನ್ನು ಬಯಸುತ್ತಾರೆ ತಾವು ಹಿಂಸಿಸಲ್ಪಡ ಪಡಬಾರದು ಎಂದುಕೊಳ್ಳುತ್ತಾರೆ. ಆದರೆ ಅವರು ಯಾರನ್ನು ಪ್ರೇಮಿಸುವುದಿಲ್ಲ ಯಾರಿಗೂ ಪ್ರೇಮವನ್ನು ಹಂಚುವುದಿಲ್ಲ. ಮೇಲಾಗಿ ಜೀವಿಗಳನ್ನು ಪ್ರಾಣಿಗಳನ್ನು ಹಿಂಸಿಸುತ್ತಾರೆ ಅವುಗಳ ಹಿಂಸೆಗೆ ಕಾರಕರಾಗುತ್ತಾರೆ. ಮಾಂಸ ಮೊಟ್ಟೆ ತಿನ್ನುತ್ತಾರೆ. ಅದರ ಫಲವಾಗಿಯೇ ಅವರ ಜೀವನದಲ್ಲೂ, ಸಂಸಾರದಲ್ಲೂ ಹಿಂಸೆಯನ್ನು ಅನುಭವಿಸುತ್ತಾರೆ. ಬಾದೆ ಪಡುತ್ತಾ ಇರುತ್ತಾರೆ ಇಲ್ಲಿ ವಿಚಿತ್ರವೇನೆಂದರೆ, ಅವರು ತಮ್ಮವರ ಕೈಯಿಂದಲೇ ಹಿಂಸಿಸಲ್ಪಡುತ್ತಾರೆ ಇದು ಅವರಿಗೆ ಅರ್ಥವಾಗುವುದಿಲ್ಲ.

ಇದಕ್ಕೆ ಮುಖ್ಯ ಕಾರಣ ಇವರು ಸೃಷ್ಟಿ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳದಿರುವುದೇ, ಸೃಷ್ಟಿಯಲ್ಲಿ ಎಲ್ಲರೂ ಒಂದೇ ಎಲ್ಲರೂ ಭಗವಂತನ ಅಂಶರೇ...ಆದ್ದರಿಂದ ಯಾವ ಭಾಗಕ್ಕೆ ಹಿಂಸೆ ಮಾಡಿದರು, ಸೃಷ್ಟಿಯಲ್ಲಿನ ಮತ್ತೊಂದು ಭಾಗದಿಂದ ಹಿಂಸೆಗೆ ಒಳಗಾಗಬೇಕಾಗುತ್ತದೆ.

ಕೋಳಿ, ಮೇಕೆ, ಮೀನು ಎಲ್ಲಾ ಭಗವಂತನ ಸೃಷ್ಟಿಯೇ,ಅವುಗಳನ್ನು ತಿನ್ನುವುದರಿಂದ ಹಿಂಸೆ ಮಾಡುವುದರಿಂದ ಸೃಷ್ಟಿಯಲ್ಲಿ ಮತ್ತೊಂದು ಕಡೆಯಿಂದ, ತಮ್ಮವರಿಂದ ಅಥವಾ ಬೇರೆಯವರಿಂದ ಅವರು ಹಿಂಸೆಗೆ ಒಳಪಡುತ್ತಾರೆ ಸೃಷ್ಟಿಯ ಕುರಿತು ಅವಗಾಹನೆ ಇಲ್ಲದವರಿಗೆ, ಅರ್ಥವಾಗುವುದಿಲ್ಲ. ಆತ್ಮಜ್ಞಾನ ಇಲ್ಲದವರಿಗೂ, ಇದು ಅರ್ಥವಾಗುವುದಿಲ್ಲ.

ಚಿಕ್ಕ ಉದಾಹರಣೆ ನೋಡೋಣ ನಿಮ್ಮ ಶರೀರವನ್ನು ತೆಗೆದುಕೊಳ್ಳಿ ನೋಡಿದರೆ, ಶರೀರದಲ್ಲಿನ ವಿವಿಧ ಭಾಗಗಳು ನಿಮ್ಮದೇ. ನಿಮ್ಮ ಕಾಲನ್ನು ಸೊಳ್ಳೆ ಕಡಿದರೆ ನೋವು ಕಾಲಿಗೆ ಆಗುತ್ತದೆ. ಆದರೆ ಸಂಬಂಧವಿಲ್ಲದ ನಿಮ್ಮ ಕೈ ಆ ಸೊಳ್ಳೆಯನ್ನು ಸಾಯಿಸುತ್ತದೆ. ಶಿಕ್ಷಿಸುತ್ತದೆ. ಆದರೆ ನೋವನ್ನು ಅನುಭವಿಸಿದ ಕಾಲು ಪ್ರತಿಕಾರ ತೀರಿಸಿಕೊಳ್ಳುವುದಿಲ್ಲ ಕಾರಣ, ಶರೀರದ ಎಲ್ಲಾ ಭಾಗಗಳು ನೀವೇ...

ಎಲ್ಲವೂ ಭಗವಂತನ ರೂಪಗಳೇ! ಭಾಗಗಳೇ! ಆದ್ದರಿಂದ ಕೋಳಿಯನ್ನು ಹಿಂಸಿಸಿದರೆ ಅದಕ್ಕೆ ಪ್ರತಿಯಾಗಿ ಸಂಬಂಧವಿಲ್ಲದವರೊಂದಿಗೆ ನೀವು ಹಿಂಸೆಗೆ ಒಳಗಾಗುವಿರಿ ಕಾರಣ ಸೃಷ್ಟಿಗೆ ಹಿಂಸೆ ನೀಡಿದ್ದೀರಾ ಸೃಷ್ಟಿಯಿಂದ ಹಿಂಸೆಯನ್ನೇ ತೆಗೆದುಕೊಳ್ಳುವಿರಿ. ಅಂದರೆ ಸೃಷ್ಟಿ ಸಿದ್ಧಾಂತದ ಪ್ರಕಾರ **"ಕೊಟ್ಟಿದ್ದು ಬರುತ್ತದೆ, ಕೊಡದಿದ್ದರೆ ಬರುವುದಿಲ್ಲ"** ಆದ್ದರಿಂದ ಯಾವುದನ್ನು ಹಿಂಸಿಸಬೇಡಿ ಎಲ್ಲವನ್ನು ಪ್ರೇಮಿಸಿ ಆಗ ಯಾರು ನಿಮ್ಮನ್ನು ಹಿಂಸಿಸುವುದಿಲ್ಲ ಮೇಲಾಗಿ ಎಲ್ಲರೂ ನಿಮ್ಮನ್ನು ಪ್ರೇಮಿಸುತ್ತಾರೆ.

ಭಕ್ತ ರಾಮದಾಸ ನೋಡಿ...ಆತ ಗಿಣಿಯನ್ನು ಪಂಜರದಲ್ಲಿ ಬಂಧಿಸಿದನು ಅದರ ಪರಿಣಾಮವಾಗಿ,ತಾನು ಜೈಲಿನಲ್ಲಿ ಇತರರಿಂದ ಬಂದಿಸಲ್ಪಟ್ಟನು.

ಇದೇ ಸೃಷ್ಟಿಯಲ್ಲಿನ ರಹಸ್ಯ ಹಿರಿಮೆಯೂ ಹೌದು.ಅಷ್ಟೇ ಅಲ್ಲ ಸೃಷ್ಟಿ ಕುರಿತು ಅವಗಾಹನೆ ಮಾಡಿಕೊಂಡರೆ,ಇನ್ನೂ ಎಷ್ಟೋ ಲಾಭಗಳು ಹೊಂದಬಹುದು ಹೇಗೆಂದರೆ ಪ್ರಾಣಿಗಳ ಮೇಲೆ ಹಿಂಸೆ ಜರಗದಂತೆ ನೀವು ತಡೆದರೆ..

ಅಂದರೆ ಯಾರನ್ನಾದರೂ ಮಾಂಸ ಭಕ್ಷಣೆಮಾಡದಂತೆ ತಡೆದರೆ, ಅವರಿಂದ ಮಾಂಸಾಹಾರ ತಿನ್ನದಂತೆ ಮಾಡಿದರೇ, ಒಂದು ವಿಧವಾಗಿ ಪ್ರಾಣಿಗಳ ಮೇಲೆ ನಡೆಯುವ ಹಿಂಸೆಯನ್ನು ನೀವು ತಡೆದಂತೆ ಆಗ ನಿಮ್ಮ ಮೇಲೆ ಹಿಂಸೆ ಜರಗದೆ ಯಾರೋ ಒಬ್ಬರು ತಡೆಯುತ್ತಾರೆ ಇದೇ ಸೃಷ್ಟಿಯಲ್ಲಿನ ಹಿರಿಮೆ.

ಹಾಗೆ ಹಿಂಸೆ ನಡೆಯುತ್ತಿದ್ದಾಗ ನೋಡುತ್ತಾ ಸುಮ್ಮನಿದ್ದರೆ ನಿಮ್ಮ ಮೇಲೆ ಕೂಡ ಹಿಂಸೆ ನಡೆಯುತ್ತಿದ್ದಾಗ ಎಲ್ಲರೂ ಪ್ರೇಕ್ಷಕರಂತೆ ನೋಡುತ್ತಾ ಇರುತ್ತಾರೆ. ಆದ್ದರಿಂದ ಜೀವನದಲ್ಲಿ ಹಿಂಸ ಬೇಡ ಅಂದುಕೊಂಡರೆ ಹಿಂಸೆಯನ್ನು ಮಾಡಬಾರದು ಹಿಂಸೆಯನ್ನು ನಿಲ್ಲಿಸುವ ಪ್ರಯತ್ನವೂ ಮಾಡಬೇಕು ಹಾಗೆ ದಯೆಯನ್ನು ಬಯಸಿದರೆ ದಯೆಯನ್ನು ತೋರಿಸಬೇಕು. ಹಾಗೆ ಕೊಡಬೇಕು ಎಂದುಕೊಂಡರು, ಕೊಡುವ ಶಕ್ತಿ ಬರಬೇಕು ಎಂದುಕೊಂಡರು, ಮುಖ್ಯವಾಗಿ ಸಾತ್ವಿಕವಾದ ಶಾಕಾಹಾರ ತೆಗೆದುಕೊಳ್ಳುತ್ತಾ, ಧ್ಯಾನ ಮಾಡಬೇಕು. ಹಾಗೆ ಧ್ಯಾನ ಶಕ್ತಿಯು ಹೆಚ್ಚುತ್ತಾ ಹೋದಂತೆ, ಕೊಡುವ ಗುಣವೂ ಬರುತ್ತದೆ, ನಿಧಾನವಾಗಿ ಭಗವಂತನ ಸೃಷ್ಟಿಯನ್ನು ಅರ್ಥಮಾಡಿಕೊಳ್ಳುತ್ತಾ, ಸೃಷ್ಟಿ ಸಿದ್ಧಾಂತಗಳನ್ನು ಧರ್ಮಗಳನ್ನು ಅನುಸರಿಸುತ್ತಾರೆ. ಜೀವನದಲ್ಲಿ ನಷ್ಟ ಹೊಂದುವುದಿಲ್ಲ . ಮೇಲಾಗಿ ಎಲ್ಲವೂ ಲಾಭವಾಗುತ್ತದೆ.

**ಪಂಡಿತ**


'ಆತ್ಮ ಜ್ಞಾನಂ ಸಮಾರಂಭ ಸ್ತಿತಿಕ್ಷಾ ಧರ್ಮ ನಿತ್ಯತಾ
ಯಮರ್ಥಾ ನಾಪಕರ್ಷನ್ತಿ ಸ ವೈ ಪಂಡಿತ ಉಚ್ಯತೆ'

**– ವ್ಯಾಸ ಮಹಾಭಾರತಂ**

ಆತ್ಮ ಜ್ಞಾನ ಹೊಂದಿದವನು;
ನಿಷ್ಕರ್ಮ, ಆಲಸ್ಯ ಇಲ್ಲದೆ ಕೆಲಸವನ್ನಾರಂಬಿಸುವವನು;
ಸುಖ–ದುಃಖಗಳು, ಲಾಭ–ನಷ್ಟಗಳು
ಮಾನಾಪಮಾನಗಳು, ನಿಂದೆಗಳು ಇವುಗಳನ್ನು ಹೊಂದಿದ್ದರೂ
ಹರ್ಷ ಶೋಕಗಳಿಗೆ, ಒಳಗಾಗದವನು
ಧರ್ಮದಲ್ಲಿಯೇ ನಿತ್ಯವೂ ನಿಶ್ಚಯವಾಗಿರುವವನು;
ಉತ್ತಮೋತ್ತಮ ಪದಾರ್ಥಗಳ, ವಿಷಯ ವಸ್ತುಗಳ
ಆಕರ್ಷಣೆಗೆ ಒಳಗಾಗದಿರುವ ಮನಸ್ಸಿರುವವನೇ ಪಂಡಿತ

**–ದಯಾನಂದ–ಗೋಪದೇವ್ ಆಧಾರದಿಂದ**

# ಮಾನವರಿಗೆ ಶಾಕಾಹಾರ ಪಾಪವೇ?



ಮಾಂಸಾಹಾರ ಮಾನವರಿಗೆ ಆಹಾರವಲ್ಲ. ಅದು ತಿನ್ನಬಾರದು, ಪಾಪ ಎಂದು ಹೇಳಿದ ಕೂಡಲೇ ತುಂಬಾ ಜನರು ಹೇಳುವುದು ಏನೆಂದರೆ, ಗಿಡ ಮರಗಳಲ್ಲಿ ಪ್ರಾಣವಿರುತ್ತದೆ ಹಾಗಾದರೆ ಶಾಕಾಹಾರವು ಪಾಪವೇ ಅಲ್ಲವೇ? ಎಂದು ಪ್ರಶ್ನಿಸುತ್ತಾರೆ. ಆದರೆ ಈ ವಿಷಯದ ಕುರಿತಾಗಿ ಮಾನವರು ಯೋಚಿಸಬೇಕಾಗಿರುತ್ತದೆ. ಕಾರಣವೇನೆಂದರೆ, ಮಾನವ ಶರೀರವು ಶಾಕಾಹಾರಕ್ಕಾಗಿಯೇ ನಿರ್ಮಿತವೇ ಹೊರತು ಮಾಂಸಹಾರಕ್ಕೆ ಅಲ್ಲ. ನಮ್ಮ ದೇಹ ರಚನೆ ಮಾಂಸಹಾರಕ್ಕೆ ಅನುಕೂಲಕರವಾಗಿಲ್ಲ. ಇದು ಸೃಷ್ಟಿಯು ಮಾಡಿದ ಏರ್ಪಾಡು. ಭಗವಂತನು ಮಾಡಿದ ಏರ್ಪಾಡು.

ಆದ್ದರಿಂದ ಪ್ರಕೃತಿ ಅಂದರೆ ಭಗವಂತನು ನಿರ್ದೇಶಿಸುದುದಕ್ಕೆ ಅನುಗುಣವಾಗಿ, ತೆಗೆದುಕೊಳ್ಳುವಂತಹ ಆಹಾರವನ್ನು "ಭಕ್ಷ್ಯ" ಎನ್ನುತ್ತಾರೆ. ಪ್ರಕೃತಿ ನಿರ್ದೇಶಿಸಿದಕ್ಕೆ ವಿರುದ್ಧವಾಗಿ ತೆಗೆದುಕೊಳ್ಳುವ ಆಹಾರವನ್ನು "ಅಭಕ್ಷ್ಯ"ಎನ್ನುತ್ತಾರೆ... 'ಭಕ್ಷ್ಯ' ತಿನ್ನುವುದಕ್ಕೆ ತಕ್ಕನಾಗಿರುವುದು 'ಅಭಕ್ಷ್ಯ' ಮಾನವರು ತಿನ್ನಲು ಅನರ್ಹವಾದದ್ದು ಎನ್ನುತ್ತಾರೆ.

ಯಾವ ಜೀವಿಯಾದರೂ ಜೀವಿಸಬೇಕು ಎಂದರೆ, ಆಹಾರ ಸೇವಿಸಲೇಬೇಕು. ಆಹಾರ ಇಲ್ಲದೇ ಯಾವ ಜೀವಿಯೂ ಜೀವಿಸಲು ಆಗುವುದಿಲ್ಲ. ಹುಟ್ಟಿದ ಕ್ಷಣದಿಂದಲೇ ಪ್ರತಿ ಪ್ರಾಣಿಯ ಜೀವನ ಆಹಾರದಿಂದ ಪ್ರಾರಂಭವಾಗುತ್ತದೆ. ಅಷ್ಟೇ ಅಲ್ಲ ಜೀವನವು ಮುಗಿಯುವವರೆಗೂ, ಪ್ರತಿ ದಿನ ಆಹಾರ ತೆಗೆದುಕೊಳ್ಳುತ್ತಾ ಇರಬೇಕು. ಆಹಾರ ಸೇವಿಸುವುದು ಪ್ರಕೃತಿ ಧರ್ಮದಲ್ಲಿ ಒಂದು ಧರ್ಮ.

ಮಾನವರೇ ಅಲ್ಲ ಸಮಸ್ತ ಜೀವ ಕೋಟಿಯು ಪ್ರಕೃತಿಯಿಂದ ಸೃಷ್ಟಿಸಲ್ಪಟ್ಟಿರುವುದೇ. ಪ್ರಕೃತಿ ಎಂದರೆ ಭಗವಂತ.

ಪ್ರಕೃತಿ ಸಮಸ್ತ ಜೀವಿಗಳನ್ನು ಸೃಷ್ಟಿ ಮಾಡುವುದೇ ಅಲ್ಲ ಯಾವ ಪ್ರಾಣಿ ಯಾವ ಆಹಾರ ತೆಗೆದುಕೊಳ್ಳಬೇಕು ಎಂದು ಕೂಡಾ ಪ್ರಕೃತಿಯೇ ನಿರ್ದೇಶಿಸಿದೆ. ಅದಕ್ಕೆ ಅನುಗುಣವಾಗಿ ಅವುಗಳ ಶರೀರ ನಿರ್ಮಾಣ ಕೂಡ ಮಾಡಲಾಗಿದೆ ಪ್ರಕೃತಿಯು ಕೆಲವು ಜೀವಿಗಳಿಗೆ ಶಾಕಾಹಾರ 'ಭಕ್ಷ್ಯ'ವಾಗಿ ನಿರ್ದೇಶಿಸಿ ಅದಕ್ಕೆ ಅನುಗುಣವಾಗಿ ಅವುಗಳ ಶರೀರ ನಿರ್ಮಾಣ ಮಾಡಲಾಗಿದೆ, ಹಾಗೆಯೇ ಕೆಲವು ಪ್ರಾಣಿಗಳಿಗೆ ಮಾಂಸಾಹಾರವನ್ನು ಭಕ್ಷ್ಯವಾಗಿ ನಿರ್ದೇಶಿಸಿ ಅದಕ್ಕೆ ಅನುಗುಣವಾಗಿ ಅವುಗಳ ಶರೀರ ನಿರ್ಮಾಣ ಮಾಡಲಾಗಿದೆ. ಆದ್ದರಿಂದ ಶಾಕಾಹಾರ ಜೀವಿಗಳಿಗೆ ಮಾಂಸಹಾರ 'ಅಭಕ್ಷ್ಯ' ಮಾಂಸಾಹಾರ ಜೀವಿಗಳಿಗೆ ಶಾಕಾಹಾರ 'ಅಭಕ್ಷ್ಯ' ಹಾಗೆಯೇ ಶಾಕಾಹಾರಕ್ಕೆ ನಿರ್ಮಿತವಾದ ಶರೀರವುಳ್ಳ ಮಾನವರಿಗೆ, ಮಾಂಸಹಾರವು ಅಭಕ್ಷ್ಯ,ಅಂದರೆ ತಿನ್ನಬಾರದು. ಕೆಲವು ಮಾನವರು ಅಭಕ್ಷ್ಯವನ್ನೇ ಭುಜಿಸುತ್ತಾ ಕಷ್ಟಗಳ ಪಾಲಾಗುತ್ತಿದ್ದಾರೆ. ಜೀವನವನ್ನು ದುಃಖಮಯ ಮಾಡಿಕೊಳ್ಳುತ್ತಿದ್ದಾರೆ.

ಗಮನಿಸಿ ನೋಡಿದರೆ ಪ್ರಕೃತಿಯು ಶಾಕಾಹಾರಿ ಜೀವಿಗಳ ಮತ್ತು ಮಾಂಸಾಹಾರಿ ಜೀವಿಗಳ ಶರೀರ ನಿರ್ಮಾಣದಲ್ಲಿ ಎಷ್ಟೋ ವ್ಯತ್ಯಾಸಗಳು ತೋರಿಸಲಾಗಿದೆ.

ಮಾಂಸಾಹಾರಿ ಪ್ರಾಣಿಗಳಾದ ಹುಲಿ, ಸಿಂಹದಂತಹವುಗಳಿಗೆ ದಂತಗಳು ಇರುವುದಿಲ್ಲ ಅವುಗಳಿಗೆ ಬಲಿಷ್ಠವಾದ ಕೋರೆಗಳು, ಮಾಂಸವನ್ನು ಕಿತ್ತು ತಿನ್ನಲು ಉದ್ದನೆಯ ಉಗುರುಗಳು ಇರುತ್ತದೆ. ಅದರೊಂದಿಗೆ ಯಾವುದೇ ಆಯುಧವನ್ನು ಉಪಯೋಗಿಸಿಕೊಳ್ಳದೆ ಪ್ರಾಣಿಗಳನ್ನು ಸಾಯಿಸಬಲ್ಲವೂ ಅವುಗಳ ಚರ್ಮವನ್ನು ಸೀಳಬಲ್ಲವು ಅವುಗಳ ಹಸಿ ಮಾಂಸವನ್ನು ತುಂಡು ತುಂಡಾಗಿ ಬೇರ್ಪಡಿಸಿ ತಿನ್ನಬಲ್ಲವು. ಅವು ಮಾಂಸವನ್ನು ಅಗಿಯುವುದಿಲ್ಲ ನುಂಗುತ್ತವೆ. ಜಗಿದು ತಿನ್ನದೇ ಮಾಂಸದ ತುಂಡುಗಳನ್ನು ನುಂಗಿದರು ಅದನ್ನು ಜೀರ್ಣಿಸಿಕೊಳ್ಳುವ ಶಕ್ತಿಯನ್ನು ಭಗವಂತನೇ ಅವುಗಳಿಗೆ ಏರ್ಪಾಟು ಮಾಡಿದ್ದಾನೆ.

ಅಷ್ಟೇ ಅಲ್ಲ ಅವು ಪ್ರಾಣಿಗಳ ರಕ್ತವನ್ನು ನಾಲಿಗೆಯಿಂದ ನೆಕ್ಕಿ ಇಷ್ಟವಾಗಿ ಆಸ್ವಾದಿಸುತ್ತದೆ, **"ಅವುಗಳಿಗೆ ರಕ್ತ ಅಸಹ್ಯವಲ್ಲ ಮಾಂಸದ ತುಂಡುಗಳು ಜೀರ್ಣವಾಗುವುದು ಕಷ್ಟವೇನಲ್ಲ"**. ಮಾಂಸವನ್ನು ಮೆತ್ತಗೆ ಜಗೆಯಬೇಕಾದ ಕೆಲಸವಿಲ್ಲ ಜಗಿಯದಿದ್ದರೂ ಹಾಗೆ ಜೀರ್ಣವಾಗುವಂತೆ ಅವುಗಳ ಶರೀರ ರಚನೆಯನ್ನು ಮಾಡಲಾಗಿದೆ. ಅದಕ್ಕೆ ಅವುಗಳ ಜೀರ್ಣಕೋಶ ತುಂಬಾ ಚಿಕ್ಕದಾಗಿದ್ದು ಆಹಾರವನ್ನು ಅರಗಿಸುವ ಲಾಲಾಜಲದಲ್ಲಿ

ಹೈಡ್ರೋಕ್ಲೋರಿಕ್ ಆಮ್ಲವು ಹೆಚ್ಚಾಗಿರುವುದರಿಂದ ಬೇಗ ಮಾಂಸದ ತುಂಡುಗಳು ಜೀರ್ಣವಾಗುತ್ತದೆ ವ್ಯರ್ಥವು ಹೊರಗಡೆ ವಿಸರ್ಜಿಸಲ್ಪಡುತ್ತದೆ. ಈ ಏರ್ಪಾಡು ಶಾಕಾಹಾರ ಜೀವಿಗಳಿಗೆ ಇಲ್ಲ.

ಶಾಕಾಹಾರಿ ಪ್ರಾಣಿಗಳಿಗೆ ದಂತಗಳು ಇರುತ್ತದೆ. ಆಹಾರವನ್ನು ಅಗಿದು ನುಂಗುತ್ತವೆ ಅಷ್ಟೇ ಅಲ್ಲ ಮಾಂಸಾಹಾರ ಪ್ರಾಣಿಗಳು ನೀರನ್ನು, ಅನಾಯಾಸವಾಗಿ ನಾಲಿಗೆಯಿಂದ ಎಳೆದುಕೊಂಡು ಕುಡಿಯುತ್ತವೆ ಆದರೆ ಶಾಕಾಹಾರ ಪ್ರಾಣಿಗಳು ನೀರನ್ನು ಬಾಯಿಯಿಂದ ಹೀರಿಕೊಂಡು ಕುಡಿಯುತ್ತವೆ. ಮಾಂಸಹಾರ ಪ್ರಾಣಿಗಳು ರಾತ್ರಿಲ್ಲೂ ಕೂಡ ನೋಡಬಲ್ಲವೂ ಆದರೆ ಶಾಕಾಹಾರ ಪ್ರಾಣಿಗಳು ರಾತ್ರಿಯಲ್ಲಿ ನೋಡಲಾರವು.

ಮಾಂಸಹಾರ ಪ್ರಾಣಿಗಳು ಶಾಕಾಹಾರವನ್ನು ಮುಟ್ಟುವುದಿಲ್ಲ. ಅವುಗಳ ಜೀವನ ಕಾಲ ಪೂರ್ತಿಯಾಗಿ ಹಸಿ ಮಾಂಸವನ್ನೇ ತಿಂದು ಜೀವಿಸುತ್ತವೆ. ಹಾಗೆಯೇ ಶಾಕಾಹಾರ ಪ್ರಾಣಿಗಳು ಮಾಂಸಹಾರವನ್ನು ಮುಟ್ಟುವುದಿಲ್ಲ ಅವುಗಳ ಜೀವನ ಕಾಲವೆಲ್ಲವೂ ಶಾಕಾಹಾರದೊಂದಿಗೆ ಜೀವಿಸುತ್ತವೆ. ಒಂದು ವೇಳೆ ಶಾಕಾಹಾರ ದೊರೆದಿದ್ದರೆ, ಕೃಷವಾಗಿ ಸಾಯುತ್ತವೆ ಹೊರತು ಮಾಂಸವನ್ನು ಮುಟ್ಟುವುದಿಲ್ಲ.

ಮೇಲಿನ ವಿಷಯಗಳು ಗಮನಿಸಿದರೆ ಶಾಕಾಹಾರ ಪ್ರಾಣಿಗಳು ಪ್ರಕೃತಿ ಎಂದರೆ, ಭಗವಂತನು ನಿರ್ದೇಶಿಸಿದ ಆಹಾರವನ್ನೇ ತೆಗೆದುಕೊಳ್ಳುತ್ತವೆ. ಅಂದರೆ ಪ್ರಕೃತಿಗೆ ಅನುಗುಣವಾಗಿ ಜೀವಿಸುತ್ತವೆ. ಅಷ್ಟೇ ಹೊರತು, ಪ್ರಕೃತಿ ವಿರುದ್ಧವಾಗಿ ಜೀವಿಸುವುದಿಲ್ಲ. ಹಾಗೆಯೇ ಮಾಂಸಾಹಾರ ಪ್ರಾಣಿಗಳು ಕೂಡ ಪ್ರಕೃತಿ ನಿರ್ದೇಶಿಸಿದಕ್ಕೆ ಅನುಗುಣವಾಗಿ ಜೀವಿಸುತ್ತವೆ ಎನ್ನುವುದು, ಅವುಗಳನ್ನು ಗಮನಿಸಿದರೆ ನಮಗೆ ತಿಳಿಯುತ್ತದೆ.

ಆದರೆ ಮಾನವನು ಮಾತ್ರವೇ ಪ್ರಕೃತಿ ಅಂದರೆ ಭಗವಂತನು ನಿರ್ದೇಶಿಸಿದುದಕ್ಕೆ ವಿರುದ್ಧವಾಗಿ ಆಹಾರವನ್ನು ತೆಗೆದುಕೊಳ್ಳುತ್ತಿದ್ದಾನೆ. ಮಾನವನ ಶರೀರ ಶಾಕಾಹಾರ ನಿರ್ಮಿತವೇ ಆದರೂ ಮಾಂಸಾಹಾರ ನಿರ್ಮಿತವಲ್ಲ ಕಾರಣ ಮಾನವನು ಯಾವುದೇ ಆಯುಧ ಉಪಯೋಗಿಸಿಕೊಳ್ಳದೆ, ಪ್ರಾಣಿಗಳನ್ನು ಸಾಯಿಸಲಾರ ಅವುಗಳ ಚರ್ಮವನ್ನು ಸೀಳಲು ಸಾಧ್ಯವಿಲ್ಲ. ಅಷ್ಟೇ ಅಲ್ಲ ಪ್ರಾಣಿಗಳ ಮೇಲೆ ಬಿದ್ದು ಅವುಗಳ ಹಸಿ ಮಾಂಸವನ್ನು ಬಾಯಿಂದ ಸೀಳಿ ತಿನ್ನಲಾರ. ಹಸಿ ಮಾಂಸವನ್ನು ತಿನ್ನಲಾರ. ಹಸಿ ಮಾಂಸವನ್ನು ಮಾತ್ರವೇ ತಿನ್ನುತ್ತಾ ಯಾವಾಗಲೂ ಜೀವಿಸಲು ಸಾಧ್ಯವೂ ಇಲ್ಲ. ಆದರೆ ಶಾಕಾಹಾರ

ತೆಗೆದುಕೊಳ್ಳುತ್ತಾ ಜೀವನ ಪರ್ಯಂತ ಜೀವಿಸಬಲ್ಲನು. ಆದ್ದರಿಂದ ಮಾನವರಿಗೆ ಶಾಕಾಹಾರವೇ 'ಭಕ್ಷ್ಯ' ಮಾಂಸಾಹಾರ 'ಅಭಕ್ಷ್ಯ'.

ಆದರೆ ಮಾನವರು ಇದನ್ನು ಅರ್ಥಮಾಡಿಕೊಳ್ಳಲಾರದೆ, ಮಾಂಸಹಾರವನ್ನು ಭುಜಿಸುತ್ತಿದ್ದಾರೆ. ಮೇಲಾಗಿ ಗಿಡ, ಮರಗಳಲ್ಲಿ,ಸಸ್ಯಗಳಲ್ಲಿ ಪ್ರಾಣವಿಲ್ಲವೇ ? ಎಂದು ವಾದಿಸುತ್ತಾ,ತಮ್ಮ ಕೆಲಸವನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಈ ವಾದಗಳೆಲ್ಲವೂ ತಾವು ಮಾಡುವ ಕೆಲಸವನ್ನು ಸಮರ್ಥಿಸಿಕೊಳ್ಳಲಿಕ್ಕಾಗಿ..ಹಾಗೂ ಯಾವುದೋ ವಿಧವಾಗಿ ಅಭ್ಯಾಸವಾಗಿರುವ ಮಾಂಸವನ್ನು ತಿನ್ನಲಿಕ್ಕಾಗಿ ಹೊರತು ಮತ್ತೇನು ಅಲ್ಲ.

ಏಕೆಂದರೆ ಸೃಷ್ಟಿಯಲ್ಲಿ ಪ್ರಾಣ ಇಲ್ಲದೆ ಇರುವುದು ಯಾವುದು ಇಲ್ಲ ಆದರೆ ಪ್ರತಿ ಜೀವಿ ಆಹಾರ ತೆಗೆದುಕೊಳ್ಳುವಿಕೆ ಎನ್ನುವುದು ಪ್ರಕೃತಿ ಧರ್ಮ ಆದರೆ ಪ್ರಕೃತಿಯನ್ನು ನಡೆಸುವ ಭಗವಂತನು ಯಾವ ಜೀವಿ ಯಾವ ಆಹಾರ ತೆಗೆದುಕೊಳ್ಳಬೇಕೆಂದು ತಾನೆ ನಿರ್ದೇಶಿಸುತ್ತಾನೆ ಭಗವಂತನು ನಿರ್ದೇಶಿಸಿದ್ದಕ್ಕೆ ಅನುಗುಣವಾಗಿ ಯಾರು ಪ್ರವರ್ತಿಸಿದ್ದರು, ಜೀವಿಸಿದರು ಅದು ಪ್ರಕೃತಿ ವಿರುದ್ಧವಲ್ಲ ಪಾಪವು ಅಲ್ಲ ಇದು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು. ಅದೇ ಭಗವಂತನು ಮಾನವ ಶರೀರವನ್ನು ಶಾಕಾಹಾರಕ್ಕೆ ಅನುಗುಣವಾಗಿಯೇ ನಿರ್ಮಿಸಿದ್ದಾನೆ ಆದ್ದರಿಂದ ಮಾನವನು ಶಾಕಾಹಾರವನ್ನು ತೆಗೆದುಕೊಳ್ಳಬೇಕು ಅದೇ ಮಾನವರಿಗೆ ಭಕ್ಷ್ಯ... ಪಾಪ ಆಗುವುದಿಲ್ಲ ಮಾಂಸಾಹಾರ ಮಾನವರಿಗೆ ಅಭಕ್ಷ್ಯ ಅಂದರೆ ಭಗವಂತನು ನಿರ್ದೇಶಿಸಿದ್ದಕ್ಕೆ ವಿರುದ್ಧ ಅಂದರೆ ಪಾಪ.

ಇದೆಲ್ಲ ಹೇಗೆ ತಿಳಿಯುತ್ತದೆ ? ಎಂದರೆ ಧ್ಯಾನವನ್ನು ವಿಶೇಷವಾಗಿ ಮಾಡಿದರೆ ಆಲೋಚಿಸ ಬಹುದು ಹಾಗೂ ಈ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬಹುದು. ಪ್ರಕೃತಿಯ ಜೊತೆ ಸಹಜ ಸಿದ್ಧವಾಗಿ ಜೀವಿಸಬಲ್ಲರು.

**ಪರಮಾತ್ಮನ ಆಜ್ಞೆಯನ್ನು ಧಿಕ್ಕರಿಸುವುದು ಎಂದರೆ ಪ್ರಕೃತಿ ನಿರ್ದೇಶಿಸಿದ ಪರಿಧಿಗಳನ್ನು ಉಲ್ಲಂಘಿಸುವುದೇ ಆಗಿದೆ.**

# ಭಗವದ್ಗೀತೆಯ ಅನುಸಾರ ಮಾನವನ ಆಹಾರ ಶಾಕಾಹಾರವೇ? ಮಾಂಸಾಹಾರವೇ?



ಭಗವಂತನು ಮಾನವ ಶರೀರವನ್ನು ಶಾಕಾಹಾರಕ್ಕೆ ಅನುಕೂಲವಾಗಿ ನಿರ್ಮಿಸಿದ್ದಾನೆ. ಮಾಂಸಾಹಾರಕ್ಕೆ ಅನುಕೂಲವಾಗಿ ಅಲ್ಲ. ಮಾನವನು ಯಾವುದೋ ಒಂದು ಆಯುಧವನ್ನು ಉಪಯೋಗಿಸಿ ಮಾತ್ರ, ಯಾವುದೇ ಪ್ರಾಣಿಯನ್ನು ಸಾಯಿಸಬಲ್ಲನು...ಹಾಗೆ ಆಯುಧದೊಂದಿಗೆ ಮಾತ್ರವೇ ಚರ್ಮವನ್ನು ಮಾಂಸದಿಂದ ಬೇರೆ ಮಾಡಬಲ್ಲನು, ಒಂದು ಚಾಕು ಅಥವಾ ಕತ್ತಿಯೊಂದಿಗೆ ಮಾತ್ರವೇ ಮಾಂಸವನ್ನು ತುಂಡುಗಳನ್ನಾಗಿ ಮಾಡಬಲ್ಲನು. ಗಮನಿಸಿದರೆ ಮಾಂಸದ ಅಂಗಡಿಗಳಲ್ಲಿ ಕತ್ತಿಯೊಂದಿಗೆ ಪ್ರಾಣಿಯ ಶರೀರದಲ್ಲಿನ ಮಾಂಸವನ್ನು ತುಂಡುಗಳಾಗಿ ಮಾಡಿ ವಿನಿಯೋಗದಾರರಿಗೆ ಅಂದರೆ ತಿನ್ನುವವರಿಗೆ ಮಾರುತ್ತಾರೆ. ವಿನಿಯೋಗದಾರರು ಕೂಡ ಆ ಮಾಂಸದ ತುಂಡುಗಳನ್ನು ಬೇಯಿಸುವಾಗ ಕತ್ತಿಯೊಂದಿಗೆ ಅಥವಾ ಚಾಕುವಿನೊಂದಿಗೆ ಆಗಲಿ ಚಿಕ್ಕ ಚಿಕ್ಕ ತುಂಡುಗಳಂತೆ ಕೊಯ್ದು ಆ ತುಂಡುಗಳನ್ನು ಮೆತ್ತಗೆ ಆಗುವಂತೆ ಬೇಯಿಸುತ್ತಾರೆ. ಅವುಗಳಿಂದ ದುರ್ವಾಸನೆ ಬರದಂತೆ ಅವುಗಳ ಮೇಲೆ ಮಸಾಲೆಗಳು, ಕಾರ, ಉಪ್ಪು ಚೆಲ್ಲುತ್ತಾರೆ ಇಷ್ಟು ಮಾಡಿದರು ತಿನ್ನಲಾರರು ಆದ್ದರಿಂದ ಅವುಗಳನ್ನು ಶಾಕಾಹಾರದ ಜೊತೆಗೆ ಬೆರೆಸುತ್ತಾರೆ. ಹೀಗೆ ಮಾಡಲಾರದೆ ಮಾಂಸವನ್ನು ತಿನ್ನಲಾರರು. ಮಾಂಸಾಹಾರ ತಿನ್ನುವ ಪ್ರಾಣಿಗಳಂತೆ ಹಸಿಯಾಗಿ ನುಂಗಲಾರರು.

ಹಾಗೆ ಬೇಯಿಸಿದ ಮಾಂಸವನ್ನು ಮಾನವನು ತನ್ನ ಹಲ್ಲುಗಳೊಂದಿಗೆ ಚೆನ್ನಾಗಿ ಅಗಿಯಬೇಕು ಹಾಗಿದ್ದರೆ ಹೊರತು ಆ ಆಹಾರವನ್ನು ಮಾನವನ್ನು ನುಂಗಲಾಗದು ಒಂದು ವೇಳೆ ಅಗಿಯದೆ ನುಂಗಿದರೆ ತಿಂದ ಆಹಾರ ಅರಗಿಸಿಕೊಳ್ಳಲಾರರು. ಜೀರ್ಣವಾಗುವುದಿಲ್ಲ ಅಂದರೆ, ಶಾಕಾಹಾರಿಯಾದರೂ, ಮಾನವನು ಅಗಿಯಬೇಕು ಹಾಗೆ ಅಗಿಯಲು ದಂತಗಳು ಕೂಡ ಕೊಡಲ್ಪಟ್ಟಿವೆ. ಯಾವ ಆಹಾರವನ್ನಾದರೂ ಮೆತ್ತಗೆ

ಚೂರ್ಣವನ್ನಾಗಿಸಿ ನುಂಗಬೇಕು. ಇದೇ ಸೃಷ್ಟಿಯಲ್ಲಿ ಶಾಕಾಹಾರಿಗಳಿಗೆ ಇರುವ ಏರ್ಪಾಡು.

ಮುಖ್ಯವಾಗಿ ನೆನಪಿನಲ್ಲಿರಿಸಿಕೊಳ್ಳುವುದೇನೆಂದರೆ, ಮಾನವರಿಗೆ ದಂತಗಳಿವೆ ಮಾಂಸಹಾರ ಜಂತುಗಳಿಗೆ ದಂತಗಳಿಲ್ಲ.ಆದ್ದರಿಂದ ಮಾನವನು ಶಾಕಾಹಾರಿಯೇ ಹೊರತು ಮಾಂಸಹಾರಿ ಅಲ್ಲ. ಶಾಕಾಹಾರವೇ ಮಾನವರಿಗೆ ಯುಕ್ತವಾದದ್ದು ಮಾಂಸಾಹಾರ ಅಲ್ಲ. ಆದ್ದರಿಂದ ಶಾಕಾಹಾರ ತೆಗೆದುಕೊಳ್ಳಿ ಇದು ಭಗವಂತನು ಮಾನವರಿಗೆ ನಿರ್ದೇಶಿಸಿರುವ ಪ್ರಕೃತಿ ಏರ್ಪಡಿಸಿದ ಸಹಜ ಸಿದ್ಧ ಆಹಾರ.



**ಪರಮಾತ್ಮ ಯಾರಿಗೆ ಯಾವ ಆಹಾರವನ್ನು ನಿಶ್ಚಯಿಸಿದ್ದಾನೋ, ಅದು ಪವಿತ್ರವಾದದ್ದು**

ಈ ವಿಷಯವನ್ನು ಭಗವದ್ಗೀತೆಯಲ್ಲಿ ಕೂಡ ಉದಾಹರಣೆಯಾಗಿ ಹೇಳಲಾಗಿದೆ ಭಗವದ್ಗೀತೆಯಲ್ಲಿ ಕೊಡಲ್ಪಟ್ಟಿರುವ ಈ ಕೆಳಗಿನ ಶ್ಲೋಕ ನೋಡೋಣ

**ಶ್ಲೋಕ ॥ಅಹಂ ವೈಶ್ವಾನರೋ ಭೂತ್ವ ಪ್ರಾಣಿನಾಮ್ ದೇಹಮಾಶ್ರಿತಃ ।**

**ಪ್ರಾಣಾಪಾನ ಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್ (ಭ. ಗೀ 15–14)**

ತಾ :– ನಾನು 'ವೈಶ್ವಾನರನು' ಜಠರಾಗ್ನಿಯಾಗಿ ಪ್ರಾಣಿಗಳ ಶರೀರವನ್ನು ಆಶ್ರಯಿಸಿ, ಪ್ರಾಣ ಹಾಗೂ ಅಪಾನ ವಾಯುಗಳಿಂದ ಕೂಡಿಕೊಂಡು ನಾಲ್ಕು ವಿಧವಾಗಿ ಅನ್ನವನ್ನು ಪಚನವಾಗಿಸುತ್ತಿದ್ದೇವೆ.

ಇಲ್ಲಿ ಭಗವಾನನು ಮಾನವರು ತೆಗೆದುಕೊಳ್ಳುವ ನಾಲ್ಕು ವಿಧಗಳಾದ ಆಹಾರವನ್ನು ಪಚನಗೊಳಿಸುವುದು ನಾನೇ ಎಂದು ಹೇಳುತ್ತಿದ್ದಾನೆ.ಹಾಗಾದರೆ ಆ ನಾಲ್ಕು ವಿಧವಾದ ಆಹಾರಗಳು ಏನೆಂದು ತಿಳಿದುಕೊಳ್ಳೋಣ.

1. ಭಕ್ಷ್ಯ:– ದಂತಗಳಿಂದ ಅಗಿದು ತಿನ್ನುವ ಕಠಿಣ ಪದಾರ್ಥಗಳು. ರೊಟ್ಟಿ, ದೋಸೆ ಅಥವಾ ಕುರುಕಲು ತಿಂಡಿಗಳು.

2. ಭೋಜ್ಯ:– ನಾಲಿಗೆಯಿಂದ ಚಪ್ಪರಿಸಿ ನುಂಗುವ ಮೆತ್ತನೆಯ ಪದಾರ್ಥಗಳಾದ ಅನ್ನ ಮೊದಲಾದವು.

3. ಲೇಹ್ಯ:– ನಾಲಿಗೆಯಿಂದ ರುಚಿ ನೋಡಲ್ಪಡುವ ಚಟ್ನಿ, ತೊಕ್ಕುಗಳಂತವು.

4. ಚೋಷ್ಯ :– ಬಾಯಿಯಿಂದ ಹೀರಿಕೊಂಡು ನುಂಗುವ ಪಾಯಸ, ಸಾರು, ಮಜ್ಜಿಗೆ ಮೊದಲಾದದ್ದು.

ಮೇಲೆ ಹೇಳಲಾಗಿರುವುದರ ಅನುಸಾರ ಗ್ರಹಿಸಬೇಕಾಗಿರುವುದು ಏನೆಂದರೆ ನಾಲ್ಕು ವಿಧಗಳ ಆಹಾರಗಳಲ್ಲಿ ದಂತಗಳು ಉಪಯೋಗಿಸಿ ತೆಗೆದುಕೊಳ್ಳುವ ಆಹಾರ ಕೂಡಾ ಇದೆ ಆ ಆಹಾರವೇ ಶಾಕಾಹಾರ. ದಂತಗಳು ಯಾರಿಗೆ ಇವೆ ಎಂದರೆ, ಶಾಕಾಹಾರ ಜೀವಿಗಳು ಮಾತ್ರವೇ ಶಾಕಾಹಾರವನ್ನು ಕಡ್ಡಾಯವಾಗಿ ದಂತಗಳನ್ನು ಉಪಯೋಗಿಸಿ ಮಾತ್ರವೇ ತೆಗೆದುಕೊಳ್ಳಬೇಕು. ಹಾಗಾಗಿ ದಂತಗಳು ಇರುವುದೆಲ್ಲವೂ ಶಾಖಾಹಾರೀಗಳೇ.

ಪ್ರತಿಜೀವಿಗೆ ಆಹಾರ ಭಗವಂತನ ಸೃಷ್ಟಿಯಲ್ಲಿ ಕಡ್ಡಾಯವಾಗಿದೆ. ಯಾವ ಜೀವಿ ಜೀವಿಸಬೇಕೆಂದರೂ, ಆ ಆಹಾರ ತೆಗೆದುಕೊಳ್ಳಲೇಬೇಕು. ಆಹಾರ ತೆಗೆದುಕೊಳ್ಳದೆ ಯಾವ ಜೀವಿಯು ತನ್ನ ಜೀವನ ಕಾಲದುದ್ದಕ್ಕೂ ಜೀವಿಸಲು ಸಾಧ್ಯವಿಲ್ಲ ಆದ್ದರಿಂದ **ಭಗವಂತನ ಸೃಷ್ಟಿಯಲ್ಲಿ ಯಾವ ಪ್ರಾಣಿಯು ಆಹಾರ ತೆಗೆದುಕೊಳ್ಳುವುದು ಪಾಪವಲ್ಲ.. ಆದರೆ ಯಾರು ಯಾವ ಆಹಾರ ತೆಗೆದುಕೊಳ್ಳಬೇಕು ಎನ್ನುವುದೇ ಮುಖ್ಯ.** ಯಾರು ಯಾವ ಆಹಾರ ತೆಗೆದುಕೊಳ್ಳಬೇಕು ಎನ್ನುವುದನ್ನು ಭಗವಂತನೇ ನಿರ್ದೇಶಿಸಿದ್ದಾನೆ ಅದಕ್ಕೆ ಅನುಗುಣವಾಗಿಯೇ, ಅವುಗಳ ಶರೀರಗಳನ್ನು ನಿರ್ಮಿಸಿದ್ದಾನೆ.

ಮಾಂಸಾಹಾರಿಗಳಾದ ಹುಲಿ,ಸಿಂಹ,ಶಾಕಾಹಾರ ತಿನ್ನುವುದಿಲ್ಲ, ತಿನ್ನಲು ಸಾಧ್ಯವೂ ಇಲ್ಲ. ಅಷ್ಟೇ ಅಲ್ಲ ಅವು ಹಸಿ ಮಾಂಸ ಮಾತ್ರವೇ ತಿನ್ನುತ್ತಾ ತಮ್ಮ ಜೀವನ ಕಾಲವನ್ನು ಜೀವಿಸಬಲ್ಲವು ಹಾಗೆ ಮಾನವನು ಹಸಿ ಮಾಂಸ ತಿನ್ನುತ್ತ ಎರಡು ಮೂರು ವಾರವು

ಕೂಡಾ ಜೀವಿಸಲು ಸಾಧ್ಯವಿಲ್ಲ. ಆದರೆ ಶಾಕಾಹಾರ ತೆಗೆದುಕೊಳ್ಳುತ್ತಾ ತನ್ನ ಜೀವನ ಕಾಲವನ್ನು ಜೀವಿಸಬಲ್ಲ. ಅಂದರೆ ಇದರರ್ಥ ಭಗವಂತನು ಮಾನವರಿಗೆ ನಿರ್ದೇಶಿಸಿದ ಆಹಾರ ಶಾಕಾಹರ ಅಲ್ಲವೇ.

ಆದ್ದರಿಂದ **ಹಲ್ಲುಗಳು ಇದ್ದರೂ ಮಾನವನು ಶಾಕಾಹಾರ ತೆಗೆದುಕೊಳ್ಳುವುದು ಪಾಪವಲ್ಲ ಹಾಗೆ ದಂತಗಳು ಇಲ್ಲದ ಹುಲಿ,ಸಿಂಹಗಳಂತಹ ಕ್ರೂರ ಮೃಗಗಳು ಮಾಂಸ ತಿನ್ನುವುದು ಪಾಪವಲ್ಲ**. ಅದು ಭಗವಂತನು ಅವುಗಳಿಗೆ ನಿರ್ದೇಶಿಸಿದ ಸಹಜವಾದ ಆಹಾರ. ಆದ್ದರಿಂದ ಸಸ್ಯಗಳಲ್ಲಿ ಜೀವ ಇದೆಯೇ, ಇಲ್ಲವೇ ಎನ್ನುವುದು ಮುಖ್ಯವಲ್ಲ... ಸೃಷ್ಟಿಗೆ, ಸೃಷ್ಟಿ ನಿಯಮಗಳಿಗೆ ಅನುಗುಣವಾಗಿ ಪ್ರವರ್ತಿಸುತ್ತಿರುವೆವೇ ಇಲ್ಲವೇ ಎನ್ನುವುದು ಮುಖ್ಯ ಹಾಗೆ ಸೃಷ್ಟಿಗೆ, ಸೃಷ್ಟಿ ಧರ್ಮಕ್ಕೆ, ಅಂದರೆ ಪ್ರಕೃತಿಗೆ ಭಗವಂತನಿಗೆ ಅನುಗುಣವಾಗಿ ಪ್ರವರ್ತಿಸಿದವರಿಗೆ, ಜೀವಿಸಿದವರಿಗೆ ಎಂದಿಗೂ ಕಷ್ಟಗಳು ಬರುವುದಿಲ್ಲ. ಅದಕ್ಕೆ ವಿರುದ್ಧವಾಗಿ ಪ್ರವೇಶಿಸಿದರೆ ಕಷ್ಟಗಳು ತಪ್ಪುವುದಿಲ್ಲ.

ಮಾನವನ ಆಹಾರ ಶಾಕಾಹಾರವೆ ಎಂದು ಹೇಳಲು ಈ ಚಿಕ್ಕ ಉದಾಹರಣೆ ನೋಡಿ, ಯಾರಾದರೂ ಮಾಂಸದ ಅಂಗಡಿಗೆ, ಶಾಪಿಂಗ್‌ಗೆ ಹೋದಂತೆ ಹೋಗಿ ಒಂದು ಮಾಂಸದ ತುಂಡನ್ನು ಬಾಯಿಯಲ್ಲಿ ಹಾಕಿಕೊಳ್ಳುವುದಿಲ್ಲ. ಹಾಗೆ ತಿನ್ನಲು ಸಾಧ್ಯವೂ ಇಲ್ಲ.ಆದರೆ ಹಣ್ಣಿನ ಅಂಗಡಿಗಳಲ್ಲಿ, ಒಂದು ಹಣ್ಣು ಸ್ಯಾಂಪಲ್ ನಂತೆ ಬಾಯಲ್ಲಿ ಹಾಕಿಕೊಳ್ಳುತ್ತಾರೆ. ಹಾಗೆ ಮಾವಿನ ಹಣ್ಣು ಬೇರೆ ಯಾವುದೇ ಹಣ್ಣನ್ನಾಗಲಿ ಸ್ವಲ್ಪ ರುಚಿ ನೋಡಿ ತೆಗೆದುಕೊಳ್ಳುತ್ತಾರೆ ಇದರ ಅನುಸಾರ ಮಾನವನ ಸಹಜ ಸಿದ್ಧವಾದ ಆಹಾರ ಶಾಕಾಹಾರವೇ ಎಂದು ನಾವು ಅರ್ಥಮಾಡಿಕೊಳ್ಳಬೇಕು.

ಮತ್ತೊಂದು ಉದಾಹರಣೆಯನ್ನು ನೋಡೋಣ ಒಂದು ಬೆಕ್ಕನ್ನು, ಒಂದು ಕೋಳಿ ಮರಿಯನ್ನು, ಒಂದು ಸೇಬನ್ನು ಒಂದು ಕೋಣೆಯಲ್ಲಿ ಇಟ್ಟರೆ ಬೆಕ್ಕು ಕೋಳಿಮರಿಯನ್ನು ತಿನ್ನುತ್ತದೆ ಹಾಗೆ ಬೆಕ್ಕಿನ ಬದಲು ಒಂದು ಚಿಕ್ಕ ಮಗುವನ್ನು ಆ ಕೋಣೆಯಲ್ಲಿ ಇರಿಸಿದರೆ ಆಪಲ್ ತಿನ್ನುತ್ತಾನೆ ಕೋಳಿ ಮರಿಯನ್ನು ಮಡಿಲಲ್ಲಿ ಇರಿಸಿಕೊಂಡು ಪ್ರೇಮದಿಂದ ಮುದ್ದಾಡುತ್ತಾನೆ. ಅಂದರೆ ಇದರ ಅನುಸಾರ ಮಾನವನ ಸಹಜ ಸಿದ್ಧವಾದ ಆಹಾರ ಶಾಕಾಹಾರ ಎಂದು ತಿಳಿದುಕೊಳ್ಳಬಹುದು.

ಅಷ್ಟೇ ಅಲ್ಲ ಜೀವನವನ್ನು **"ತಿನ್ನುವುದಕ್ಕೆ ಮಾತ್ರ ಜೀವಿಸುತ್ತಿಲ್ಲ. ಜೀವಿಸಬೇಕಾದ್ದರಿಂದ ತಿನ್ನಬೇಕು.ತಿನ್ನುವುದೇ ಬದುಕಲ್ಲ. ಬದುಕಲು ತಿನ್ನಬೇಕು"** ಎಂದು ಹೇಳುತ್ತಾರೆ. ಹಾಗಾಗಿ ಮಾನವರು ಬದುಕಲು ಶಾಕಾಹರ ಸಾಕು.

ಅದೇ ಪತ್ರೀಜಿಯವರು ಬೋಧಿಸುತ್ತಿದ್ದಾರೆ. "**ಮಾನವನು ತಿನ್ನಬೇಕಾದದ್ದು ಆ ಶಾಕಾಹಾರ, ಮಾಡಬೇಕಾದದ್ದು ಧ್ಯಾನ**" ಇದೆ ಆನಂದಮಯ ಜೀವನಕ್ಕೆ ಮಾರ್ಗ.

# ಮಾನವರು ಮಾಂಸವನ್ನು ತಿನ್ನದಿದ್ದರೆ ಪ್ರಾಣಿಗಳು ಹೆಚ್ಚುತ್ತವೆಯೇ!?

ಮಾಂಸ ತಿನ್ನುವವರನ್ನು ಮಾಂಸ ತಿನ್ನಬಾರದು ಎಂದು ಯಾರಾದರೂ ಹೇಳಿದರೆ ಕೂಡಲೇ ಅವರು ನಾವು ಮಾಂಸ ತಿನ್ನದಿದ್ದರೆ ಆ ಪ್ರಾಣಿಗಳು ಹೆಚ್ಚುವುದಲ್ಲವೇ? ನಾವು ಭೂಮಿ ಮೇಲೆ ತಿರುಗಲು ಸಾಧ್ಯವೇ? ಅವೇ ನಮ್ಮನ್ನು ತಿಂದುಬಿಡುತ್ತದೆ ಎಂದು ಪ್ರಶ್ನಿಸುತ್ತಾರೆ. ಅವರು ಅದಕ್ಕಿಂತ ಹೆಚ್ಚಾಗಿ ಆಲೋಚಿಸುವುದಿಲ್ಲ. ಈ ಮಾತು ಕೇಳುವವರಿಗೆ ನಿಜವೇ ಎನಿಸುತ್ತದೆ.

ಆದರೆ ಆಲೋಚಿಸಿದರೆ ಅದು ಅವಾಸ್ತವ ಎಂದು ತಿಳಿಯುತ್ತದೆ. ಏಕೆಂದರೆ ಸ್ವಲ್ಪ ಆಲೋಚಿಸಿ ತಿನ್ನದಿದ್ದರೆ ಪ್ರಾಣಿಗಳ ಸಂಖ್ಯೆ ಹೆಚ್ಚುವುದಿಲ್ಲವೇ? ಎನ್ನುತ್ತಿದ್ದಾರೆ... ಇದು ಶುದ್ಧ ಸುಳ್ಳು ಬೆಳೆದಿರುವುದನ್ನು ತಿನ್ನುತ್ತಿದ್ದಾರಾ, ಬೆಳೆಸಿ ತಿನ್ನುತ್ತಿದ್ದಾರಾ... ಆಲೋಚಿಸಿದರೆ ಖಂಡಿತವಾಗಿ ಇವರು ತಿನ್ನವುದಕ್ಕಾಗಿಯೇ ಪ್ರಾಣಿಗಳನ್ನು ಬೆಳೆಸುತ್ತಿದ್ದಾರೆ.

ನೋಡಿದರೆ ಮೀನುಗಳು, ಸೀಗಡಿಗಳು ಕೆರೆಯಲ್ಲಿ ಬೆಳೆಸುತ್ತಾರೆ. ಕೋಳಿಗಳನ್ನು ಫಾರಂ ಗಳಲ್ಲಿ ಬೆಳೆಸುತ್ತಿದ್ದಾರೆ. ಮೇಕೆ, ಕುರಿಗಳನ್ನು ಮಂದೆಗಳಾಗಿ ಬೆಳೆಸುತ್ತಿದ್ದಾರೆ ನಿಜವಾಗಿ ಹಾಗೆ ಬೆಳೆಸದಿದ್ದರೆ ಅವು ಬೆಳೆಯುತ್ತವೆಯೇ ಇಷ್ಟು ಮಂದಿಗೆ ಮಾಂಸ ಸಿಗುವುದೇ?

ಯೋಚಿಸಿದರೆ, ತಿನ್ನಲೆಂದು ಉದ್ದೇಶ ಪೂರ್ವಕವಾಗಿ ಪ್ರಾಣಿಗಳನ್ನು ವಿವಿಧ ತಂತ್ರಜ್ಞಾನಗಳನ್ನು ಬಳಸಿ ಬೆಳೆಸದೆ ಇದ್ದರೆ, ಯಾವುದು ಅಷ್ಟು ಸಂಖ್ಯೆಯಲ್ಲಿ ಬೆಳೆಯುವುದಿಲ್ಲ ಎಂದು ತಿಳಿಯುತ್ತದೆ, ಹುಲಿ, ಸಿಂಹ, ನರಿಯು, ತೋಳ ಇವುಗಳನ್ನು ಯಾರಾದರೂ ಬೆಳೆಸುವರೆ ಅವುಗಳನ್ನು ಯಾರು ತಿನ್ನುವುದಿಲ್ಲ ಹಾಗಾದರೆ ಅವು ಬೆಳೆಯುತ್ತಿವೆಯೇ? ಕಾಡುಗಳಿಂದ ಬಂದು ಮಾನವರನ್ನು ತಿನ್ನುತ್ತಿವೆಯೇ? ಇಲ್ಲ ಇದರಿಂದ ಏನು ಅರ್ಥವಾಗುತ್ತಿದೆ? ಬೆಳೆಸಿರುವುದು ಬೆಳೆಯುತ್ತಿದೆ ಹೊರತು ಬೆಳಸದೆ ಇರುವುದು ಬೆಳೆಯುತ್ತಿಲ್ಲ ಮೇಲಾಗಿ ವನ್ಯ ಮೃಗಗಳನ್ನು ಅವುಗಳ ಸಂಕುಲಗಳು ನಶಿಸದೆ ಇರುವಂತೆ ಸಂರಕ್ಷಿಸುತ್ತಿದ್ದಾರೆ..

ಆಲೋಚಿಸಿ ನೋಡಿದಾಗ ತಿಳಿಯುವುದು, ಮಾನವರು ತಿನ್ನುವ ಪ್ರಾಣಿಗಳೆಲ್ಲವೂ ಮಾನವರಿಗೆ ಉಪಕಾರ ಮಾಡುವಂತದ್ದು ಹೊರತು ಅಪಕಾರ ಮಾಡುವುದಿಲ್ಲ ಅಷ್ಟೇ ಅಲ್ಲ ಅವು ಮಾನವರನ್ನು ತಿನ್ನುವುದಿಲ್ಲ ಹಾನಿಯೂ ಮಾಡುವುದಿಲ್ಲ .

ಆಲೋಚಿಸಿ ಕೋಳಿಗಳು ಬೆಳಗ್ಗೆ ನಮ್ಮನ್ನು ನಿದ್ರೆಯಿಂದ ಎಬ್ಬಿಸುತ್ತದೆ ನಮ್ಮ ಮನೆಯ ಸುತ್ತಾ ಇರುವ ಕ್ರಿಮಿ ಕೀಟಗಳನ್ನು, ಹುಳುಗಳನ್ನು ಹೆಕ್ಕಿ ತಿನ್ನುತ್ತವೆ. ಅದರಿಂದ ಮಾನವರಿಗೆ ಆಗುವ ಹಾನಿಯನ್ನು ತಪ್ಪಿಸುತ್ತಿವೆ. ಹಸು, ಎಮ್ಮೆ ಮೇಕೆಗಳು ಹಾಲನ್ನು ಕೊಟ್ಟು ಮಾನವರ ಹಸಿವನ್ನು ತೀರಿಸುತ್ತಿವೆ. ಆರೋಗ್ಯವನ್ನು ಕಾಪಾಡುತ್ತಿವೆ. ಹಸುವಿನ ಸಗಣಿ, ಬೆರಣಿಯಾಗಿ ಉಪಯೋಗವಾಗುತ್ತದೆ. ಕುರಿಗಳ ಉಣ್ಣೆ ಕಂಬಳಿಗಳಾಗಿ ಶಾಲುಗಳಾಗಿ, ದುಪಟ್ಟಗಳಾಗಿ ಉಣ್ಣೆ ವಸ್ತ್ರಗಳಾಗಿ ಮಾನವರನ್ನು ಚಳಿಯಿಂದ ರಕ್ಷಿಸುತ್ತಿವೆ. ಮೀನುಗಳು ಕೆರೆಯಲ್ಲಿನ ಸೂಕ್ಷ್ಮ ಕ್ರಿಮಿಗಳನ್ನು, ಸೊಳ್ಳೆಗಳ ಮೊಟ್ಟೆಗಳನ್ನು ತಿನ್ನುತ್ತವೆ, ಹಾಗೆ ನೀರನ್ನು ಶುದ್ಧ ಪಡಿಸುತ್ತಾ ಒಳ್ಳೆಯ ನೀರನ್ನು ಕೊಡುತ್ತಾ ಮಾನವನ ಆರೋಗ್ಯವನ್ನು ರಕ್ಷಿಸುತ್ತೇವೆ. ಹೀಗೆ ಆಲೋಚಿಸುತ್ತಾ ಹೋದರೆ ಮಾನವರು ತಿನ್ನುವ ಪ್ರಾಣಿಗಳೆಲ್ಲವೂ ಮಾನವರಿಗೆ ಉಪಕಾರವೇ ಮಾಡುತ್ತಿವೆ ಆದರೆ ಅಪಕಾರ ಮಾಡುತ್ತಿಲ್ಲ.

ಅಂತಹ ಪ್ರಾಣಿಗಳನ್ನು ತಿನ್ನುತ್ತಾ! ಕ್ರೂರವಾಗಿ ಹಿಂಸೆ ಸುತ್ತ! ಮೇಲಾಗಿ ತಿನ್ನದಿದ್ದರೆ ಅವು ಹೆಚ್ಚುತ್ತಿರಲಿಲ್ಲವೇ? ಎಂದು ತಾನು ಮಾಡುವ ಕ್ರೂರವಾದ ಕೆಲಸವನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆಂದರೆ! ಇವರದ್ದು ಎಂತಹ ಮನಸ್ಥಿತಿ ಆದ್ದರಿಂದ ಕುಂಟು ನೆಪಗಳನ್ನು ಹೇಳಬೇಡಿ. ಆಲೋಚಿಸಿ ಮಾನವನು ಜೀವಿಸಲು ಭಗವಂತನು ಶಾಖ ಹಾರವನ್ನು ನೀಡಿದ್ದಾನೆ ಶಾಖಾಹಾರವನ್ನು ತಿನ್ನಿ ಅಷ್ಟೇ ಹೊರತು ತಾನು ಜೀವಿಸಲು ಇನ್ನೊಂದು ಜೀವಿಯ ಪ್ರಾಣವನ್ನು ತೆಗೆಯುವುದು ಸೃಷ್ಟಿಗೆ, ಸೃಷ್ಟಿಧರ್ಮಕ್ಕೆ ವಿರುದ್ಧವೆಂದು ತಿಳಿದುಕೊಳ್ಳಿ.

ಯಾರಿಗಾದರೆ ಪ್ರತಿ ಶರೀರದಲ್ಲಿ ಪರಮಾತ್ಮ ಕಾಣಿಸುವನು! ಅವರಿಗೆ ಯಾರನ್ನಾದರೂ ಕಷ್ಟಪಡಿಸುವುದು, ಅವರ ಯಾರ ಮೇಲಾದರೂ ಅತ್ಯಾಚಾರ ಮಾಡುವುದು, ಬಂಧಿಸುವುದು ಅಥವಾ ಪ್ರಾಣಿಯನ್ನಾದರೂ ಸಾಯಿಸುವುದು, ಹಿಂಸಿಸುವುದು ಅಸಾಧ್ಯವಾದ ಕೆಲಸ. ಅಂತಹವರು ಎಲ್ಲದರ ಮೇಲೆ ದಯೆ ತೋರಿಸುತ್ತಾರೆ.

ಧ್ಯಾನ ಮಾಡಿ ನೀವು ಕೂಡ ಹಾಗೆಯೇ ಪ್ರವರ್ತಿಸುವಿರಿ ಎಂತಹ ಪ್ರಶ್ನೆಗಳನ್ನು ಹಾಕುವುದಿಲ್ಲ, ವಾದಗಳನ್ನು ಮಾಡಲಾರೀರಿ ದಯಾಸ್ವರೂಪರು ಆಗುವಿರಿ. ಏಕೆಂದರೆ **"ಯಾವುದನ್ನಾದರೂ ಸೃಷ್ಟಿ ಮಾಡಿದವನಿಗೆ ತಿಳಿಯುತ್ತದೆ... ಆದರೆ ಸೃಷ್ಟಿಸಲ್ಪಟ್ಟಿರುವವರಿಗೆ ಏನು ತಿಳಿಯುತ್ತದೆ"?**

**ಕ್ರೂರ ಮೃಗಗಳನ್ನು ರಕ್ಷಿಸಿ... ನಮ್ಮನ್ನು ಭಕ್ಷಿಸುವುದು ನ್ಯಾಯವೇ..**



**ಪ್ರಾಣಿಗಳನ್ನು ಆನಂದವಾಗಿ ಜೀವನ ಮಾಡುವುದಕ್ಕೆ ಬಿಡೋಣ.**



**ಮಣ್ಣಿನಿಂದ ದೇವ ದೇವತೆಗಳ ನಿರ್ಜೀವ ಪ್ರತಿಮೆಗಳನ್ನು ಮಾಡಿ ಅವುಗಳನ್ನು ಪೂಜಿಸುತ್ತಾ...ಅವಗಳ ಎದುರಿಗೆ ಸಜೀವ ಪ್ರಾಣಿಗಳನ್ನು ಬಲಿ ಕೊಡುವವರಿಗೆ ಅಂತ್ಯಕಾಲದಲ್ಲಿ ಅತಿ ದುಃಖ ಯಾತನೆಗಳು ಉಂಟಾಗುತ್ತದೆ. –ಕಬೀರ್**

# ಕೋಳಿಮೊಟ್ಟೆ ಶಾಕಾಹಾರವೇ?



ಎಷ್ಟೋ ಜನರು ಕಷ್ಟಗಳಲ್ಲಿ ಇದ್ದಾರೆ, ಕಷ್ಟಗಳನ್ನು ತೊಲಗಿಸಬೇಕೆಂದು, ಮಕ್ಕಳಿಲ್ಲದವರು ಮಕ್ಕಳನ್ನು ಪ್ರಸಾದಿಸಬೇಕೆಂದು, ತಮ್ಮ ಮೇಲೆ 'ದಯೆ' ತೋರಬೇಕೆಂದು ದೇವರನ್ನು ಪ್ರಾರ್ಥಿಸುತ್ತಾರೆ. ಬೇಡಿ ಕೊಳ್ಳುತ್ತಾರೆ ದಿನವಾಗಿ ಅರ್ಥಿಸುತ್ತಾರೆ... 'ದಯೆ' ತೋರಬೇಕೆಂದು ಬೇಡಿಕೊಳ್ಳುತ್ತಾರೆ ಹೊರತು ಅದಕ್ಕಿಂತ ಹೆಚ್ಚಾಗಿ ಆಲೋಚಿಸುವುದಿಲ್ಲ

ಇನ್ನೂ ಕೆಲವರು ತಮ್ಮ ಮಕ್ಕಳು ಚಿಕ್ಕಂದಿನಲ್ಲಿ ಸತ್ತು ಹೋದರು, ಇರುವ ಒಬ್ಬ ಮಗನನ್ನು ದೊಡ್ಡವನಾದ ನಂತರ ಅಪಘಾತದಲ್ಲಿ ಸತ್ತರು ತಮ್ಮ ಕುಟುಂಬದಲ್ಲಿ ಮಕ್ಕಳು ಯಾವ ವಿಧವಾಗಿ ದೂರವಾದರೂ ವಿಪರೀತವಾದ ದುಃಖಕ್ಕೆ ಒಳಗಾಗುತ್ತಾರೆ. ಅವರು ಭಗವಂತನು ತಮಗೆ ಅನ್ಯಾಯ ಮಾಡಿದ ಎಂದು ಆತನಿಗೆ ತಮ್ಮ ಮೇಲೆ ದಯೆ ಇಲ್ಲವೆಂದು ಶೋಕಿಸುತ್ತಾರೆ.. ಅವರು ಅದಕ್ಕಿಂತ ಹೆಚ್ಚಾಗಿ ಅಲೋಚಿಸಲಾರರು.

ಒಮ್ಮೆ ಯೋಚಿಸಿ ಹಾಗೆ ತಮ್ಮ ಮೇಲೆ ಮೇಲಿರುವ ಭಗವಂತ 'ದಯೆ' ತೋರಿಸುತ್ತಿಲ್ಲ ಎಂದು ಶೋಕಿಸುತ್ತಿದ್ದಾರೆ ಆದರೆ ಲೋಕದಲ್ಲಿ, ಎಷ್ಟು ಜನ ತಮ್ಮ ಆಶ್ರಯದಲ್ಲಿ ಜೀವಿಸುತ್ತಿರುವ ಮೂಕ ಜೀವಿಗಳ ಮೇಲೆ ಪ್ರಾಣಿಗಳ ಮೇಲೆ 'ದಯೆ' ತೋರಿಸುತ್ತಿದ್ದಾರೆ. ಆಲೋಚಿಸಿ ಎಷ್ಟು ಜನ ಪ್ರಾಣಿಗಳನ್ನು ಕ್ರೂರವಾಗಿ ಕೊಂದು ಭಕ್ಷಿಸುತ್ತಿದ್ದಾರೆ, ಎಷ್ಟು ಜನ ಎಷ್ಟು ಕೋಳಿ ಮೊಟ್ಟೆಗಳನ್ನು ಆಹಾರವಾಗಿ ತೆಗೆದುಕೊಳ್ಳುತ್ತಿದ್ದಾರೆ, ದಿನವೂ ತಿನ್ನುತ್ತಿದ್ದಾರೆ ಅವರು ಇದರ ಕುರಿತು ಆಲೋಚಿಸುತ್ತಿರುವರೇ..

ಮೊಟ್ಟೆ ಎಂದರೆ ಭಗವಂತನ ಸೃಷ್ಟಿಯಲ್ಲಿ ಮುಂದೆ ಜನಿಸಲಿರುವ ಒಂದು ಪಕ್ಷಿಯ ಪಿಂಡ ಅಂದರೆ, ಆ ಪಕ್ಷಿಯ ಮರಿ. ಮಾನವನಿಗೆ ಮಕ್ಕಳು ಗರ್ಭದಲ್ಲಿ ಬೆಳೆಯುತ್ತಾರೆ ಪಕ್ಷಿಗಳಿಗೆ ಮರಿಗಳು ಮೊಟ್ಟೆಯಲ್ಲಿ ಹುಟ್ಟುತ್ತವೆ. ಎರಡಕ್ಕೂ ವ್ಯತ್ಯಾಸ ಇಷ್ಟೇ. ಮೊಟ್ಟೆಯನ್ನು ತಿನ್ನುವುದೆಂದರೆ, ಗರ್ಭವನ್ನು ವಿಚ್ಛಿನ್ನ ಗೊಳಿಸುವುದೇ ಆಗಿರುತ್ತದೆ. ತಯಾರಾಗುತ್ತಿರುವ ಮಗುವನ್ನು ಪಿಂಡದಶೆ ಯಲ್ಲಿ ಹತ್ಯೆ ಮಾಡುವುದು.

ಅದಕ್ಕೆ ನೋಡಿ ಯಾವ ಪಕ್ಷಿಗಳಾದರೂ ಸರಿಯೇ ತಮ್ಮ ಮೊಟ್ಟೆಗಳನ್ನು ಎಷ್ಟು ಜಾಗೃತಿಯಾಗಿ ಕಾಪಾಡಿಕೊಳ್ಳುತ್ತವೆ. ಯಾವ ಪ್ರಾಣಿ ಆದರೂ ಸರಿ ಮೊಟ್ಟೆಗಳ ಬಳಿಗೆ ಬರುತ್ತಿದ್ದರೆ ತಮ್ಮ ಪ್ರಾಣಗಳನ್ನು ಅರ್ಪಿಸಿ ಮೊಟ್ಟೆಗಳನ್ನು ಕಾಪಾಡಿಕೊಳ್ಳುತ್ತವೆ. ಕಾರಣ ಅವು ತಮ್ಮ ಹುಟ್ಟಲಿರುವ ಮಕ್ಕಳು ಎನ್ನುವ ಮಮಕಾರ.

ಅಂದರೆ ಮೊಟ್ಟೆಗಳನ್ನು ತಿಂದರೆ ಮರಿಗಳನ್ನು ಪಿಂಡದ ಹಂತದಲ್ಲಿಯೇ ಸಾಯಿಸಿದಂತೆ. ಹಾಗಾದರೆ ನಾವು ನಮ್ಮ ಕೆಳಗಿನ ಜೀವಿಗಳ ಮೇಲೆ ನಿಜವಾಗಿ ದಯೆ ತೋರಿದರೆ ಅವುಗಳ ಮರಿಗಳನ್ನು ಹಾಗೆ ಕೊಲ್ಲಲು ಸಾಧ್ಯವೇ?

ಆಲೋಚಿಸಿ **"ನಮ್ಮ ಕೆಳಗಿನ ಜೀವಿಗಳ ಮೇಲೆ 'ದಯೆ' ತೋರಿಸದಿರುವಾಗ ನಮ್ಮ ಮೇಲಿರುವ ಭಗವಂತನು ನಮ್ಮ ಮೇಲೆ ಹೇಗೆ ದಯೆ ತೋರುತ್ತಾನೆ"** ಇದು ಅಸಂಭವ. ಆದ್ದರಿಂದ ಗರ್ಭಗಳನ್ನು ವಿಚ್ಛಿನ್ನ ಮುಂದೆ ಗೊಳಿಸಿನವನು ಯಾವುದೋ ಜನ್ಮದಲ್ಲಿ ಗರ್ಭ ತಳೆಯದಂತೆ.. ಮಕ್ಕಳನ್ನು ಸಾಯಿಸಿದವನು ಮಕ್ಕಳು ಇಲ್ಲದಂತೆ ಬಾಧೆಯನ್ನು ಅನುಭವಿಸಬೇಕಾಗುತ್ತದೆ.

ಈ ಸೃಷ್ಟಿಯಲ್ಲಿನ ಒಂದು ಧರ್ಮ ಸೂಕ್ಷ್ಮ ಏನೆಂದರೆ **"ಏನು ಮಾಡಿದರೆ ಅದೇ ಅನುಭವಿಸುತ್ತೇವೆ. ಅಂದರೆ ಎಂತಹ ಕರ್ಮ ಮಾಡಿದರೆ ಅಂತಹ ಫಲಿತ ಅನುಭವಿಸುತ್ತೇವೆ"**. ಮಗುವನ್ನು ಕಳೆದುಕೊಂಡ ಆ ತಾಯಿ ಕೋಳಿ ಎಷ್ಟು ಕ್ಷೋಭೆ ಅನುಭವಿಸುತ್ತದೆ.ಅದರ ಕ್ಷೋಭೆಗೆ ಮೊಟ್ಟೆಗಳನ್ನು ತಿನ್ನುವವನು ಕಾರಣವಾಗುತ್ತಾನೆ. ಮುಂದೆ ಮಕ್ಕಳಿಲ್ಲದೆ...ಮಕ್ಕಳನ್ನು ಕಳೆದುಕೊಂಡು, ಯಾವುದೋ ಒಂದು ಜನ್ಮದಲ್ಲಿ ಅವನು ಕೂಡ ಅಷ್ಟು ಪುತ್ರ ಶೋಕ, ಮಕ್ಕಳನ್ನು ಕಳೆದುಕೊಂಡ ಶೋಕ ಅನುಭವಿಸಲೇಬೇಕು.

ಆದ್ದರಿಂದ ಪ್ರತಿ ಮಾನವನು 'ಭೂತದಯೆ' ಹೊಂದಿರಬೇಕು. ಅಮಾಯಕ, ನಿಸ್ಸಹಾಯಕ,ಮೂಕ ಜೀವಿಗಳ ಮೇಲೆ 'ದಯೆ' ತೋರಿ ಅವು ತಮಗೆ ಆಹಾರವಲ್ಲವೆಂದು ತಿಳಿದುಕೊಳ್ಳಬೇಕು.

ಹಾಗೆಯೇ, ಕರ್ಮ ಸಿದ್ಧಾಂತದ ಕುರಿತು ಮಹಾಪುರುಷರ ಅಭಿಪ್ರಾಯಗಳನ್ನು ತಿಳಿದುಕೊಳ್ಳೋಣ

**1. ತಿರುಮೂಲಕ್:–** ಮೊದಲು ಮಾಡಿದ ಕರ್ಮಗಳ ಫಲವನ್ನು ನಂತರ ಅನುಭವಿಸದೆ ತಪ್ಪುವುದಿಲ್ಲ.

**2. ಗುರು ಸಾಹೇಬ್:–** "ಪ್ರತಿ ಜೀವಿಯು ತಾನು ಮಾಡಿದ ಕರ್ಮ ಫಲಗಳನ್ನು ಅನುಭವಿಸಬೇಕಾಗಿರುತ್ತದೆ. ಇದೇ ಪರಮಾತ್ಮನ ದರ್ಬಾರ್ ನಲ್ಲಿನ ಶಾಶ್ವತ ಕಾನೂನು".

**3. ತುಳಸಿ ಸಾಹೇಬ್:–** ಬ್ರಹ್ಮಾಂಡ ನಶಿಸಿ ಹೋಗಬಹುದು ಆದರೆ, ಪ್ರತಿ ಜೀವಿಯು ತಾನು ಮಾಡಿದ ಕರ್ಮಗಳ ಫಲಿತಗಳನ್ನು ಅನುಭವಿಸಲೇಬೇಕೆಂಬ ನಿಯಮ ಮಾತ್ರ ಬದಲಾಗದು.

**4. ದರಿಯಾ ಸಾಹೇಬ್:–** "ಜೈಸಿ ಕರ್ನಿ ವೈಸಿ ಬರ್ನಿ ಅಂದರೆ ಎಂತಹ ಕರ್ಮಗಳು ಅಂತಹ ಫಲಿತಗಳು" "ಖೂನ್ ಕೆ ಬದಲೇ ಖೂನ್" ಅಂದರೆ 'ರಕ್ತಕ್ಕೆ ರಕ್ತ' ಎನ್ನುವ ನಿಯಮವೇ ಪರಮಾತ್ಮನ ದರ್ಬಾರ್ ನಲ್ಲಿ ನಡೆಯುತ್ತದೆ.


**5. ಗುರುನಾನಕ್:–** ಜೀವಾತ್ಮನು ಮಾಡಿದ ಕರ್ಮಗಳು ಹಿಂದೆ ಬರುತ್ತದೆ ತಾನು ಬಿತ್ತಿದ ಕರ್ಮಗಳ ಫಲಿತಗಳನ್ನು ಸ್ವಯಂ ಅನುಭವಿಸಬೇಕಾಗಿರುತ್ತದೆ.

**6. ಗುರು ರವಿದಾಸ್:–** ಜೀವನ ಎನ್ನುವ ಹೊಲದಲ್ಲಿ ಇಷ್ಟ ಬಂದಾಗ ಬಿತ್ತನೆಯನ್ನು ಮಾಡಿ ಕರ್ಮಗಳನ್ನು ಮಾಡುವ ಸ್ವೇಚ್ಛೆ ಇದೆ ಆದರೆ ಫಲಿತ ಮಾಡಿರುವ ಬಿತ್ತನೆಗೆ ಅನುಗುಣವಾಗಿರುತ್ತದೆ.

**7. ಕಬೀರ್ ದಾಸ್:–** ಯಾವ ಕೈ ಕರ್ಮಗಳನ್ನು ಆಚರಿಸುವುದು ಆ ಕೈಯ್ಯಿ ಫಲಿತಗಳನ್ನು ಅನುಭವಿಸುತ್ತದೆ.

**8. ಗೌತಮ ಬುದ್ಧ:–** ಮಾನವನು ಪರ್ವತ ಶಿಖರಗಳಲ್ಲಾಗಲಿ, ಗುಹೆಗಳಲ್ಲಿ, ಸಮುದ್ರದ ಆಳದಲ್ಲಿ, ಅಥವಾ ಆಕಾಶದಲ್ಲಿ ಎಲ್ಲಿಗೆ ಹೋದರು...ಅಲ್ಲಿ ಅಡಗಿಕೊಂಡರು. ತಾನು ಮಾಡಿದ ಕರ್ಮಗಳ ಫಲಿತಗಳಿಂದ ತಪ್ಪಿಸಿಕೊಳ್ಳಲಾರರು. ಈ ಸೃಷ್ಟಿಕರ್ತನ ಬಾಗಿಲಲ್ಲಿ ಸಂಪೂರ್ಣ ನ್ಯಾಯವಿದೆ.

**9. ರಾಮಕೃಷ್ಣ ಪರಮಹಂಸ:–** ಖಾರ ತಿಂದರೆ ಬಾಯಿ ಉರಿಯುತ್ತದೆ. ಸಿಹಿ ತಿಂದರೆ ಬಾಯಿ ಮಧುರವಾಗಿರುತ್ತದೆ ಈ ವಿಧವಾಗಿ ಇನ್ನೂ ಎಷ್ಟೋ ಜನ ಮಹಾತ್ಮರು ಕರ್ಮ ಸಿದ್ದಾಂತದ ಕುರಿತು ಹೇಳಿದ್ದಾರೆ.ಅದರಿಂದ ಭಗವಂತನ ಸೃಷ್ಟಿಯಲ್ಲಿ ಇರುವ ನಾವು ಭಗವಂತನ ಸೃಷ್ಟಿ ಧರ್ಮ ಸೂಕ್ಷ್ಮಗಳ ಪ್ರಕಾರ ಜೀವಿಸಬೇಕು ಅಂದರೆ ಕರ್ಮಗಳು




ಮಾಡಬೇಕು. ಮುಖ್ಯವಾಗಿ ನಮ್ಮಿಂದ ಸೃಷ್ಟಿಯಲ್ಲಿನ ಯಾವ ಜೀವಿಗೆ, ಪ್ರಾಣಿಗೆ ಹಾನಿ,ನಷ್ಟ,ಕಷ್ಟ ಉಂಟಾಗದಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಅದರ ಫಲಿತ ಅನುಭವಿಸ ಬೇಕಾಗಿರುತ್ತದೆ. ನಂತರ ಬಾಧೆ ಪಟ್ಟರೆ ಪ್ರಯೋಜನವಿಲ್ಲ.

ಹೀಗೆ ನಾವು ಮಾಂಸಾಹಾರಿಗಳಿಗೆ ಹೇಳಿದರೆ, ಕೆಲವರು ಏನು ಹೇಳುತ್ತಾರೆ ಎಂದರೆ,ನಾವು ತಿನ್ನುವ ಮೊಟ್ಟೆ ಮರಿಗಳಾಗುವುದಿಲ್ಲ ಆದ್ದರಿಂದ ತಿನ್ನುತ್ತಿದ್ದೇವೆ ಎಂದು ಸಮರ್ಥಿಸಿಕೊಳ್ಳುತ್ತಾ ಇರುತ್ತಾರೆ. ಆದರೆ ಅದಕ್ಕಿಂತ ಮುಂದಕ್ಕೆ ಏನಿದೆ ಎಂದು ಆಲೋಚಿಸುವುದಿಲ್ಲ.

ಸ್ವಲ್ಪ ಆಲೋಚಿಸಿ, ಮಾನವರ ವಿಷಯವನ್ನೇ ತೆಗೆದುಕೊಳ್ಳೋಣ ಸ್ತ್ರೀಯರಲ್ಲಿ ನಿಯಮಿತ ಕಾಲದಲ್ಲಿ ಅಂದರೆ ಪ್ರತಿ ತಿಂಗಳು ಒಂದು ಅಂಡ ಬಿಡುಗಡೆಯಾಗುತ್ತದೆ. ಆ ಸಮಯದಲ್ಲಿ ಪುರುಷ ಸಂಪರ್ಕ ಆದರೆ ಗರ್ಭ ತಳೆಯುತ್ತಾರೆ ಅಂಡವೇ ಮಗುವಾಗಿ ಬದಲಾಗುತ್ತದೆ. ಪುರುಷ ಸಂಪರ್ಕ ಆಗದಿದ್ದರೆ ಅದು ವಿಸರ್ಜಿಸಲ್ಪಡುತ್ತದೆ. ಅದನ್ನು ಮುಟ್ಟು ಎನ್ನುತ್ತಾರೆ. ಮುಟ್ಟು ಎಷ್ಟು ದೋಷವೆಂದರೆ.. ಮುಟ್ಟಾದವರನ್ನು ಮೂರು ದಿನಗಳು ದೂರವಾಗಿ ಇರಿಸುತ್ತಾರೆ. ಅಸ್ಪೃಶ್ಯರಂತೆ ನೋಡುತ್ತಾರೆ.

ಹಾಗೆಯೇ ಕೋಳಿಯಲ್ಲೂ ಕೂಡ ನಿಯಮಿತ ಕಾಲದಲ್ಲಿ ಅಂದರೆ 24 ಗಂಟೆಗಳಲ್ಲಿ ಒಂದು ಅಂಡ ತಯಾರಾಗುತ್ತದೆ. ಆಗ ಅದು ಹುಂಜದ ಸಂಪರ್ಕವಾದರೆ, ಆ ಅಂಡ ಅಂದರೆ ಮೊಟ್ಟೆ ಮರಿಯಾಗಿ ಬದಲಾಗುತ್ತದೆ. ನಿಜವಾದ ಸಂಪರ್ಕ

ನಡೆಯದಿದ್ದರೆ,ಮೊಟ್ಟೆ ಮರಿಯಾಗಿ ಬದಲಾಗುವುದಿಲ್ಲ. ಮರಿಯಾಗಿ ಬದಲಾಗದ ಮೊಟ್ಟೆಗೂ ಮತ್ತೆ ಮರಿಯಾಗಿ ಬದಲಾಗುವ ಮೊಟ್ಟೆಗೂ ಇದೆ ವ್ಯತ್ಯಾಸ. ಅಷ್ಟೇ ಹೊರತು ಮರಿಯಾಗಿ ಬದಲಾದ ಮೊಟ್ಟೆಯಲ್ಲಿನ ಪದಾರ್ಥಕ್ಕೆ ಮರಿಯಾಗಿ ಬದಲಾಗದ ಮೊಟ್ಟೆಯಲ್ಲಿನ ಪದಾರ್ಥಕ್ಕೆ ಯಾವ ವ್ಯತ್ಯಾಸ ಇರುವುದಿಲ್ಲ. ಅಂದರೆ ಯಾವ ಮೊಟ್ಟೆಯಲ್ಲಿರುವ ಪದಾರ್ಥವಾದರೂ ಒಂದೇ. ಎರಡು ಮಾಂಸಾಹಾರವೇ.

ಒಂದು ವಿಧವಾಗಿ ಮರಿಯಾಗದಿರುವ ಮೊಟ್ಟೆ ಸ್ತ್ರೀಯರ ಮುಟ್ಟಿಗೆ ಸಮಾನ ಹಾಗಾದರೆ ಮುಟ್ಟು ದೋಷವೆಂದು ಹೇಳಿಕೊಳ್ಳುತ್ತೇವೆ. ಅಂತಹ ಮೊಟ್ಟೆಯನ್ನು ಹೇಗೆ ತಿನ್ನಬಲ್ಲೆವು. ಆದ್ದರಿಂದ ಆಲೋಚಿಸಿ ಯಾವ ಮೊಟ್ಟೆಯಾದರೂ ಪಕ್ಷಿಯ ರಕ್ತ ಮಾಂಸಗಳಿಂದ ತಯಾರಾಗಿರುವುದೇ ಮೊಟ್ಟೆಯು ಗಿಡಕ್ಕೆ ಹುಟ್ಟಿರುವುದಲ್ಲ ಆದ್ದರಿಂದ ಮರಿಯಾದರೂ, ಮರಿಯಾಗದಿದ್ದರೂ ಮೊಟ್ಟೆ ಎನ್ನುವುದು ಶಾಕಾಹಾರ ಅಲ್ಲವೆಂದು ತಿಳಿದುಕೊಳ್ಳಿ.

ಅಷ್ಟೇ ಅಲ್ಲ ಕೋಳಿ ಅಸಹ್ಯಕಾರವಾದ ಪದಾರ್ಥಗಳು ಅಂದರೆ ಉಗುಳು, ಸಿಂಬಳ, ಮಲ, ವಾಂತಿಯಂತಹ ಪದಾರ್ಥಗಳೇ ಅಲ್ಲದೆ ಹುಳು, ಹುಪ್ಪಟೆ, ಕೊಳೆತ ಪದಾರ್ಥಗಳು ತಿನ್ನುತ್ತಾ ಮೊಟ್ಟೆಯನ್ನು ತಯಾರಿಸುತ್ತದೆ ಹಾಗೆ ತಯಾರಾದ ಪದಾರ್ಥವನ್ನು ನಾವು ಹೇಗೆ ತಿನ್ನಬಲ್ಲೆವು!?

ಅಷ್ಟೇ ಅಲ್ಲ ಈ ಸೃಷ್ಟಿ ಸೃಷ್ಟಿಯಲ್ಲಿರುವ 84 ಲಕ್ಷಗಳ ಜೀವರಾಶಿಗಳೊಂದಿಗೆ ಈ ಸೃಷ್ಟಿ ಎಷ್ಟೋ ಕೋಟಿ ಸಂವತ್ಸರಗಳಿಂದ ಹೀಗೆ ಮುಂದುವರೆಯುತ್ತಾ ಇದೆ ಅದಕ್ಕೆ ಮುಖ್ಯ ಕಾರಣ ಈ ಸೃಷ್ಟಿಯಲ್ಲಿ ಭಗವಂತನು ಏರ್ಪಾಟು ಮಾಡಿದ ಪುನರುತ್ಪತ್ತಿಯೇ ಕಾರಣ ಈ ಸೃಷ್ಟಿ ಕ್ರಮ ಮುಂದುವರಿಯಬೇಕೆಂದು ಏರ್ಪಾಟು ಮಾಡಿದ್ದಾನೆ.ಹಾಗೆ ಜೀವಿಗಳ ಪುನರುತ್ಪತ್ತಿ ಎನ್ನುವುದು ಭಗವಂತನು ಮಾಡಿದ ಏರ್ಪಾಟು ಅದಕ್ಕೆ ಯಾರು ಭಂಗ ಉಂಟು ಮಾಡಿದರು ಅವರು ಭಗವಂತನ ನಿರ್ಣಯವನ್ನು ಧಿಕ್ಕರಿಸಿದವರಾಗುತ್ತಾರೆ. ಅವರು ಭಗವಂತನ ನಿಯಮಗಳ ಪ್ರಕಾರ ಶಿಕ್ಷಾರ್ಹರಾಗುತ್ತಾರೆ. ಈ ಪ್ರಕೃತಿಯಿಂದ ಶಿಕ್ಷಿಸಲ್ಪಡುತ್ತಾರೆ. ಕಷ್ಟಗಳ ಪಾಲಾಗುತ್ತಾರೆ. ಆದ್ದರಿಂದ **"ಭಗವಂತನ ಸೃಷ್ಟಿಯಲ್ಲಿರುವ ನಾವು ಭಗವಂತನ ನಿಯಮಗಳನ್ನು ಗೌರವಿಸಬೇಕು"**. ಕಾರಣವೇನೆಂದರೆ,ಈ ಸೃಷ್ಟಿಯಲ್ಲಿ ಸಮಸ್ತ ಜೀವಿಗಳು ನಾಲ್ಕು ವಿಧಗಳಾಗಿ ಪುನರುತ್ಪತ್ತಿ ಹೊಂದುತ್ತಿದೆ ಅವು...

**1. ಉದ್ಭೀಜಗಳು**

**2. ಸ್ವೇದಜಗಳು**

**3. ಅಂಡಜಗಳು**

**4. ಜರಾಯುಜಗಳು**

**1. ಉದ್ಭೀಜಗಳು :–** ಒಳಗಿನಿಂದ ಹೊರಗೆ ಸೀಳಿಕೊಂಡು ಬರುವುದು.ಅಂದರೆ ವೃಕ್ಷ ಜಾತಿ. ಬೀಜವು ಭೂಮಿಯನ್ನು ಸೀಳಿಕೊಂಡು ಮೊಳಕೆ ಹೊರಬಂದು ಸಸಿಯಾಗಿ, ಗಿಡವಾಗುತ್ತದೆ.

**2. ಸ್ವೇದಜಗಳು:–** ಬೆವರು, ತಂಪಾದ ಪ್ರದೇಶದಲ್ಲಿ, ಕಫ, ಉಗುಳಿನಿಂದ ಉದ್ಭವಿಸುವಂತಹುದು ಹೇನು, ತಿಗಣೆ, ಪಾಚಿ, ಹಲವು ವಿಧಗಳ ಫಂಗಸ್‌ನಂತಹುದು.

**3. ಅಂಡಜಗಳು:–** ಮೊಟ್ಟೆಯಿಂದ ಹುಟ್ಟುವಂತದ್ದು, ಪಕ್ಷಿ, ಸರ್ಪ, ಆಮೆ, ಮೊಸಳೆಯಂತವು.

**4. ಜರಾಯುಜಗಳು :–** ಸಂಪೂರ್ಣವಾಗಿ ಮೂಲ ಆಕಾರದಲ್ಲಿ ಜನಿಸುವುದು. ಮಾನವರು, ಪ್ರಾಣಿಗಳು.

ಹೀಗೆ ಸೃಷ್ಟಿ ಕ್ರಮ ಸಾಗುತ್ತದೆ ಹಾಗೆ ಸೃಷ್ಟಿಯಲ್ಲಿ ನಡೆಯುವ ಕ್ರಮವನ್ನು ಮೊಟ್ಟೆ ಗಳನ್ನು ತಿನ್ನುವುದರ ಮೂಲಕ ಮಾನವರು ಅವರೋಧ ಗೊಳಿಸುತ್ತಿದ್ದಾರೆ. ಆದ್ದರಿಂದ ಅದರ ಫಲಿತ ಅನುಭವಿಸ ಬೇಕಾಗಿರುತ್ತದೆ ಹಾಗಾಗಿ ಮೊಟ್ಟೆ ಮಾನವನ ಆಹಾರವೆಲ್ಲ ಶಾಕಾಹಾರ ನಿಜಕ್ಕೂ ಅಲ್ಲ.. ಆದ್ದರಿಂದ ಕ್ರೂರವಾಗಿ ಪಕ್ಷಿಜಾತಿ ಸಂತತಿಯನ್ನು ಭಕ್ಷಿಸುವುದಲ್ಲ, ಪ್ರಕೃತಿ ವಿರುದ್ಧವಾಗಿ ಪ್ರವರ್ತಿಸುವುದರಿಂದ ಪರಮಾತ್ಮನ ಆಜ್ಞೆಯನ್ನು ಧಿಕ್ಕರಿಸುವುದೇ ಆಗಿರುತ್ತದೆ. ಸೃಷ್ಟಿ ಪರಿಣಾಮ ಕ್ರಮದಲ್ಲಿ ಅವುಗಳ ಪಾತ್ರವನ್ನು ಕೂಡ ಪೋಷಿಸಲು ಬಿಡಬೇಕು. ಯಾವ ಕಾರ್ಯ ನಿಮಿತ್ತವಾಗಿ ಅವು ಭಗವಂತನಿಂದ ಸೃಷ್ಟಿಸಲ್ಪಟ್ಟಿದೆ ಆ ಕಾರ್ಯವನ್ನು ಪೂರ್ತಿಯಾಗಿ ನಿರ್ವಹಿಸಲು ಬಿಡಬೇಕು. ಅವುಗಳ ಪುತ್ರ ಪ್ರೇಮಕ್ಕೆ ಆಘಾತವನ್ನು ಉಂಟುಮಾಡ ಬಾರದು ಹಾಗೆ ದಯೆ ತೋರಿದಾಗಲೇ ಮಾನವನು ಕೂಡ ಮೇಲಿರುವ ಭಗವಂತನ ದಯೆ ಹೊಂದುತ್ತಾನೆ.

**ಅಂತ್ಯಕಾಲದಲ್ಲಿ ಪಶ್ಚಾತಾಪ ಪಡಬೇಕಾದ ಕರ್ಮಗಳು ಆರಂಭದಲ್ಲಿಯೇ ಮಾಡಬೇಡ.**

# ಫುಲ್ಚಾರ್ (ಬೇಳೆ ಸಾರು) –ಪಾಪದ ಸಾರು

ಫುಳ್ಚಾರ್ ಎಂದು ಶಾಕಾಹಾರಿಗಳನ್ನು, ಮಾಂಸಾಹಾರಿಗಳು ಅಪಹಾಸ್ಯ ಮಾಡುತ್ತಾರೆ. ಆದರೆ ಆಲೋಚಿಸಿದರೆ ಪಾಪದ ಊಟ ಎನಿಸುವ ಮಾಂಸಾಹಾರಕ್ಕಿಂತ ಶಾಕಾಹಾರ ಎನಿಸುವ ಬೇಳೆ ಸಾರು ಒಳ್ಳೆಯದೇ.

ಶಾಕಾಹಾರ ಮಾನವರ ಊಟ, ಮಾಂಸಾಹಾರ ರಾಕ್ಷಸರ ಊಟ. ಆಲೋಚಿಸಿದರೆ ಶಾಕಾಹಾರವೇ ಮಾನವರಿಗೆ ಸಹಜವಾದ ಊಟ, ಪ್ರಕೃತಿ ನಿರ್ದೇಶಸಿದ ಊಟ.

1) ಬೇಳೆ ಸಾರು ಆರೋಗ್ಯವನ್ನು ನೀಡಿದರೆ; ಪಾಪದ ಸಾರು ರೋಗಗಳನ್ನು ಉಂಟುಮಾಡುತ್ತದೆ.

2) ಬೇಳೆಸಾರು ಮನಸ್ಸಿಗೆ ಶಾಂತಿಯನ್ನು ನೀಡಿದರೆ; ಪಾಪದ ಸಾರು ಅಶಾಂತಿಯನ್ನು ಉಂಟುಮಾಡುತ್ತದೆ.

3) ಬೇಳೆ ಸಾರು ಬುದ್ಧಿ ವಿಕಾಸ ಮಾಡಿದರೆ; ಪಾಪದ ಸಾರು ಬುದ್ಧಿಯನ್ನು ಮಂದವಾಗಿಸುತ್ತದೆ

4) ಬೇಳೆ ಸಾರು ಜ್ಞಾನವನ್ನು ಹೆಚ್ಚಿಸಿದರೆ; ಪಾಪದ ಸಾರು ಅಜ್ಞಾನವನ್ನು ಉಂಟುಮಾಡುತ್ತದೆ

5) ಬೇಳೆ ಸಾರು ಆತ್ಮ ಶಕ್ತಿಯನ್ನು ವೃದ್ಧಿಸಿದರೆ; ಪಾಪದ ಸಾರು ಆತ್ಮ ಶಕ್ತಿಯನ್ನು ಕ್ಷೀಣಿಸುವಂತೆ ಮಾಡುತ್ತದೆ

6) ಬೇಳೆ ಸಾರು ಸಾತ್ವಿಕ ಗುಣವನ್ನು ಉಂಟು ಮಾಡಿದರೆ ; ಪಾಪದ ಸಾರು ತಮೋಗುಣವನ್ನು, ರಜೋಗುಣವನ್ನು ಉಂಟು ಮಾಡುತ್ತದೆ.

7) ಬೇಳೆ ಸಾರು ಅಹಿಂಸೆ; ಪಾಪದ ಸಾರು ಹಿಂಸೆ

8) ಬೇಳೆ ಸಾರು ಪಂಚಭೂತಗಳೊಂದಿಗೆ ತಯಾರಾದರೆ; ಪಾಪದ ಸಾರು ರಕ್ತ ಮಾಂಸಗಳೊಂದಿಗೆ ತಯಾರಾಗುತ್ತದೆ.

9) ಬೇಳೆ ಸಾರು ಅಮೃತಾಹಾರ; ಪಾಪದ ಸಾರು ಮೃತಾಹಾರ

10) ಬೇಳೆ ಸಾರು ಶಾಕಾಹಾರ; ಪಾಪದ ಸಾರು ಶವಾಹಾರ

11) ಬೇಳೆ ಸಾರು ಪ್ರಕೃತಿ ಸಹಜ ಸಿದ್ಧ; ಪಾಪದ ಸಾರು ಪ್ರಕೃತಿಗೆ ವಿರುದ್ಧ

12) ಬೇಳೆ ಸಾರಿನಲ್ಲಿ  ಜೀವಶಕ್ತಿ ಇದೆ; ಪಾಪದ ಸಾರಿನಲ್ಲಿ ಜೀವಶಕ್ತಿ ಇರುವುದಿಲ್ಲ.

ಬೇಳೆ ಕಾಳುಗಳಿಂದ ಮಾಡಿದ ಶಾಕಾಹಾರಕ್ಕೆ, ಪಾಪದಿಂದ ಕೂಡಿದ ಮಾಂಸಹಾರಕ್ಕೆ ವ್ಯತ್ಯಾಸವನ್ನು ನೋಡೋಣ. ಶಾಕಾಹಾರವಾದ ತರಕಾರಿಗಳು ಕೊಳೆತು ಹೋಗಲು 10 ರಿಂದ 15 ದಿನಗಳು ಹಿಡಿಯುತ್ತದೆ. ಆದರೆ ಮಾಂಸವು ನಿಮಿಷಗಳಲ್ಲಿಯೇ ಕೊಳೆತು, ಭಯಂಕರವಾದ ವಾಸನೆ ಬರುತ್ತದೆ. ಹುಳುಗಳು ಹಿಡಿಯುತ್ತದೆ ಸಹಿಸಲಾಗದ ವಾಸನೆ ಬರುತ್ತದೆ.

ಕೊಳೆತ ತರಕಾರಿಗಳು ರಸ್ತೆಯ ಪಕ್ಕ ಎಸೆದರು ಯಾರು ಕಿರಿಕಿರಿ ಮಾಡಿ ಕೊಳ್ಳುವುದಿಲ್ಲ. ಯಾರಿಗೂ ಹಾನಿಕರವೂ ಅಲ್ಲ ಆದರೆ ಪ್ರಾಣಿಗಳನ್ನು ಆಗಲಿ, ಅವುಗಳ ಮಾಂಸವನ್ನಾಗಲಿ ರಸ್ತೆಯ ಪಕ್ಕದಲ್ಲಿ ಹಾಕಿದರೆ ಆ ಕಡೆ ಹೋಗುವವರು ಆ ವಾಸನೆಯನ್ನು ತಡೆಯಲಾರರು. ಅಸಹ್ಯವಾದ ಕಂಪು ಇರುತ್ತದೆ. ಆ ಪಕ್ಕಕ್ಕೆ ಯಾರೂ ಹೋಗುವುದು ಇಲ್ಲ.

ಶಾಕಾಹಾರವಾದ ಹಣ್ಣುಗಳನ್ನು ಒಂದು ಬುಟ್ಟಿಯಲ್ಲಿ ಹಾಕಿ ಡೈನಿಂಗ್ ಟೇಬಲ್ ಮೇಲೆ ಕೆಲವು ದಿನಗಳು ಇರಿಸಿಕೊಳ್ಳಬಹುದು. ಆದರೆ ಸತ್ತ ಮೀನುಗಳನ್ನು, ಮಾಂಸವನ್ನು ಹಾಗೆ ಇರಿಸಬಲ್ಲವೇ!?





ತರಕಾರಿಗಳನ್ನು ಒಂದು ಕೋಣೆಯಲ್ಲಿ, ಮಾಂಸವನ್ನು ಸತ್ತ ಪ್ರಾಣಿಯನ್ನು ಮತ್ತೊಂದು ಕೋಣೆಯಲ್ಲಿ ಇರಿಸಿದರೆ ಎರಡು ದಿನಗಳು ಹೋದಮೇಲೆ ಯಾವ ಕೋಣೆಯಲ್ಲಿ ಹೋಗಬಲ್ಲವೇ ತರಕಾರಿಗಳು ಇರುವ ಕೋಣೆಯೊಳಗೆ ಹೋಗಬಲ್ಲೆವು ಮಾಂಸವಿರುವ ಕೋಣೆಯಲ್ಲಿ ತಡೆಯಲಾಗದ ಕೆಟ್ಟ ವಾಸನೆ ಬರುತ್ತದೆ. ಹುಳುಗಳಾಗಿರುತ್ತದೆ ಅವುಗಳು ಕೋಣೆ ತುಂಬಾ ವ್ಯಾಪಿಸುತ್ತವೆ. ಆ ಕೋಣೆಯನ್ನು ತೆಗೆಯಲು ಸಾಧ್ಯವೇ ಆಗುವುದಿಲ್ಲ ಅಂತಹ ಕೊಳೆತು ಹೋಗುವ ಆಹಾರ ಹೇಗೆ ತಿನ್ನಲು ಸಾಧ್ಯ ಆಲೋಚಿಸಿ.

ಯಾವ ಮಾನವನಾದರೂ, ಹಣ್ಣು ತರಕಾರಿಗಳು ಅಥವಾ ಧಾನ್ಯಗಳನ್ನು ನೋಡಿದರೆ ಭಾದೆ ಪಡುವುದಿಲ್ಲ...ಆದರೆ ವಧಿಸಿ ಪ್ರಾಣಿಗಳ ತೂಗುಹಾಕಿರುವ ಪ್ರಾಣಿಗಳ ಶರೀರ ಭಾಗಗಳನ್ನು ಮಾಂಸದ ಅಂಗಡಿಗಳಲ್ಲಿ ತೂಗು ಹಾಕಿರುವುದನ್ನು ನೋಡಿದ ತಕ್ಷಣವೇ ಅಸಹಿಸಿಕೊಂಡು ಸಂಕಟಪಡುತ್ತಾನೆ.

ಶಾಕಾಹಾರ ಅಥವಾ ಧಾನ್ಯದ ಕಾಯಿಗಳು ಇರಿಸಿರುವ ಅಂಗಡಿಗಳಲ್ಲಿ ಅವು ಎಷ್ಟು ದಿನಗಳು ಇರಿಸಿದರೂ, ಕೆಟ್ಟುಹೋಗುವುದಿಲ್ಲ, ವಾಸನೆ ಬರುವುದಿಲ್ಲ, ರೋಗಗಳು ಬರುವುದಿಲ್ಲ ಆದರೆ ಪ್ರಾಣಿಗಳ ಮಾಂಸವನ್ನು ಮಾರುವ ಅಂಗಡಿಯಲ್ಲಿ ಮಾಂಸವನ್ನು ಒಂದು ದಿನಕ್ಕೆ ಮೀರಿ ಇಟ್ಟರೆ ಆ ಅಂಗಡಿಯಲ್ಲಿ ಮಾರುವವನು ಇರಲಾರನು...ಅಂದರೆ ಮಾಂಸಾಹಾರ ಕೊಳೆತು ಹೋಗಿ ಹುಳುಗಳಾಗಿ ವಾಸನೆ ಬಂದರೆ ಅದು ತಿನ್ನಲು ಯೋಗ್ಯವಲ್ಲದ ಆಹಾರ ಎಂದು ತಿಳಿಯುತ್ತದೆ ಅಲ್ಲವೇ?

ಅಷ್ಟೇ ಅಲ್ಲ ಕೋಣೆಗಳಲ್ಲಿ, ಹಾಲಿನಲ್ಲಿ, ಮನೆಯಲ್ಲಿ ಎಲ್ಲಾದರೂ ತರಕಾರಿಗಳು ವಿಧವಿಧವಾದ ಹಣ್ಣುಗಳು ಇರುವ ಚಿತ್ರಗಳನ್ನು ಅಲಂಕಾರಿಕವಾಗಿ ಗೋಡೆಗಳಿಗೆ ನೇತು ಹಾಕುತ್ತಾರೆ. ಆದರೆ ಮಾಂಸವನ್ನು, ಸತ್ತ ಪ್ರಾಣಿಗಳ ಚಿತ್ರವನ್ನು ಯಾರಾದರೂ ಅಲಂಕರಿಸುತ್ತಾರೆಯೇ?

ಅಷ್ಟೇ ಅಲ್ಲ ವಿವಾಹಗಳಲ್ಲಿ ಶುಭ ಕಾರ್ಯಗಳಲ್ಲಿ ಮಾವಿನ ಎಲೆಗಳ ತೋರಣಗಳು ಕಟ್ಟುತ್ತಾರೆ. ಬಾಳೆ ಕಂಬಗಳಿಂದ ಅಲಂಕರಿಸುತ್ತಾರೆ. ಹೂವು ಹೂವಿನ ದಂಡೆಗಳು ಅಲಂಕರಿಸುತ್ತಾರೆ ಹೊರತು ಸತ್ತಿರುವ ಪ್ರಾಣಿಗಳ ಭಾಗಗಳು ಅಂದರೆ ಕೊಂಬುಗಳು ಮೂಳೆಗಳು, ಮೀನುಗಳು, ಮಾಂಸದ ತುಂಡುಗಳನ್ನು ಹಾಕಿ ಅಲಂಕರಿಸುವುದಿಲ್ಲ ಅಲ್ಲವೇ. ಆದ್ದರಿಂದ ಆಲೋಚಿಸಿ, ಮಾನವರಿಗೆ ಯಾವುದು ಶ್ರೇಷ್ಠ ಆಹಾರ ಎಂದು ನಿರ್ಧರಿಸಿ.

**ಹಾಗಾಗಿ ಬೇಳೆ ಸಾರು ತಿನ್ನುವವನು ನಾಚಿಕೆ ಪಡುವ ಅಗತ್ಯವಿಲ್ಲ. ಪಾಪದ ಮಾಂಸಾಹಾರವನ್ನು ತಿನ್ನುವವನು ನಾಚಿಕೆ ಪಡಬೇಕು... ಎಲ್ಲಾ ವಿಧಗಳಾಗಿ ಲಾಭವುಳ್ಳ ಶಾಕಾಹಾರವಾದ ಬೆಳೆಸಾರನ್ನು ತಿನ್ನಿ. ಪಾಪದ ಕೂಳಾದ ಮಾಂಸಾಹಾರವನ್ನು ಬಿಡಿ.**



# ಆಹಾರವೇ ಪ್ರಧಾನವೇ

"Man does not live by bread alone" ರೊಟ್ಟಿಯಿಂದಲೇ ಮಾನವನು ಜೀವಿಸಲಾರನು"– ಜೀಸಸ್

ಅಂದರೆ ಜೀವನಕ್ಕೆ ಆಹಾರವೇ ಪ್ರಧಾನವಲ್ಲ ಎಂದು ಜೀಸಸ್ ಸಂದೇಶ ನೀಡಿದ್ದಾರೆ. ಆದರೆ ಮಾನವರು ಆಹಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದಾರೆ.ಅಂದರೆ ದಿನ ತಿನ್ನಲು ಮಾತ್ರವೇ ಜೀವಿಸುತ್ತಿದ್ದಾರೆ. ತಿನ್ನಲಾರದ ಜೀವನ ಏಕೆ ಎಂದು ಪ್ರಶ್ನಿಸುತ್ತಿದ್ದಾರೆ! ತಿಂದರೇನೇ ಜೀವನವನ್ನು ಅನುಭವಿಸಿದಂತೆ... ಅನುಭವಿಸಬೇಕೆಂದರೆ ತಿನ್ನಬೇಕು ಇದೇ ಮಾನವರ ಅಭಿಪ್ರಾಯ. ಹಾಗಾಗಿ ಮಾನವರು ಹೆಚ್ಚಿನ ಸಮಯವನ್ನು ಸಂಪಾದನೆಗಾಗಿ ವಿನಿಯೋಗಿಸುತ್ತಾರೆ. ಕಾರಣ ಚೆನ್ನಾಗಿ ಸಂಪಾದಿಸಿದರೆ,ಚೆನ್ನಾಗಿ ತಿನ್ನಬಹುದು ಎಂಬ ಅಭಿಪ್ರಾಯ. ಅಷ್ಟೇ ಅಲ್ಲ ತಿನ್ನುವುದೇ ಅಲ್ಲದೆ ವಿಧವಿಧವಾದ ಅಡುಗೆಗಳು ಪದಾರ್ಥಗಳನ್ನು ರುಚಿಗಳೊಂದಿಗೆ ತಯಾರಿಸಿ ಕೊಳ್ಳುತ್ತಿದ್ದಾರೆ. ಪಾಕಶಾಸ್ತ್ರದಲ್ಲಿ ಪ್ರಯೋಗಗಳನ್ನು ಮಾಡುತ್ತಿದ್ದಾರೆ.

ಸಮಯ ಇದ್ದಾಗ ಅಡುಗೆಗೆ ಬೇಕಾದ ಪದಾರ್ಥಗಳನ್ನು ಹೊಂದಿಸಿಕೊಳ್ಳುತ್ತಾರೆ. ನಂತರ ವಿಧವಿಧವಾದ ಪದಾರ್ಥಗಳು ತಯಾರಿಸಿಕೊಳ್ಳುತ್ತಿದ್ದಾರೆ. ಕನಿಷ್ಠ ದಿನದಲ್ಲಿ ನಾಲ್ಕು–ಐದು ಸಾರಿಯಾದರೂ ತಿನ್ನುತ್ತಾರೆ... ತಿಂಡಿಯೊಂದಿಗೆ ದಿನವನ್ನು ಪ್ರಾರಂಭಿಸುತ್ತಿದ್ದಾರೆ ಕೆಲವರು ಕಾಫಿ ಕುಡಿದ ಮೇಲೆ ಕಣ್ಣು ತೆರೆಯುತ್ತಾರೆ. ಅಂದರೆ ಊಟ, ತಿಂಡಿ, ಕಾಫಿಗೆ ಅಷ್ಟು ಪ್ರಾಮುಖ್ಯತೆ ನೀಡುತ್ತಿದ್ದಾರೆ.

ಇನ್ನೂ ಕೆಲವರು ರುಚಿಯಾದ ಊಟ ಬೇಕೆಂದು ಹಿಂಸೆ ಕೂಡಾ ಮಾಡುತ್ತಿದ್ದಾರೆ. ಅಮಾಯಕ ಮೂಕ ಜೀವಿಗಳನ್ನು ಸಾಯಿಸುತ್ತಿದ್ದಾರೆ, ಮಾಂಸ ಭಕ್ಷಣೆ ಮಾಡುತ್ತಿದ್ದಾರೆ, ಮಾಂಸಕ್ಕಾಗಿ ಪ್ರಾಣಿಗಳನ್ನು, ಪಕ್ಷಿಗಳನ್ನು ಸಾಯಿಸುತ್ತಿದ್ದಾರೆ. ಕೊಲ್ಲಲು ಘೋರವಾದ


ಪದ್ಧತಿಗಳನ್ನು ಅವಲಂಬಿಸುತ್ತಿದ್ದಾರೆ. ಹಾಗೆ ಪಾಪಗಳನ್ನು ಮಾಡುತ್ತಿದ್ದಾರೆ ಕೊನೆಗೆ ಆ ಪಾಪದ ಪಲಿತವಾಗಿ ಬರುವ ರೋಗಗಳು ಬಾಧೆಗಳು ತಡೆಯಲು ಆಗದೆ ತಲ್ಲಣಿಸುತ್ತಿದ್ದಾರೆ. "**ರಕ್ಷಕನೇ ನಮ್ಮನ್ನು ರಕ್ಷಿಸು ರಕ್ಷಿಸು**" ಎಂದು ಗೋಳಾಡುತ್ತಿದ್ದಾರೆ, ಆರ್ತನಾದಗಳನ್ನು ಮಾಡುತ್ತಿದ್ದಾರೆ ರೋಧನೆಗಳೊಂದಿಗೆ ಪ್ರಾರ್ಥನೆಗಳನ್ನು ಮಾಡುತ್ತಿದ್ದಾರೆ. ಇದೆಲ್ಲವೂ ತಿಂಡಿಗೆ ಪ್ರಾಮುಖ್ಯತೆ ಕೊಡುವುದರಿಂದಲೇ ನಡೆಯುತ್ತಿದೆ, ಆದರೆ ಜನ ಇದ್ಯಾವುದನ್ನು ಅರ್ಥಮಾಡಿಕೊಳ್ಳಲಾರದೆ ಹೋಗುತ್ತಿದ್ದಾರೆ. ಇದರ ಅನುಸಾರ ಮಾನವ ಊಟ ತಿಂಡಿ ಎಂದು ಮಾತ್ರ ಜೀವಿಸುತ್ತಿದ್ದರೆ, ಆಗುವುದಿಲ್ಲ ಎಂದು ಅರ್ಥವಾಗುತ್ತದೆ ಅಲ್ಲವೇ.

ಜೀಸಸ್ ಸಂದೇಶದ ಪ್ರಕಾರ ಮಾನವನು ಆನಂದವಾಗಿ ಜೀವಿಸಬೇಕೆಂದರೆ ರೊಟ್ಟಿ ಮಾತ್ರ ಸಾಕಾಗುವುದಿಲ್ಲ (ರೊಟ್ಟಿ ಎಂದರೆ, ಊಟ ತಿಂಡಿ) ಜೀವನದಲ್ಲಿ ಮಾನವನು ರೊಟ್ಟಿಯೊಂದಿಗೆ ಇನ್ನೂ ತುಂಬಾ ಹೊಂದಿಸಿಕೊಳ್ಳಬೇಕು. ತಿನ್ನುವುದರೊಂದಿಗೆ ಬಟ್ಟೆ ಇರಬೇಕು, ಮನೆ ಇರಬೇಕು, ಜೀವನದಲ್ಲಿ ಸಂಗಾತಿ ಇರಬೇಕು, ಇವೆಲ್ಲವೂ ಇದ್ದರೂ ಆನಂದವಾಗಿ ಇರಬೇಕೆಂದರೆ ಆರೋಗ್ಯವಾಗಿರಬೇಕು. ಶಾಂತಿ ಇರಬೇಕು ಸಂಸಾರದಲ್ಲಿ ಸುಖ, ಸಂತೋಷಗಳು ಇರಬೇಕು. ಇವೆಲ್ಲ ಬೇಕೆಂದರೆ ಮಾನವನು ತುಂಬಾ ಆಲೋಚಿಸಬೇಕು ಜೀವನದಲ್ಲಿ ಧರ್ಮವನ್ನು ಆಚರಿಸಬೇಕು ನೆರೆಹೊರೆಯವರನ್ನು ಪ್ರೇಮಿಸಬೇಕು ಅಂದರೆ ನಮ್ಮ ಸಹವರ್ತಿಗಳೇ ಅಲ್ಲದೆ, ನಮ್ಮ ಜೊತೆ ಜೀವಿಸುವ ಪ್ರಾಣಿಗಳನ್ನು ಅಂದರೆ ಕೋಳಿ, ಮೇಕೆ, ಕುರಿ, ಮೀನು ಇಂತಹವುಗಳನ್ನು ಕೂಡಾ ನಮ್ಮನ್ನು ನಾವು ಪ್ರೀತಿಸಿಕೊಂಡಂತೆ ಪ್ರೀತಿಸಬೇಕು. ಬಲಹೀನರ ಮೇಲೆ, ಅಮಾಯಕರ ಮೇಲೆ, ಮೂಕ ಜೀವಿಗಳ ಮೇಲೆ ಕರುಣೆ ತೋರಿಸಬೇಕು. ಅವುಗಳ ಕಷ್ಟ ನಮ್ಮ ಕಷ್ಟದಂತೆ ಭಾವಿಸಬೇಕು.

ಎಲ್ಲವೂ ಆತನ ಮಕ್ಕಳೇ ಆದ್ದರಿಂದ ಆತನಿಗೆ ಮಾನವರೊಂದಿಗೆ ಎಲ್ಲಾ ಜೀವಿಗಳು ಸಮಾನವೇ ಎಂದು ತಿಳಿದುಕೊಳ್ಳಬೇಕು, ಆತನಿಗೆ ಎಲ್ಲಾ ಒಂದೇ ಎಂದು ತಿಳಿದುಕೊಳ್ಳಬೇಕು. ಮಾನವರಿಗೆ ಅಲ್ಲ ಎಲ್ಲರಿಗೂ...ಎಲ್ಲ ಪ್ರಾಣಿಗಳಿಗೂ ಆತ ಕಾವಲುಗಾರ ಅಂದರೆ ರಕ್ಷಕನೆಂದು, ಆದ್ದರಿಂದಲೇ ಯಾವುದನ್ನು ಹಿಂಸಿಸಬಾರದು

ಕೀಳಾಗಿ ನೋಡಬಾರದು ಎಲ್ಲವನ್ನು ಪ್ರೇಮಿಸಬೇಕು. ಎಲ್ಲಾ ಪ್ರಾಣಿಗಳ ಮೇಲೆ 'ದಯೆ' ಇರಬೇಕು.

ಹಾಗೆ ಜೀವಿಸಿದರೆ ಮಾತ್ರ ಜೀವನದಲ್ಲಿ ಆನಂದ. ಅಷ್ಟೇ ಹೊರತು ವಿಧವಿಧವಾದ ಪದಾರ್ಥಗಳು ತಿಂದರೆ ಮಾತ್ರ, ಮಾಂಸಾಹಾರವನ್ನು ಚಪ್ಪರಿಸಿಕೊಂಡು ತಿಂದ ಮಾತ್ರಕ್ಕೆ ಜೀವನದಲ್ಲಿ ಆನಂದ ಲಭಿಸುವುದಿಲ್ಲ. ಭರಿಸಲಾರದ, ಕೊನೆಯಿಲ್ಲದ, ವಿಚಿತ್ರ ರೋಗಗಳು, ಕಾಯಿಲೆಗಳು ಅವರ ಜೀವನವನ್ನು ನರಕ ಪ್ರಾಯವಾಗಿಸುತ್ತದೆ.ಹಾಗೆ ನರಕವನ್ನು ಅನುಭವಿಸುವ ಜೀವನ,ಜೀವನವೇ ಅಲ್ಲ. ಅದು ಸರಿಯಾಗಿ ಜೀವಿಸುವ ವಿಧಾನವಲ್ಲ. ಅದಕ್ಕೆ ಜೀಸಸ್ ರೊಟ್ಟಿಯೊಂದಿಗೆ ಮಾನವ ಜೀವಿಸಲಾರ ಎನ್ನುವ ಅದ್ಭುತವಾದ ಸಂದೇಶವನ್ನು ಮಾನವ ಕುಲಕ್ಕೆ ನೀಡಿದ್ದಾನೆ. ಆದ್ದರಿಂದ ತಿನ್ನುವುದಕ್ಕಾಗಿ ಜೀವಿಸಬೇಡಿ ಜೀವಿಸಲು ಶಾಕಾಹಾರ ಸಾಕು ಶಾಕಾಹಾರಿಗಳಾಗಬೇಕು. ಪಾಪ ಕೃತ್ಯವಾದ ಮಾಂಸಭಕ್ಷಣೆ ಬಿಡಿ. ಅಮಾಯಕ ಜೀವಿಗಳ ಮೇಲೆ ದಯೆ ತೋರಿ ಅವು ಕೂಡಾ ನಿಮ್ಮ ನೆರೆಹೊರೆಯವರು ಎಂದು ತಿಳಿದುಕೊಳ್ಳಿ. ತಿನ್ನುವ ಕಡೆಗೆ ಮಾತ್ರ ಗಮನ ಕೊಡದೇ ಶ್ವಾಸದ ಕಡೆಗೆ ನಿಮ್ಮ ಗಮನ ಇರಿಸಿದರೆ, ಅಂದರೆ ಧ್ಯಾನ ಮಾಡಿದರೆ ಆಗ ಆನಂದವಾಗಿ ಜೀವಿಸಬಲ್ಲೆವು.. ಇದೇ ಜೀಸಸ್ ಸಂದೇಶ.



**ಮಾಂಸ ಭಕ್ಷಣೆ ಮಾಡುವವರು ಯಾರು ಇಲ್ಲದಿದ್ದರೆ ಪ್ರಾಣಿಗಳನ್ನು ಕೊಲ್ಲುವವರು ಯಾರು ಇರುವುದಿಲ್ಲ**

**–ತಿರುವಳ್ಳುವರ್**



# ದುಷ್ಟರು –ಶಿಷ್ಟರು



ಲೋಕದಲ್ಲಿ ಎರಡು ವಿಧಗಳ ಜನರು ಇದ್ದಾರೆ. ಅವರು 'ದುಷ್ಟರು' 'ಶಿಷ್ಟರು' ದುಷ್ಟರು ಎಂದರೆ ಕೆಟ್ಟವರು, ಶಿಷ್ಟರು ಎಂದರೆ ಒಳ್ಳೆಯವರು.

ಲೋಕದಲ್ಲಿ ದೇವರನ್ನು ಎಲ್ಲರೂ ವಿಧವಿಧವಾಗಿ ಆರಾಧಿಸುತ್ತಾ ಇರುತ್ತಾರೆ. ಕೆಲವರು ಪೂಜಿಸುತ್ತಾರೆ, ಕೆಲವರು ಪ್ರಾರ್ಥಿಸುತ್ತಾರೆ ಹಾಗೂ ಇನ್ನೂ ಕೆಲವರು ನಮಾಜ್ ಮಾಡುತ್ತಾರೆ. ಕೆಲವರು ಭಜನೆ ಮಾಡುತ್ತಾರೆ. ಇದಕ್ಕೆ ಕಾರಣ ದೇವನು ತಮ್ಮನ್ನು ಕಷ್ಟಗಳಿಂದ, ಬಾಧೆಗಳಿಂದ, ಸಮಸ್ಯೆಗಳಿಂದ, ರೋಗಗಳಿಂದ ರಕ್ಷಿಸುತ್ತಾನೆ ಎಂದು ಭಾವಿಸುತ್ತಾರೆ. ಆದರೆ ಸೃಷ್ಟಿಯಲ್ಲಿ ರಕ್ಷಿಸಲ್ಪಡುವವರು, ಅಲ್ಲದೇ ಶಿಕ್ಷಿಸಲ್ಪಡುವವರು ಕೂಡಾ ಇದ್ದಾರೆ ಎಂದು ತಿಳಿದುಕೊಳ್ಳದೆ ಹೋಗುತ್ತಿದ್ದಾರೆ. ಕಾರಣ ದೇವರು ರಕ್ಷಿಸುವುದು ಶಿಷ್ಟರನ್ನು ಹೊರತು, ದುಷ್ಟರನ್ನು ಅಲ್ಲ ಖಂಡಿತವಾಗಿಯೂ ಶಿಕ್ಷಿಸುತ್ತಾನೆ.

"ದೇವರು ದುಷ್ಟ ಶಿಕ್ಷಣ ಶಿಷ್ಟ ರಕ್ಷಣೆ" ಮಾಡುತ್ತಾನೆ,ಎನ್ನುವ ವಿಷಯ ನಾವು ಪುರಾಣಗಳನ್ನು ನೋಡಿದರೆ ತಿಳಿಯುತ್ತದೆ ಭಗವದ್ಗೀತೆಯಲ್ಲಿ ಇರುವ ಈ ಕೆಳಗಿನ ಶ್ಲೋಕವನ್ನು ನೋಡೋಣ.

**ಶ್ಲೋಕ ॥ ಪರಿತ್ರಾಣಾಯ ಸಾಧೂನಾಮ್ ವಿನಾಶಯ ಚ ದುಷ್ಕೃತಾಮ್।**
**ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ**
**(ಭ.ಗಿ. 4–8)**

ತಾ :– ಸಾಧು ಸಜ್ಜನರನ್ನು ಸಂರಕ್ಷಿಸಲು, ದುಷ್ಟರನ್ನು ನಾಶ ಮಾಡಲು, ಧರ್ಮವನ್ನು ಸ್ಥಾಪಿಸಲು ನಾನು ಪ್ರತಿ ಯುಗದಲ್ಲೂ ಜನಿಸುತ್ತಿದ್ದೇನೆ.

ಏಕೆಂದರೆ ಶಿಷ್ಟರು ಪ್ರಾರ್ಥಿಸದಿದ್ದರೂ ರಕ್ಷಿಸಲ್ಪಡುತ್ತಾರೆ,ಆದರೆ ದುಷ್ಟರು ಪೂಜಿಸಿದರು, ಪ್ರಾರ್ಥಿಸಿದರು, ನಮಾಜ್ ಮಾಡಿದರು, ಭಜನೆ ಮಾಡಿದರು, ಖಂಡಿತವಾಗಿ ಶಿಕ್ಷಿಸಲ್ಪಡುತ್ತಾರೆ. ಅದಕ್ಕೆ ಪೂಜೆಗಳು, ಪ್ರಾರ್ಥನೆಗಳು ಮಾಡುವವರೂ ದುಃಖವನ್ನು ಅನುಭವಿಸುತ್ತಿದ್ದಾರೆ. ಅಂದರೆ ತಪ್ಪು ಮಾಡಿದವರು ಶಿಕ್ಷೆ ಅನುಭವಿಸುತ್ತಿದ್ದಾರೆ ಎಂದು

ಅರ್ಥವಾಗುತ್ತದೆ. ಮಾನವನು ಅನುಭವಿಸುವ ಕಷ್ಟಗಳು,ಅವರಿಗೆ ವಿಧಿಸಲ್ಪಟ್ಟ ಶಿಕ್ಷೆಗಳೆಂದು ತಿಳಿದುಕೊಳ್ಳಬೇಕು. ಆದ್ದರಿಂದ ಶಿಕ್ಷೆಗಳು ಬೀಳಬಾರದೆಂದರೆ, ದುಷ್ಟತ್ವವನ್ನು ಬಿಡಬೇಕು. ರಕ್ಷಿಸಲ್ಪಡಬೇಕೆಂದರೆ ಶಿಷ್ಟತ್ವವನ್ನು ಅನುಸರಿಸಬೇಕು. ಇದಕ್ಕಿಂತ ಬೇರೆ ಒಂದು ಮಾರ್ಗವಿಲ್ಲ. ಹಾಗಾದರೆ ಯಾರು ದುಷ್ಟರು? ಯಾರು ಶಿಷ್ಟರು ? ಎಂದರೆ, ಯಾರಿಗೆ ದಯೆ ಕರುಣೆ ಇರುತ್ತದೆ ಅವರು ಶಿಷ್ಟರು. ಯಾರು ಹಿಂಸೆ ಮಾಡುತ್ತಾರೆ ಅವರನ್ನು ದುಷ್ಟರು ಎನ್ನುತ್ತಾರೆ. ಹಿಂಸೆ ಮಾಡುವವರು ಎರಡು ವಿಧಗಳಾಗಿ ಇರುತ್ತಾರೆ.

1. ಒಂದು ಶಾರೀರಿಕ ಹಿಂಸೆ ಮಾಡುವರು ಅವರನ್ನು ರಾಕ್ಷಸರು ಎನ್ನುತ್ತಾರೆ

2. ಎರಡನೇಯದು ಮಾನಸಿಕ ಹಿಂಸೆ ಮಾಡುವವರು ಅವರನ್ನು ದುಷ್ಟರು ಎನ್ನುತ್ತಾರೆ.

ಇವರಿಬ್ಬರೂ ಕೂಡ ದೇವರಿಂದ ಶಿಕ್ಷಿಸಲ್ಪಡುತ್ತಾರೆ. ಇವರು ಎಷ್ಟು ಆರಾಧನೆಗಳನ್ನು ಮಾಡಿದರು ರಕ್ಷಿಸಲ್ಪಡುವುದಿಲ್ಲ.

ಶಾರೀರಿಕ ಹಿಂಸೆ ಮಾಡುವವರು ಯಾರು ಎಂದರೆ ಇತರರನ್ನು, ಇತರ ಜೀವಿಗಳನ್ನು ಪ್ರಾಣಿಗಳನ್ನು ಹಿಂಸೆ ಮಾಡಿ ಅವುಗಳು ನರಳುವುದನ್ನು ನೋಡಿ ಆನಂದ ಹೊಂದುವರು. ಅಂದರೆ ಜೀವ ಹಿಂಸೆ ಮಾಡುವವರು, ಮಾಂಸವನ್ನು ತಿನ್ನುವವರು,ಜೀವಿಗಳ ಮೇಲೆ ದಯೆ ತೋರದೇ ಇರುವವರು, ಮಾಂಸಾಹಾರ ಎಂದರೆ ಇಷ್ಟಪಡುವವರು...ಈ ಜೀವ ಹಿಂಸೆ ಎನ್ನುವುದು ಘೋರವಾದ ಪಾಪ ಇಂತಹ ರಾಕ್ಷಸರು ದೇವರಿಂದ ಶಿಕ್ಷಿಸಲ್ಪಡುತ್ತಾರೆಂದು ಪುರಾಣಗಳಲ್ಲಿ ನಮಗೆ ತಿಳಿಸಲಾಗಿದೆ.

ಹಾಗೆ ಮಾನಸಿಕ ಹಿಂಸೆ ಮಾಡುವ ದುಷ್ಟರು ಕೂಡ ಶಿಕ್ಷಿಸಲ್ಪಡುತ್ತಾರೆ. ಇವರು ಇತರರನ್ನು ದೂಷಿಸುವುದು, ಮೋಸ ಮಾಡುವುದು, ಅವರ ಸ್ವತ್ತನ್ನು ಅಪಹರಿಸುವುದು, ಅವಮಾನಿಸುವುದು, ಕಷ್ಟಗಳಿಗೆ ಗುರಿ ಮಾಡುವುದು ಇವರ ಕೆಲಸ.

ದೇವರು ರಾಕ್ಷಸರನ್ನು ಶಿಕ್ಷಿಸುತ್ತಾನೆ ಎಂದು ರಾಮಾಯಣದ ಮೂಲಕ... ದುಷ್ಟರನ್ನು ಶಿಕ್ಷಿಸುತ್ತಾರೆ ಎಂದು ಮಹಾಭಾರತದ ಮೂಲಕ ನಮಗೆ ತಿಳಿಯುತ್ತದೆ. ಏಕೆಂದರೆ 'ಹಿಂಸೆ' ಸೃಷ್ಟಿ ಧರ್ಮಕ್ಕೆ ಅಂದರೆ ಭಗವಂತನ ಧರ್ಮಕ್ಕೆ ವಿರುದ್ಧ. 'ಅಹಿಂಸೆ' ಸೃಷ್ಟಿ ಧರ್ಮಕ್ಕೆ ಅನುಗುಣವಾದದ್ದು ಅದಕ್ಕೆ "ಅಹಿಂಸಾ ಪರಮೋ ಧರ್ಮಃ" ಎಂದು ಹೇಳಿದ್ದಾರೆ. ಅಂದರೆ "ಹಿಂಸೆ ಅಧರ್ಮ" ಎಂದು ಇದರ ಅರ್ಥ.

ಅಧರ್ಮ ನಶಿಸುತ್ತದೆ, ಅಧರ್ಮ ರಕ್ಷಿಸಲ್ಪಡುವುದಿಲ್ಲ, ಶಿಕ್ಷಿಸಲ್ಪಡುತ್ತದೆ. ಆದ್ದರಿಂದ ಅಧರ್ಮವನ್ನು ಬಿಡಿ, ಅಂದರೆ ಹಿಂಸೆಯನ್ನು ಬಿಡಿ. ರಾಕ್ಷಸತ್ವವನ್ನು ಬಿಡಿ, ದುಷ್ಟರಂತೆ ಪ್ರವರ್ತಿಸಬೇಡಿ.

"**ಧರ್ಮೋ ರಕ್ಷತಿ ರಕ್ಷಿತಃ**" ಎಂದಿದ್ದಾರೆ ಅಲ್ಲವೇ! ಅಂದರೆ, ಧರ್ಮವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಅಂದರೆ, ಧರ್ಮವೇ ನಮ್ಮನ್ನು ಕಾಪಾಡಬಲ್ಲದು. ಹಿಂಸೆಯನ್ನು ಬಿಡಬೇಕೆಂದರೆ, ಒಂದೆ ಮಾರ್ಗ ಅದೇ 'ಧ್ಯಾನ'. ಧ್ಯಾನ ಮಾಡಿದರೆ ಎಂತಹವರಾದರೂ ಹಿಂಸೆಯನ್ನು ಬಿಡಬಲ್ಲರು. ದುಷ್ಟತ್ವವನ್ನು ಬಿಡಬಲ್ಲರು. "ದಯೆ ಕರುಣೆ " ಅವರ ಗುಣಗಳಾಗುತ್ತದೆ. ಅಂತಹವರು ಶಿಕ್ಷಿಸಲ್ಪಡುವುದಿಲ್ಲ, ಅವರಿಗೆ ಕಷ್ಟಗಳು ಬರುವುದಿಲ್ಲ, ರೋಗಗಳು ಬರುವುದಿಲ್ಲ, ಜೀವನದಲ್ಲಿ ಹಾಯಾಗಿ ಜೀವಿಸುತ್ತಾರೆ.

ಹಾಗೆಯೇ ಶಿಷ್ಟರಲ್ಲಿ ಎರಡು ವಿಧ (1) ಮಹಾತ್ಮರು, (2) ದೇವತೆಗಳು... ಇವರು ಯಾರಿಗೂ ಹಿಂಸೆ ಮಾಡುವುದಿಲ್ಲ ಅಂದರೆ ಎಲ್ಲರಿಗೂ ಒಳ್ಳೆಯದೇ ಮಾಡುತ್ತಾರೆ. ಎಲ್ಲರಿಗೂ ಆನಂದವನ್ನು ಉಂಟು ಮಾಡುತ್ತಾರೆ. ಇವರಿಬ್ಬರೂ ರಕ್ಷಿಸಲ್ಪಡುತ್ತಾರೆ. ಆದರೆ ದೇವತೆಗಳೇ ದೇವರಿಗೆ ಇಷ್ಟ. ಅವರು ದೇವರನ್ನು ಸೇರುವರು. ಮಹಾತ್ಮರು ಸೇವೆ ಮಾಡುತ್ತಾರೆ.ಒಳಿತು ಮಾಡುತ್ತಾರೆ ಆದರೆ ಕೆಲವು ವರ್ಗಗಳಿಗೆ ಮಾತ್ರವೇ ಮಾಡುತ್ತಾರೆ. ತಮ್ಮ ಕುಟುಂಬಕ್ಕೆ, ಕುಲ ಮತಗಳಿಗೆ, ಪ್ರಾಂತಗಳಿಗೆ, ದೇಶಗಳಿಗೆ, ಮಾತ್ರವೇ ಸೇವೆ ಮಾಡುತ್ತಾರೆ. ಇದು ಪರಿಧಿಗಳಿಂದ ಕೂಡಿದ ಸೇವೆ.

ಆದರೆ ದೇವತೆಗಳು ಎಲ್ಲರೂ ಒಂದೇ ಎನ್ನುವ ಭಾವದಿಂದ ಅಂದರೆ ಮಾನವರೇ ಅಲ್ಲದೇ, ಸಮಸ್ತ ಪ್ರಾಣಿಗಳು ಎಲ್ಲರೂ ಒಂದೇ ಎನ್ನುವ ಭಾವದೊಂದಿಗೆ ಎಲ್ಲರೂ ಭಗವಂತನ ಸ್ವರೂಪರೆ ಎಂದು ಭಾವಿಸುತ್ತಾ, ಎಲ್ಲರಿಗೂ ಸೇವೆ ಮಾಡುತ್ತಾರೆ. ಎಲ್ಲರಿಗೂ ಆನಂದ ಉಂಟು ಮಾಡುವ ಪ್ರಯತ್ನ ಮಾಡುತ್ತಾರೆ. ಮಿತಿಗಳಿಲ್ಲದೆ ಸೇವೆ ಮಾಡುತ್ತಾರೆ. ಅದರಲ್ಲಿಯೆ ದೇವರನ್ನು ನೋಡುತ್ತಾರೆ. ಇವರು ಹೆಚ್ಚಾಗಿ ಧ್ಯಾನ ಮಾಡುತ್ತಾರೆ ಅದಕ್ಕೆ ದೇವರಿಗೆ ಇಷ್ಟವಾಗುತ್ತಾರೆ. ಭಗವಂತನು ದೇವತೆಗಳ ಪಕ್ಷಪಾತಿ ಎಂದು ಕೂಡ ಅನ್ನಿಸಿಕೊಂಡಿದ್ದಾರೆ.

ಅದಕ್ಕೆ ಯಾವ ಪುರಾಣದಲ್ಲಿ ನೋಡಿದರೂ ದೇವರುಗಳು ರಾಕ್ಷಸರನ್ನು ಸಂಹರಿಸುವುದನ್ನು ನೋಡುತ್ತೇವೆ. ಹಾಗೇ ದೇವತೆಗಳನ್ನು ರಕ್ಷಿಸುವುದು ನೋಡುತ್ತೇವೆ. ಆದ್ದರಿಂದ ದುಷ್ಟತ್ವವನ್ನು, ರಾಕ್ಷಸತ್ವವನ್ನು ಬಿಡಿ ಜೀವ ಹಿಂಸೆ ಮಾಡಬೇಡಿ, ಪ್ರಾಣಿಗಳ ಮೇಲೆ 'ದಯೆ' ತೋರಿ ಮಾಂಸ ಭಕ್ಷಣೆಯನ್ನು ಬಿಡಿ, ಶಾಕಾಹಾರಿಗಳಾಗಿ. ಧ್ಯಾನ ಮಾಡಿ ಶಿಷ್ಟರಾಗಿ ಜೀವಿಸಿ. ಭಗವಂತನ ರಕ್ಷಣೆ ಹೊಂದಿರಿ, ಆನಂದವಾಗಿ ಜೀವಿಸಿರಿ.

# ಅಮೃತ ಯಾರಿಗೆ ಸಿಕ್ಕಿತು?



ದೇವತೆಗಳೆಲ್ಲರೂ ಶ್ವಾಸಾಹಾರಿಗಳು, ಅಂದರೆ ಧ್ಯಾನ ಮಾಡುವವರು. ರಾಕ್ಷಸರೆಲ್ಲರೂ ಮಾಂಸಾಹಾರಿಗಳು. ಅಂದರೆ ಜೀವ ಹಿಂಸೆ ಮಾಡುವವರು.

ಇಬ್ಬರು ಅಮೃತಕ್ಕಾಗಿ ಹೋರಾಟ ಮಾಡಿದರು ಹಾಲಿನ ಸಮುದ್ರವನ್ನು ಮಥಿಸಿದರು.ಕಾರಣ ಅಮರರಾಗಲು, ಹಾಲಿನ ಸಮುದ್ರವನ್ನು ಮಥಿಸುತ್ತಿರುವಾಗ ಮೊದಲು ಹಾಲಾಹಲ, ಕಲ್ಪವೃಕ್ಷ, ಕಾಮಧೇನು, ಐರಾವತ,ಲಕ್ಷ್ಮಿದೇವಿ ಹೀಗೆ ಇನ್ನು ಎಷ್ಟೋ ಹುಟ್ಟಿ ಬಂದವು. ಕೊನೆಗೆ ಅಮೃತವು ಕೂಡ ಹುಟ್ಟಿತು. ಆಗ ಅಮೃತವನ್ನು ಸಾಧಿಸಿಕೊಳ್ಳಲು, ದೇವತೆಗಳು ರಾಕ್ಷಸರು ಇಬ್ಬರು ಕಷ್ಟಪಟ್ಟರು. ಆದರೆ ಭಗವಂತನು ಮೋಹಿನಿ ರೂಪದಲ್ಲಿ ದೇವತೆಗಳಿಗೆ ಅಮೃತವನ್ನು ಹಂಚಿದನು. ರಾಕ್ಷಸರಿಗೆ ಸಿಗಲಿಲ್ಲ.

ಇದರ ಅನುಸಾರ ಭಗವಂತನ ಅನುಗ್ರಹ ದೇವರಿಗೆ, ದೇವತೆಗಳಿಗೆ ಇದೆ ಎಂದು ಅರ್ಥ. ಎಷ್ಟು ಕಷ್ಟಪಟ್ಟರೂ ರಾಕ್ಷಸರಿಗೆ ಹಂಚಲಿಲ್ಲ... ಅಷ್ಟೇ ಅಲ್ಲ ಭಗವಂತನು ದೇವತೆಗಳ ಪಕ್ಷಪಾತಿ ಎಂದು ಕೂಡ ಹೇಳುತ್ತಾರೆ. ಕಾರಣ ರಾಕ್ಷಸರು ಜೀವ ಹಿಂಸಾಪರರು. ಮಾಂಸ ಭಕ್ಷಕರು. ಲೋಕವನ್ನು ಹಿಂಸಿಸುವವರು. ಆದರೆ ದೇವತೆಗಳು ಅಹಿಂಸಾ ಪರರು, ಧ್ಯಾನ ನಿಷ್ಠೆ ಅಂದರೆ ಶ್ವಾಸವನ್ನೇ ಆಹಾರವಾಗಿ ತೆಗೆದುಕೊಳ್ಳುವವರು, ಲೋಕಕ್ಕೆ ಉಪಕಾರ ಮಾಡುವವರು. ಆದ್ದರಿಂದ ಅವರು ಭಗವಂತನ ಅನುಗ್ರಹವನ್ನು ಹೊಂದಿದರು. ಅಮೃತದಿಂದ, ಅಮರತ್ವವನ್ನು ಹೊಂದಿದರು. ಆದರೆ ಮಾಂಸ ಭಕ್ಷಕರಾದ ರಾಕ್ಷಸರು ಕಷ್ಟಪಟ್ಟರು ಕೂಡಾ ಅಮೃತವನ್ನು ಹೊಂದಲಾರದೆ, ದುಃಖಕರವಾದ ಜನನ ಮರಣ ಚಕ್ರದಲ್ಲಿ ಸಿಲುಕಿಕೊಂಡರು.

ಅಂದರೆ ಮಾಂಸ ಭಕ್ಷಣೆ ಮಾಡಿ ಅವರು ಭಗವಂತನ ಅನುಗ್ರಹವನ್ನು ಹೊಂದಲಿಲ್ಲ. ಜೊತೆಗೆ ಜನನ ಮರಣಗಳೆನ್ನುವ ದುಃಖಕರವಾದ ಚಕ್ರದಲ್ಲಿ ಸಿಲುಕಿ ಕೊಳ್ಳುವರೆಂದು ಭಗವದ್ಗೀತೆಯ ಮೂಲಕ ನಾವು ತಿಳಿದುಕೊಳ್ಳಬಹುದು.

**ಶ್ಲೋಕ ॥ ತಾನಹಂ ದ್ವಿಷತಃ ಕ್ರೂರಾಸ್ಸಂಸಾರೇಷು ನರಾಧಮಾನ್ ।**
**ಕ್ಷಿಪಾಮ್ಯಜಸ್ರಮ ಶುಭಾನಾಸುರಿಷ್ವೇವ ಯೋನಿಷು" ॥**
**(ಭ. ಗೀ.16–19)**

ತಾ :– ಸರ್ವಜೀವಿಗಳಲ್ಲಿ, ಆತ್ಮ ಸ್ವರೂಪನಾದ ನನ್ನನ್ನು ಹಿಂಸಿಸುವ ಕ್ರೂರರಾದ ದುಷ್ಟರನ್ನು ಜನನ ಮರಣಗಳಿಂದ ಕೂಡಿರುವ, ದುಃಖಕರವಾದ ಅಸುರ ಯೋನಿಗಳಲ್ಲಿ ಹುಟ್ಟಿಸುವೆನು" ಎಂದು ನುಡಿದಿದ್ದಾನೆ.

ಆದ್ದರಿಂದ ಮೃತಾಹಾರವಾದ ಮಾಂಸಹಾರವನ್ನು ಬಿಡೋಣ, ಅಮೃತಾಹಾರವಾದ ಫಲಗಳು ಶಾಕಾಹಾರವನ್ನು ತೆಗೆದುಕೊಳ್ಳೋಣ, ಧ್ಯಾನವನ್ನು ಮಾಡೋಣ, ಭಗವಂತನ ಅನುಗ್ರಹಕ್ಕೆ ಪಾತ್ರರಾಗೋಣ, ಅಮರರಾಗೋಣ. ಅದಕ್ಕೆ **'ಅಮೃತಕ್ಕೆ' ಮಿಗಿಲಾದ 'ಆಹಾರವಿಲ್ಲ'... 'ಧ್ಯಾನ'ಕ್ಕೆ ಮಿಗಿಲಾದ ಸಾಧನ ಇಲ್ಲ... ಎಂದು ಹೇಳುತ್ತಾರೆ.**

**ಸತ್ಯಮೇವ ಜಯತೇ**

ಮುಂಡಕೋಪನಿಷತ್ತಿನಲ್ಲಿ ಹೀಗಿದೆ

'ಸತ್ಯಮೇವ ಜಯತೇ ನಾನೃತಂ, ಸತ್ಯೇನ ಪಂಥಾ ವಿತತೋ ದೇವಯಾನಃ
ಯೇನಾಕ್ರಮನ್ತಿ ಋಷಯೋ ಹ್ಯಾಪ್ತಕಾಮಾ, ಯತ್ರ ತತ್ ಸತ್ಯಸ್ಯ ಪರಂ ವಿಧಾನಂ

**– ಮುಂಡಕೋಪನಿಷತ್ (3–6)**

| | | |
|---|---|---|
| ಸತ್ಯಮೇವ ಜಯತೇ | = | ಸತ್ಯ (ಆತ್ಮ) ಮಾತ್ರವೇ ಜಯಿಸುತ್ತದೆ. ನಿತ್ಯವಾದದ್ದೇ ಸತ್ಯ. ನಿತ್ಯವಲ್ಲದ್ದು ಅಸತ್ಯ. |
| ನಾನೃತಂ | = | ಅನಾತ್ಮ ಯಾವಾಗಲೂ ಜಯಿಸುವುದಿಲ್ಲ |
| ಸತ್ಯೇನ ದೇವಯಾನಃ | = | ಆತ್ಮಜ್ಞಾನದಿಂದಲೇ ಊರ್ಧ್ವಲೋಕ ಪ್ರಾಪ್ತಿಯಾಗುತ್ತದೆ. |
| ಪಂಥಾ ವಿತತಃ | = | ಮಾರ್ಗವು ಏರ್ಪಟ್ಟಿದೆ. |
| ಯೇನ | = | ಯಾವುದರಿಂದ |
| ಆಪ್ತ ಕಾಮಾಃ ಋಷಯ | = | ಕೋರಿಕೆಗಳು ತೀರಿದ ಋಷಿಗಳು (ಧ್ಯಾನ ಯೋಗಿಗಳು) |
| ಯತ್ರ | = | ಎಲ್ಲಿ |
| ಸತ್ಯಸ್ಯ | = | ಸತ್ಯದ (ಆತ್ಮತತ್ತ್ವ) |
| ತತ್ ಪರಮಂ ವಿಧಾನಂ | = | ಆ ಪರಮ ಪದವು |
| (ಆಸ್ತಿ = ಇರುವುದು ತತ್ರ | = | ಅಲ್ಲಿ |
| ಆಕ್ರಮಂತಿ ಹಿ | = | ಸೇರುತ್ತಾರೆ. |

# ತಂದೆ ತಾಯಿಯರನ್ನು ಗೌರವಿಸಬೇಕು ಹಿಂಸೆ ಮಾಡಬಾರದು

**ಬ್ರಹ್ಮರ್ಷಿ ಪತ್ರೀಜಿ ಒಂದು ಸಂದರ್ಭದಲ್ಲಿ ನೀಡಿದ ಅದ್ಭುತ ಸಂದೇಶ :–**

ತಂದೆ ತಾಯಿಯನ್ನು ಗೌರವಿಸಬೇಕು ಆದರೆ ಹಿಂಸೆ ಮಾಡಬಾರದು ಎಂದು ದೊಡ್ಡವರು ಹೇಳುತ್ತಾರೆ... ಹಾಗೆ ಮಕ್ಕಳಿಗೆ ಬೋಧಿಸುತ್ತಾರೆ, ಉಪನ್ಯಾಸಗಳನ್ನು ಕೊಡುತ್ತಾರೆ ಆದರೆ ಅದಕ್ಕಿಂತ ಹೆಚ್ಚಾಗಿ ಆಲೋಚಿಸುವುದಿಲ್ಲ.

ಸೃಷ್ಟಿಯಲ್ಲಿ ಮಾನವರೇ ಅಲ್ಲ ಯಾರು ಮಕ್ಕಳಿಗೆ ಜನ್ಮ ಕೊಟ್ಟರೂ, ತಾಯಿಯೇ ಆಗುತ್ತಾರೆ ಅದು ಪ್ರಾಣಿಗಳಾದರೂ, ಆದ್ದರಿಂದ ಯಾವ ತಾಯಿಯೇ ಆದರೂ, ಗೌರವಿಸಲು ಅರ್ಹಳಾಗುತ್ತಾಳೆ, ಪ್ರೇಮಿಸಲು ಅರ್ಹತೆಯುಳ್ಳವಳು. ಸೃಷ್ಟಿಯ ಲೆಕ್ಕದಲ್ಲಿ ಪ್ರತಿ ತಾಯಿಯು ಗೌರವಿಸಲು ಪಾತ್ರರಾಗಿದ್ದಾಳೆ.

ಮಾನವರು ತಂದೆ ತಾಯಿಯನ್ನು ಗೌರವಿಸಿ ಎನ್ನುತ್ತಾರೆ. ಆದರೆ ತಾಯಿ ಮೀನನ್ನು, ತಾಯಿ ಕೋಳಿಯನ್ನು, ತಾಯಿ ಮೇಕೆಯನ್ನು, ಹಿಂಸಿಸುತ್ತಾರೆ, ಸಾಯಿಸಿ ತಿನ್ನುತ್ತಾರೆ. ಪ್ರಾಣಿಗಳನ್ನು ಅವುಗಳ ಮರಿಗಳಿಂದ, ಮರಿಗಳನ್ನು ಅವುಗಳ ತಂದೆ ತಾಯಿಯಿಂದ ಬೇರೆ ಮಾಡಿ ತಮ್ಮ ಮಕ್ಕಳು ತಮ್ಮನ್ನು ಪ್ರೀತಿಸಬೇಕು ಗೌರವಿಸಬೇಕೆಂದು ಹೇಳುವರು. ಪ್ರಾಣಿಗಳ ತಾಯಿಯನ್ನು ಕೊಂದು, ರುಚಿಯ ಹೆಸರಿನಲ್ಲಿ ಎಳೆ ಮರಿಗಳನ್ನು ಕೊಂದು... ಪರಸ್ಪರ ತಾಯಿ ಮಕ್ಕಳ ಅಗಲುವಿಕೆಗೆ ಕಾರಣವಾಗಿ, ತಮ್ಮ ಮಕ್ಕಳಿಗೆ ಆಹಾರವನ್ನಾಗಿ ಕೊಡುತ್ತಾರೆ.... ನಾವು ನಿಮ್ಮ ತಂದೆ ತಾಯಿ ನಮ್ಮನ್ನು ಗೌರವಿಸಿ ಅದು ಮಕ್ಕಳಾದ ನಿಮ್ಮ ಜವಾಬ್ದಾರಿ ಎಂದು ಹೇಳುತ್ತೇವೆ.ಹಾಗಾದರೆ ಇವರಿಗೆ ಜವಾಬ್ದಾರಿಯ ಕುರಿತು ಎಷ್ಟರವರೆಗೆ ತಿಳಿದಿದೆ!? ಸೃಷ್ಟಿಯಲ್ಲಿ ಇತರ ಪ್ರಾಣಿಗಳ ತಂದೆ ತಾಯಿಯನ್ನು ಹಿಂಸಿಸಿ

**ನಿನ್ನ ಕುಟುಂಬದೊಂದಿಗೆ ಜೀವಿಸು... ಇತರ ಜೀವಿಗಳನ್ನು ತಮ್ಮ ಕುಟುಂಬದೊಂದಿಗೆ ಜೀವಿಸಲು ಬಿಡು**



ಕೊಂದು ತಿನ್ನುವವರು, ಇವರು ಎಂತಹ ತಂದೆ ತಾಯಿಯರು? ಮಕ್ಕಳಿಗೆ ಹೇಳುವುದಾದರು ಏನು !?

ಇವರು ತಮ್ಮನ್ನು ಗೌರವಿಸಿ ಎನ್ನುತ್ತಾರೆ ಹೊರತು ಅವರು ಮಾತ್ರ ಸೃಷ್ಟಿಯಲ್ಲಿನ ತಾಯಿಕೋಳಿಯ, ತಾಯಿ ಮೇಕೆಯ, ತಾಯಿ ಮೀನಿನ ಮಾತೃತ್ವವನ್ನು ಅವುಗಳ ಮಮಕಾರವನ್ನು ಗೌರವಿಸುವುದಿಲ್ಲ. ಅವರು ತಮ್ಮ ಮಕ್ಕಳಿಂದ ಮಾತ್ರ ಪ್ರೇಮವನ್ನು ಆಶಿಸುತ್ತಾರೆ. ಆದರೆ ಅವರು ಯಾವುದನ್ನೂ ಪ್ರೇಮಿಸು ವುದಿಲ್ಲ ಇದೇ ಅಜ್ಞಾನ, ಮೂರ್ಖತ್ವ ಇಂತಹವರು ಕಡ್ಡಾಯವಾಗಿ ಭವಿಷ್ಯತ್ತಿನಲ್ಲಿ ನರಕವನ್ನು ಅನುಭವಿಸುತ್ತಾರೆ.

ಧ್ಯಾನ ಮಾಡಿದರೆ ಎಲ್ಲಾ ಆಲೋಚಿಸಬಲ್ಲರು.. ಅರ್ಥ ಮಾಡಿಕೊಳ್ಳುವರು. ಸೃಷ್ಟಿಯಲ್ಲಿನ ಎಲ್ಲಾ ಜೀವಿಗಳನ್ನು ಗೌರವಿಸುವರು. "ಎಲ್ಲವನ್ನೂ ಆನಂದವಾಗಿ ಜೀವಿಸಲು ಬಿಡುವರು. ತಾವು ಕೂಡಾ ಆನಂದವಾಗಿರುವರು". ಇದೇ ಸೃಷ್ಟಿಧರ್ಮ, ಇದೇ ಭಗವಾನ್ ವರ್ಧಮಾನ ಮಹಾವೀರನ ಸಂದೇಶ ಜೀವಿಸು–ಜೀವಿಸಲು ಬಿಡು.

## ಅಧ್ಯಾತ್ಮಿಕ ಶಾಸ್ತ್ರ ವಿಭಾಗಗಳು

ಆಧ್ಯಾತ್ಮಿಕ ಶಾಸ್ತ್ರ ಪರಿಜ್ಞಾನದಲ್ಲಿ ನಾಲ್ಕು ವಿಭಾಗಗಳಿವೆ.

ಅ) ಧ್ಯಾನ

ಆ) ದಿವ್ಯಜ್ಞಾನ

ಇ) ನಿತ್ಯ ಜಾಗ್ರತೆ

ಈ) ಮನೋಶಕ್ತಿ

**ಧ್ಯಾನದಿಂದಲೇ ದಿವ್ಯಜ್ಞಾನ ಪ್ರಕಾಶಕ್ಕೆ ಅರ್ಹರಾಗುತ್ತೇವೆ.**

**ದಿವ್ಯಜ್ಞಾನ ಪ್ರಕಾಶದಿಂದಲೇ ನಮ್ಮಲ್ಲಿ ನಿತ್ಯಜಾಗ್ರತೆಯು ಸ್ಥಿತಿಯುಂಟಾಗುತ್ತದೆ.**

**ಧ್ಯಾನ, ದಿವ್ಯಜ್ಞಾನ ಪ್ರಕಾಶ, ನಿತ್ಯಜಾಗ್ರತೆ – ಈ ಮೂರರಿಂದಲೇ ಮನೋಶಕ್ತಿ ಪ್ರಬಲವಾಗುತ್ತದೆ.**

**ಪ್ರಭಲವಾದ ಮನೋಶಕ್ತಿಯ ಮೂಲಕ ಸಾಧಿಸಲು ಅಸಾಧ್ಯವಾದದ್ದು ಯಾವುದೂ ಇಲ್ಲವೇ ಇಲ್ಲ.**

# ಭೂತದಯೆ ತೋರಿಸಿ! ದೇವರ ಕೃಪೆಗೆ, ದೇವರ ಪ್ರೇಮಕ್ಕೆ ಪಾತ್ರರಾಗಿ

ಎಲ್ಲರೂ ಭಗವಂತನಿಗೆ ಪ್ರೀತಿ ಪಾತ್ರರಾಗಬೇಕೆಂದು, ಆತನ ಪ್ರೀತಿ ಹೊಂದಬೇಕೆಂದು, ಆಶಿಸುತ್ತಾರೆ. ಅದು ನಡೆದರೆ ತಾವು ಧನ್ಯರು ಎಂದು ಭಾವಿಸುತ್ತಾರೆ. ಅದಕ್ಕಿಂತ ಬೇರೇನು ಬೇಡ ಎಂದು ಭಾವಿಸುತ್ತಾರೆ.

ಹಾಗಾದರೆ ಭಗವಂತನ ಪ್ರೇಮವನ್ನು ಪಡೆಯ ಬೇಕೆಂದರೆ ಏನು ಮಾಡಬೇಕು? ಈ ಕೆಳಗಿನ ಶ್ಲೋಕದ ಮೂಲಕ ಶ್ರೀ ಕೃಷ್ಣ ಭಗವಾನ್ ಏನು ಹೇಳಿದ್ದಾರೆ ನೋಡೋಣ.

**ಶ್ಲೋಕ ॥ ಸಂನಿಯ ಮ್ಯೇನಿಂದ್ರಿಯ ಗ್ರಾಮಂ, ಸರ್ವತ್ರ ಸಮ ಬುದ್ಧಯಃ**
**ತೇಪ್ರಾಪ್ನೋವನ್ತಿ ಮಾಮೇವ ಸರ್ವಭೂತ ಹಿತೇರತಾ:**
**(12–4)**

ತಾ :–ಯಾರು ಇಂದ್ರಿಯಗಳೆಲ್ಲವನ್ನು ತಮ್ಮ ಸ್ವಾಧೀನದಲ್ಲಿ ಇರಿಸಿಕೊಳ್ಳುವರೋ, ಎಲ್ಲರ ಮೇಲೆ ಸಮಭಾವ ಹೊಂದಿರುವರೋ, ಸಮಸ್ತ ಪ್ರಾಣಿಗಳಿಗೆ ಹಿತವನ್ನುಂಟು ಮಾಡುವುದರಲ್ಲಿ ಆಸಕ್ತಿ ತೋರಿಸುವರೋ ಅವರು ನನ್ನನ್ನು ಹೊಂದುವರು.

ಮೇಲಿನ ಶ್ಲೋಕದಲ್ಲಿ ಭಗವಾನರು ಮುಖ್ಯವಾಗಿ ಹೇಳಿದ್ದು ಎಲ್ಲರ, ಎಲ್ಲಾ ಜೀವಿಗಳ ಮೇಲೆ ಸಮಭಾವ ಹೊಂದಿರಬೇಕೆಂದು... ಕಾರಣ ಎಲ್ಲರಲ್ಲೂ ಇರುವುದು ಆತನೇ ಲೋಕದಲ್ಲಿ ಹೆಚ್ಚು–ಕಡಿಮೆ ; ಹೀನ–ಉನ್ನತವಾದದ್ದು ಎನ್ನುವುದು ಇಲ್ಲವೇ ಇಲ್ಲ ಆದ್ದರಿಂದ ಎಲ್ಲರ ಮೇಲೆ ಎಲ್ಲಾ ಪ್ರಾಣಿಗಳ ಮೇಲೆ ಸಮಭಾವ ಹೊಂದಿರಬೇಕು ಎನ್ನುತ್ತಿದ್ದಾರೆ.

ಈ ವಿಷಯವಾಗಿ ತಾಳಪಾಕ ಅನ್ನಮಾಚಾರ್ಯರು ಬ್ರಹ್ಮವೊಂದೇ ಪರ ಬ್ರಹ್ಮವೊಂದೇ ಎಂದು ಹಾಡುತ್ತಾ, ಹೀನಾಧಿಕಗಳು ಯಾವುದು ಇಲ್ಲ ಎಲ್ಲರಿಗೂ ಶ್ರೀಹರಿಯೇ ಅಂತರಾತ್ಮ ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಕೃಷ್ಣ ಭಗವಾನರು ಇನ್ನು ಸಮಸ್ತ ಪ್ರಾಣಿಗಳಿಗೂ ಹಿತವನ್ನುಂಟು ಮಾಡಲು ಅಂದರೆ ಒಳಿತನ್ನು ಮಾಡಲು ಆಸಕ್ತಿ ತೋರಿಸಬೇಕು ಎಂದುಕೊಳ್ಳುವವರು ಅವುಗಳನ್ನು ಭಕ್ಷಿಸುವುದಿಲ್ಲ, ರಕ್ಷಿಸುವುದರಲ್ಲಿ ಆಸಕ್ತಿ ತೋರಿಸಬೇಕು ಎಂದಿದ್ದಾರೆ. ಹಾಗೆ ಸಮಸ್ತ

ಭೂತಗಳಿಗೆ ಯಾರು ಒಳಿತು ಮಾಡಲು ಪ್ರಯತ್ನಿಸುವರು ಅಂದರೆ ಅವುಗಳನ್ನು ಹಿಂಸಿಸದೆ, ಅವುಗಳ ಮೇಲೆ ಹಿಂಸೆ ನಡೆಯದೆ ನೋಡಿಕೊಳ್ಳುವರು ಅಂದರೆ ಮಾಂಸ ಭಕ್ಷಣೆಯನ್ನು ಬೇರೆಯವರು ಬಿಡುವಂತೆ ಮಾಡುವರೋ,ಎಲ್ಲರ ಕೈಯಲ್ಲಿ ಮಾಂಸ ಭಕ್ಷಣೆ ಬಿಡಿಸಿ, ಬಿಡಿಸುವ ಪ್ರಯತ್ನ ಮಾಡುವರೋ, ಅವರು ಭಗವಂತನನ್ನು ಹೊಂದಬಹುದು ಎಂದು ಮೇಲಿನ ಶ್ಲೋಕದ ಮೂಲಕ ನಾವು ಅರ್ಥಮಾಡಿಕೊಳ್ಳಬಹುದು.

ಏಕೆಂದರೆ ಯಾರೋ ಒಬ್ಬರನ್ನು ಮಾಂಸವನ್ನು ತ್ಯಜಿಸುವಂತೆ ಮಾಡಿದರೆ, ನಾವು ಸರಾಸರಿ ಅವರ ಜೀವನದಲ್ಲಿ ಎಷ್ಟೋ ನೂರಾರು ಕೋಳಿಗಳು, ಎಷ್ಟೋ ಮೇಕೆಗಳು, ಎಷ್ಟು ಮೀನುಗಳು, ಬದುಕಿ ಉಳಿಯುತ್ತದೆ. ಆನಂದವಾಗಿ ಜೀವಿಸುತ್ತದೆ. ಹಾಗೆ ಒಬ್ಬರು ಮಾಂಸ ತಿನ್ನುವುದನ್ನು ಬಿಡಿಸಿದರೆ ಎಷ್ಟು ನೂರಾರು ಪ್ರಾಣಿಗಳಿಗೆ ಹಿತವನ್ನುಂಟು ಮಾಡಿದವರಾಗುತ್ತೇವೆ. ಒಳಿತು ಮಾಡಿದವರಾಗುತ್ತೇವೆ.ಆನಂದ ವನ್ನುಂಟು ಮಾಡಿದವರಾಗುತ್ತೇವೆ. ಸ್ನೇಹಿತರೆ, ಅವುಗಳಿಗೆ ಸ್ವೇಚ್ಛೆಯಿಂದ ಜೀವಿಸಬಲ್ಲ ಅವಕಾಶವನ್ನು ನೀಡಿದವರಾಗುತ್ತೇವೆ.

ಎಲ್ಲಾ ಜೀವಿಗಳು ದೇವರ ರೂಪಗಳೇ, ಆದ್ದರಿಂದ ಅಷ್ಟು ಮಂದಿ ದೇವರುಗಳ ಆನಂದಕ್ಕೆ ನಾವು ಕಾರಣರಾಗುತ್ತೇವೆ, ಅದರ ಮೂಲಕ ದೇವರ ಸೃಷ್ಟಿಯಲ್ಲಿ ನಾವು ತುಂಬಾ ಉನ್ನತರಾಗಬಲ್ಲೆವು. ಆತನ ದೃಷ್ಟಿಯಲ್ಲಿ ನಾಯಕರಾಗುತ್ತೇವೆ. ಏಕೆಂದರೆ, ಆತನ ಮೇಲೆ ನಡೆಯುವ ಹಿಂಸೆಯನ್ನು ನಡೆಯದಂತೆ ನಾವು ನೋಡಿಕೊಂಡಿದ್ದೇವೆ. ತಡೆದಿದ್ದೇವೆ ...

ಆಲೋಚಿಸಿ ನಿಮ್ಮ ಮೇಲೆ ನಡೆಯುವ ಹಿಂಸೆಯನ್ನು ಯಾರಾದರೂ ತಡೆದರೆ, ಅಡ್ಡ ಬಂದರೆ ಅವರನ್ನು ನೀವು ಎಷ್ಟು ಪ್ರೇಮಿಸುತ್ತಿರಿ! ಇಷ್ಟಪಡುತ್ತೀರಿ!! ಅದರಿಂದ **"ಹಿಂಸೆಯನ್ನು ನಿಲ್ಲಿಸಬೇಕೆಂದರೆ ಹಿಂಸೆಗೆ ಒಳಗಾಗುತ್ತಿರುವವರನ್ನು ಕಾಪಾಡಿ ಅವರ ಪ್ರೇಮವನ್ನು ಹೊಂದುವುದು"** ಚಿಕ್ಕ ಉದಾಹರಣೆಯನ್ನು ನೋಡೋಣ.

ಯಾವ ಸಿನಿಮಾಗಳು ನೋಡಿದರೂ, ಮೂರು ಮುಖ್ಯ ಪಾತ್ರಗಳು ಇರುತ್ತವೆ. 1) ನಾಯಕ, 2) ನಾಯಕಿ, 3) ಖಳನಾಯಕ ಯಾವುದೇ ಸಿನಿಮಾ ಕಥೆಗಳನ್ನು ನೋಡಿದರೂ,ಬೇರೆ ಬೇರೆಯಾಗಿರಬಹುದು. ಆದರೆ ಸಾರಾಂಶ ಒಂದೇ ಏಕೆಂದರೆ ಯಾವ ಸಿನಿಮಾದಲ್ಲಿ ಆದರೂ,ಮೊದಲು ವಿಲನ್ ನಾಯಕಿಯನ್ನು ಪೀಡಿಸುತ್ತಾನೆ,

ಪ್ರೀತಿಸಲು ನಿರ್ಬಂಧಿಸುತ್ತಾನೆ, ಬಲವಂತ ಮಾಡುತ್ತಾನೆ ಆಕೆಯ ಮಾನವನ್ನು ಅಪಹರಿಸಲು ಪ್ರಯತ್ನಿಸುತ್ತಾನೆ. ಇಂತಹ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ನಾಯಕ ರಂಗ ಪ್ರವೇಶ ಮಾಡುತ್ತಾನೆ. ಖಳನಾಯಕನ ದೇಹ ಶುದ್ಧಿ ಮಾಡಿ ಓಡಿಸುವುದಾಗಲಿ, ಶಿಕ್ಷಿಸುವುದಾಗಲಿ, ಸಾಯಿಸುವುದಾಗಲಿ ಮಾಡುತ್ತಾನೆ. ಹಾಗೂ ನಾಯಕಿ ಮೇಲೆ ಅತ್ಯಾಚಾರ ನಡೆಯದಂತೆ ನೋಡಿಕೊಳ್ಳುತ್ತಾನೆ.

ಇಲ್ಲಿ ನಾವು ಗಮನಿಸಿದರೆ ಹಾಗೆ ರಕ್ಷಿಸಲ್ಪಟ್ಟ ನಾಯಕಿಯು ಆನಂದ ತಡೆಯಲಾರದೆ ನಾಯಕನು ಮಾಡಿದ ಕೆಲಸಕ್ಕೆ ಪರವಶಳಾಗುತ್ತಾಳೆ. ಕೂಡಲೇ ಹೀರೊ ಪ್ರೇಮದಲ್ಲಿ ಬೀಳುತ್ತಾಳೆ. ತನ್ನ ಸರ್ವಸ್ವವು ನಾಯಕನೇ ಎನ್ನುತ್ತಾಳೆ. ಎಲ್ಲವನ್ನೂ ಸಮರ್ಪಿಸಿಕೊಳ್ಳಲು ಮುಂದಾಗುವಳು. ಕಾರಣ ತನ್ನ ಮೇಲೆ ನಡೆಯುವ ಹಿಂಸೆಯನ್ನು ಆ ನಾಯಕ ತಡೆದಿದ್ದಾನೆ, ಒಳಿತನ್ನು ಮಾಡಿದ್ದಾನೆ, ಹಿತವನ್ನುಂಟು ಮಾಡಿದ್ದಾನೆ. ಆದ್ದರಿಂದ ಆಕೆಗೆ ಅಷ್ಟು ಪ್ರೀತಿ.

ಅದು ನಿಜ ಜೀವನದಲ್ಲಿ ನಾವು ಆಲೋಚಿಸಿದರೆ ಕೋಳಿಯನ್ನು ನಾಯಕಿ ಎಂದುಕೊಳ್ಳಬಹುದು. ಕೋಳಿ ಅಂದರೆ ಯಾರೋ ಅಲ್ಲ ದೇವರ ಸ್ವರೂಪ. ಹಾಗೆ ಅದನ್ನು ಹಿಂಸಿಸುವರು ಯಾರಾದರೂ ಸರಿಯೇ ಖಳನಾಯಕನೇ ಆಗುತ್ತಾನೆ. ಅಂತಹ ಖಳನಾಯಕನಿಂದ ಕೋಳಿಯನ್ನು ಅರ್ಥಾಥ್ ದೇವರನ್ನು, ಕಾಪಾಡಿದರೆ ಮಾಂಸ ತಿನ್ನುವುದನ್ನು ಬಿಡಿಸಿದರೆ, ನಾವು ದೇವರ ಸೃಷ್ಟಿಯಲ್ಲಿ ನಾಯಕರಾಗುತ್ತೇವೆ. ಅಂದರೆ ಭಗವಂತನ ಪ್ರೇಮವನ್ನು ಪಡೆಯಬಲ್ಲೆವು. ಭಗವಂತನನ್ನು ಆನಂದವಾಗಿರುವಂತೆ ಮಾಡಬಲ್ಲೆವು. ಆತನ ದೃಷ್ಟಿಯಲ್ಲಿ ದೊಡ್ಡವರಾಗುತ್ತೇವೆ, ಪ್ರೀತಿ ಪಾತ್ರರಾಗುತ್ತೇವೆ.


ಹಾಗೆ ದೇವರನ್ನು ಆನಂದ ಪಡಿಸಬೇಕೆಂದರೂ, ಪ್ರೇಮ ಪಡೆಯಬೇಕೆಂದರೂ, ಕೊನೆಗೆ ಆತನನ್ನು ಹೊಂದಬೇಕೆಂದರು,ಹೇಗಾದರೂ ಸರಿ ಯಾವ ವಿಧವಾಗಿಯಾದರೂ ಸರಿ... ಎಲ್ಲರೂ ಮಾಂಸ ಭಕ್ಷಣೆ ಮಾಡುವುದನ್ನು ನಿಲ್ಲಿಸುವ ಹಾಗೆ ನಾವು ಪ್ರಯತ್ನವನ್ನು ಮಾಡಬೇಕು.

ಅಂದರೆ ಭೂತದಯೆ ಕುರಿತು, ಜೀವ ಹಿಂಸೆಯಿಂದ ಆಗುವ ನಷ್ಟಗಳ ಕುರಿತು, ಮಾಂಸ ತಿನ್ನುವುದರಿಂದ ಬರುವ ನಷ್ಟಗಳ ಕುರಿತು,ದೈವ ರೂಪಗಳನ್ನು ಹಿಂಸಿಸುವುದರಿಂದ ಬರುವ ಪಾಪದ ಕುರಿತು ವಿವರವಾಗಿ ತಿಳಿಸಬೇಕು. ಹೇಳುವುದೋ, ಕರಪತ್ರಗಳನ್ನು ಹಂಚುವುದರ , ಮೂಲಕವಾಗಲಿ ಶಾಕಾ ಹಾರಾದ ಪ್ರಾಮುಖ್ಯತೆಯನ್ನು

ಹೊಂದಿರುವ ಪುಸ್ತಕಗಳನ್ನು ಓದುವುದರ ಮೂಲಕ, ಯಾವ ವಿಧವಾಗಿಯಾದರೂ ಆ ಪ್ರಾಣಿಗಳಿಗೆ ಹಿತವನ್ನು ಉಂಟು ಮಾಡಬೇಕು. ಆನಂದವನ್ನು ಕೊಡಬೇಕು. ಒಂದು ವಿಧವಾಗಿ ಹೇಳಬೇಕೆಂದರೆ, ಮಾನವನು ಮಾಡಬಲ್ಲ ಏಕೈಕ ಉನ್ನತ ಕಾರ್ಯ ಎಂದರೆ,ಇದಕ್ಕಿಂತ ಬೇರೆ ಯಾವುದು ಇಲ್ಲ.

ಇದೇ ವಿಷಯವನ್ನು ಮಹಾತ್ಮರು, ಮಹಾಪುರುಷರು ಹೇಳಿದ್ದಾರೆ. ಅವರೆಲ್ಲರೂ ಆಚರಿಸಿ ಹಾಗೆ ಹೇಳಿದ್ದಾರೆ. ಅವರೆಲ್ಲರೂ ಹಾಗೆ ಆಚರಿಸಿ, ತಿಳಿದುಕೊಂಡು ಹೇಳಿದ್ದಾರೆ. ಅದಕ್ಕೆ ಅವರು ಆ ಸ್ಥಿತಿಗೆ ಏರಿದ್ದಾರೆ. ಆದ್ದರಿಂದ ನಾವು ಕೂಡ ಅಮಾಯಕ ಮೂಕ ಜೀವಿಗಳನ್ನು, ಶ್ರೀಕೃಷ್ಣ ಭಗವಾನರು ಹೇಳಿದಂತೆ, ಅವುಗಳಿಗೆ ಒಳಿತು ಮಾಡಬೇಕು ಜೀವ ಹಿಂಸೆಯನ್ನು ನಿಲ್ಲಿಸಬೇಕು, ಮಾಂಸ ಭಕ್ಷಣೆ ನಿಲ್ಲಿಸಬೇಕು. ಭಗವಾನ್ ಕೃಪೆಗೆ ಪಾತ್ರರಾಗಬೇಕು.

ಮುಖ್ಯವಾಗಿ ಧ್ಯಾನ ಮಾಡಲು ಹೇಳಬೇಕು. ಕಾರಣ ಧ್ಯಾನ ಯಾರು ಮಾಡಿದರೂ,ಅವರಿಗೇ ತಿಳಿಯದಂತೆ ಅವರಲ್ಲಿ ಅಹಿಂಸಾತತ್ವ ಜಾಗೃತವಾಗುತ್ತದೆ. ಮಾಂಸ ತಿನ್ನುವುದನ್ನು ಬಿಡುತ್ತಾರೆ. ಎಲ್ಲದರ ಮೇಲೆ ದಯೆ, ಭೂತದಯೆ ಹೊಂದಿರುತ್ತಾರೆ. **"ದಯೆಯುಳ್ಳ ಹೃದಯವೇ ಭಗವಂತನ ನಿಲಯ"** ಎಂದು ಮಲಯಾಳ ಸ್ವಾಮಿಯವರು ಹೇಳಿದ್ದಾರೆ.



**ಯಾರು ಜೀವ ಹಾನಿಗೆ ಮಾಂಸಹಾರಕ್ಕೆ ದೂರವಾಗಿರುತ್ತಾ ಜೀವ ಕಾರುಣ್ಯದೊಂದಿಗೆ ನಡೆದುಕೊಳ್ಳುವರೋ, ಅಂತಹವರ ಹಿತವನ್ನು ಕೋರಿ ಸಕಲ ಜೀವರಾಶಿಗಳು ಭಗವಂತನನ್ನು ಕೈಗಳೆತ್ತಿ ಪ್ರಾರ್ಥಿಸುತ್ತೇವೆ.**
**– ತಿರುವಳ್ಳುವಾರ್**

# ರುಚಿ ದೊಡ್ಡದೇ? ದಯೆ ದೊಡ್ಡದೆ?

ಲೋಕದಲ್ಲಿ ಮಾನವನು ಪ್ರಾಣಿಗಳನ್ನು ಕೂರವಾಗಿ ಸಾಯಿಸಲು, ಅವುಗಳ ಮೇಲೆ ದಯೆ ತೋರದೇ ಇರಲು ಮುಖ್ಯ ಕಾರಣ ಪ್ರಾಣಿಗಳ ಮಾಂಸದ ಒಂದು ರುಚಿಯೇ ... ಅದರ ಅಭ್ಯಾಸವಾಗಿರುವುದೇ ಕಾರಣ ಆದರೆ ಈ ರುಚಿ ಎನ್ನುವುದು ಹೇಗೆ ಅಭ್ಯಾಸವಾಗಿದೆ? ಎಂದರೆ,ಚಿಕ್ಕಂದಿನಿಂದ ಅವರ ತಂದೆ ತಾಯಿಯರು ಅವರಿಗೆ ಈ ಅಭ್ಯಾಸವನ್ನು ಮಾಡಿರುವುದು..

ಆಲೋಚಿಸಿದರೆ ಮಾನವರು ಹಾಗೆ ರುಚಿಗೆ ಗುಲಾಮರಾಗಿ , ಆ ರುಚಿಯನ್ನು ಬಿಡಲಾರದೆ ತಮ್ಮ ಸಹವರ್ತಿಗಳಾದ ಮೂಕ ಜೀವಿಗಳನ್ನು, ಪ್ರಾಣಿಗಳನ್ನು ನಿರ್ಧಾಕ್ಷಿಣ್ಯವಾಗಿ ದಯೆಯಿಲ್ಲದೆ ಹಿಂಸಿಸುತ್ತಿದ್ದಾರೆ, ಸಾಯಿಸುತ್ತಿದ್ದಾರೆ. ಅವುಗಳನ್ನು ಭಕ್ಷಿಸುತ್ತಿದ್ದಾರೆ. ಹಾಗೆ ಅವರು ತಮ್ಮ ರುಚಿಗಾಗಿಯೇ ಪ್ರಾಮುಖ್ಯತೆ ಕೊಡುತ್ತಿದ್ದಾರೆ.. "ದಯಾಗುಣ"ದ ಹಿರಿಮೆಯನ್ನು ತಿಳಿದುಕೊಳ್ಳಲಾರದೆ ಹೋಗುತ್ತಿದ್ದಾರೆ.


ಒಂದು ವಿಧವಾಗಿ ಹೇಳಬೇಕೆಂದರೆ, ದಯಾಗುಣ ಎನ್ನುವುದು ದೈವದೊಂದಿಗೆ ಸಮಾನ. ದೇವರಿಗೆ ಹತ್ತಿರವಾಗಲು ದೈವತ್ವವನ್ನು ಹೊಂದಲು ಬೇಕಾದ ಮುಖ್ಯ ಗುಣ. ಆದರೆ ಮಾನವರು ನಾಲಿಗೆಯ ರುಚಿಗೆ ಗುಲಾಮರಾಗಿರುವುದರಿಂದ ಮುಖ್ಯವಾದ ಆ 'ದಯಾಗುಣ' ವನ್ನು ಕಳೆದುಕೊಳ್ಳುತ್ತಿದ್ದಾರೆ. ದೇವರಿಗೆ ದೂರವಾಗುತ್ತಿದ್ದಾರೆ ಅಷ್ಟೇ ಅಲ್ಲದೇ ದೇವರ ಅನುಗ್ರಹಕ್ಕೆ ಕೂಡ ದೂರವಾಗಿ ಆತನ ಆಗ್ರಹಕ್ಕೆ ಗುರಿಯಾಗುತ್ತಿದ್ದಾರೆ. ಕೊನೆಗೆ ಜೀವನದಲ್ಲಿ ಕಷ್ಟಗಳ ಪಾಲಾಗುತ್ತಿದ್ದಾರೆ. ಕಷ್ಟದಲ್ಲಿ ಭಗವಂತನನ್ನು ದಯೆಗಾಗಿ ಪ್ರಾರ್ಥಿಸಿದರೂ, ದಯೆ ತೋರಬೇಕೆಂದು, ದೀನವಾಗಿ ಬೇಡಿಕೊಂಡರು ಪ್ರಯೋಜನ ಇಲ್ಲದೆ ಹೋಗುತ್ತದೆ. ಭಗವಂತನ ದಯೆಯನ್ನು ಹೊಂದುವ ಅರ್ಹತೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಇದೆಲ್ಲವೂ ಮುಖ್ಯವಾಗಿ ರುಚಿಗೆ ಗುಲಾಮರಾಗಿರುವುದರಿಂದ ನಡೆಯುತ್ತಿದೆ.

ಆದ್ದರಿಂದ ರುಚಿಗೆ ಪ್ರಾಮುಖ್ಯತೆ ಕೊಡಬಾರದು, ಗುಲಾಮರಾಗಬಾರದು, ಒಂದು ಚಿಕ್ಕ ನಾಲಿಗೆಯ ರುಚಿಗಾಗಿ ಇಡೀ ಜೀವನವನ್ನೇ ನರಕಪ್ರಾಯ ಮಾಡಿಕೊಳ್ಳಬಾರದು.

ಆದ್ದರಿಂದ ರುಚಿಗಾಗಿ ನಿರ್ದಯಿಗಳಾಗದಿರಿ ನಿಮಗೆ ರುಚಿಯೇ ಬೇಕೆಂದುಕೊಂಡರೆ, ಶಾಕಾಹಾರದೊಂದಿಗೆ ಎಲ್ಲಾ ವಿಧವಾದ ರುಚಿಗಳನ್ನು ಆಸ್ವಾದಿಸಿ.

"ರುಚಿಗಾಗಿ" ಪಾಪಗಳು ಮಾಡಿ ಕಷ್ಟಗಳು ತಂದುಕೊಳ್ಳುವುದು ಉತ್ತಮವೆ? ಹಾಗಲ್ಲದೆ 'ದಯೆ' ತೋರಿಸಿ ಆನಂದವಾಗಿ ಜೀವಿಸುವುದು ಉತ್ತಮವೆ? "

ಮಹಾನುಭಾವರು, ಯೋಗಿಗಳು ಯಾವಾಗಲೂ ರುಚಿಗೆ ಪ್ರಾಮುಖ್ಯತೆ ಕೊಡುತ್ತಿರಲಿಲ್ಲ. ಅವರು ಯಾವಾಗಲೂ ತಮ್ಮ ಸಾಧನೆಗೆ, ಪ್ರಕೃತಿ ಧರ್ಮಕ್ಕೆ ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಹಾಗಾಗಿ ಅವರು ಆ ಉನ್ನತ ಸ್ಥಿತಿಗೆ ಸೇರಿದರು. ಶಾಶ್ವತ ಆನಂದವನ್ನು ಹೊಂದಿದರು. ಕಾರಣ ಅವರ ಜೀವನದಲ್ಲಿ ದಯೆಗೆ ಪ್ರಾಮುಖ್ಯತೆ ಕೊಟ್ಟಿದ್ದಾರೆ. ದಯಾಗುಣದೊಂದಿಗೆ ದಿವ್ಯಾತ್ಮರಾಗಿದ್ದಾರೆ, ದೇವರಾಗಿದ್ದಾರೆ. ಆದ್ದರಿಂದ ನಾವು ಎಲ್ಲಾ ಪ್ರಾಣಿಗಳ ಮೇಲೆ ದಯೆ ಉಳ್ಳವರಾಗಿರೋಣ.



**"ಶರೀರಕ್ಕೆ ಸಂಬಂಧಿಸಿದ ರುಚಿಗಳೆಲ್ಲವೂ ದುಃಖಕ್ಕೆ ಕಾರಣವೇ ಆಗುತ್ತವೆ" ರುಚಿಗಳು ಇರುವವರೆಗೂ ಪರಮಾತ್ಮನೊಂದಿಗೆ ಸಹಚರ್ಯೆ ಇರುವುದಿಲ್ಲ – ಗುರು ನಾನಕ್**

# ದೇಹ ಬಲವೇ ದಯೆ ಬಲವೇ

ಮಾನವರು ಯಾವಾಗಲೂ ದೇಹ ಬಲಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ದೇಹ ಬಲವನ್ನು ನೋಡಿ ಸಂಭ್ರಮಿಸುತ್ತಾರೆ. ಅಂತಹ ದೇಹ ಬಲಕ್ಕಾಗಿ ಪ್ರಾಣಿಗಳ ಮೇಲೆ ದಯೆ ತೋರಿಸುವುದಿಲ್ಲ, ನಿರ್ಧಾಕ್ಷಿಣ್ಯವಾಗಿ ಸಾಯಿಸಿ ಅವುಗಳ ಮಾಂಸವನ್ನು ಭಕ್ಷಿಸುತ್ತಾ ಇರುತ್ತಾರೆ.

ಮಾಂಸವನ್ನು ತಿನ್ನದಿದ್ದರೆ ಬಲಹೀನರಾಗುತ್ತಾರೆ, ಯಾವ ಕೆಲಸ ಮಾಡಲು ಆಗುವುದಿಲ್ಲ, ನಾವು ಕೆಲಸಕ್ಕೆ ಬಾರದಂತೆ ಆಗುತ್ತೇವೆ ಎನ್ನುವ ಊಹಾಪೋಹಗಳು ತುಂಬಾ ಜನರ, ಕೆಲವು ವರ್ಗದ ಜನರ ಮನಸ್ಸಿನಲ್ಲಿ ಇದು ನಾಟಿದೆ. ಆದ್ದರಿಂದ ಹೀಗಾಗಿ ಎಷ್ಟೋ ಮಂದಿ ತಂದೆ ತಾಯಿಯರು ಮಕ್ಕಳಿಗೆ ಬಲವಂತವಾಗಿ ಮಾಂಸವನ್ನು ತಿನ್ನಿಸುತ್ತಾರೆ. ತಿನ್ನದಿದ್ದರೆ ದಂಡಿಸಿ ತಿನ್ನಿಸುವವರೂ ಇದ್ದಾರೆ. ಅವರ ಅಭಿಪ್ರಾಯ ಏನೆಂದರೆ, ಮಾಂಸ ತಿಂದರೇನೇ ಮನುಷ್ಯ ಇಲ್ಲದಿದ್ದರೆ ಯಾವುದಕ್ಕೂ ಕೆಲಸ ಬರುವುದಿಲ್ಲ ಎಂದು ಅವರ ಲೆಕ್ಕ...ಅವರು ಅದಕ್ಕಿಂತ ಹೆಚ್ಚಾಗಿ ಆಲೋಚಿಸುವುದಿಲ್ಲ.

ಅಂತಹ ತಂದೆ ತಾಯಿಯಂದಿರಿಂದ "ಮಾಂಸ ಇಷ್ಟವಿಲ್ಲ" ಎನ್ನುವ ಎಷ್ಟು ಮಂದಿ ಮಕ್ಕಳು ಮಾನಸಿಕ ವೇದನೆಯನ್ನು ಅನುಭವಿಸುತ್ತಿದ್ದಾರೆ. ತಂದೆ ತಾಯಿಯರಿಗೆ ತಮ್ಮ ನೋವನ್ನು ಅರ್ಥ ಮಾಡಿಸಲಾರದೆ, ಹೇಳಿದರು ಅವರು ಕೇಳದೆ, ಮಕ್ಕಳು ನರಕ ಅನುಭವಿಸುತ್ತಿದ್ದಾರೆ. ಇದಕ್ಕೆಲ್ಲ ಕಾರಣ ಮಾಂಸ ತಿಂದರೆ ಬಲ ಬರುವುದು ಎಂಬ ತಪ್ಪು ನಂಬಿಕೆಗಳೇ.

ಆದರೆ ದೇಹ ಬಲ ಎನ್ನುವುದು ತಾತ್ಕಾಲಿಕ ಮಾತ್ರ. ಕಾರಣ ದೇಹವನ್ನು ಎಷ್ಟು ಬಲಿಷ್ಠವಾಗಿಸಿದರು ಪ್ರಾಣಿಗಳನ್ನು ಕೊಲ್ಲುವುದರಿಂದ ಬಂದ ಪಾಪಗಳಿಂದ ರೋಗಗಳ ಪಾಲಾಗಿ ಎಷ್ಟೋ ವರ್ಷಗಳು ಕಷ್ಟಪಟ್ಟು ಬೆಳೆಸಿದ ಮಾಂಸ ಖಂಡಗಳು , ಕೆಲವು ದಿನಗಳಲ್ಲಿಯೇ ಕರಗಿ ಹೋಗುತ್ತದೆ. ಬಲಿಷ್ಠನಾದವನು ಬಲಹೀನನಾಗುತ್ತಾನೆ. ಹುಲಿಯಂತವನು ಇಲಿಯಂತೆ ಬದಲಾಗುತ್ತಾನೆ ಅಷ್ಟೇ ಅಲ್ಲ ಏನು ಇಲ್ಲದೆ ಇದ್ದರೂ ವೃದ್ಧಾಪ್ಯ ಬಂದರೆ, ಎಂತಹ ಬಲವಂತರಾದರೂ ಬಲಹೀನರಾಗ ಬೇಕಾಗುವುದು. ಆದ್ದರಿಂದ ಬಲ ಎನ್ನುವುದು ತಾತ್ಕಾಲಿಕ ಎಂದು ತಿಳಿದುಕೊಳ್ಳಬೇಕು. ಬಲಕ್ಕೆ ಪ್ರಾಮುಖ್ಯತೆ ನೀಡಿದರೆ ಪ್ರಯೋಜನವಿಲ್ಲ ಎಂದು ತಿಳಿದುಕೊಳ್ಳಬೇಕು. ಬಲವೆಂದು

ಪ್ರಾಣಿಗಳನ್ನು ದಯೆಯಿಲ್ಲದೆ ಕೊಂದರೆ, ನಷ್ಟ ಪಡುವುದು ನಾವೇ ಎಂದು ತಿಳಿದುಕೊಳ್ಳಬೇಕು. ಅಷ್ಟೇ ಅಲ್ಲ ಶಾಕಾಹಾರದಲ್ಲೂ ಮಾನವರಿಗೆ ಬೇಕಾದ ಬಲವನ್ನು ಕೊಡುವ ಅಂಶಗಳು ಇವೆಯೆಂದು ತಿಳಿದುಕೊಳ್ಳಬೇಕು.

ಶಾಕಾ ಹಾರಿಗಳು ಕೂಡ ಬಲಿಷ್ಠವಾಗಿ ಇರುವವರೆ ಎಷ್ಟೋ ಕೆಲಸಗಳನ್ನು ಆಯಾಸವಿಲ್ಲದೆ ಮಾಡಬಲ್ಲವರೇ, ಎಂದು ಚರಿತ್ರೆಯ ಪುಟಗಳನ್ನು ತಿರುಗಿಸಿ ನೋಡಿದರೆ ನಮಗೆ ತಿಳಿಯುತ್ತದೆ. ಅಂತಹವರಲ್ಲಿ ಶಾಕಾಹಾರಿಗಳು ಕೆಲವರು ಮಾಂಸ ಖಂಡವನ್ನುಳ್ಳವರಾಗಿ ಕಲ್ಲು ಬಂಡೆಗಳನ್ನು ಕೂಡ ಅವಲೀಲೆಯಾಗಿ ಎತ್ತುತ್ತಾ ಇದ್ದರೆಂದು ಅವರ ಪ್ರದರ್ಶನಗಳು ಎಲ್ಲರನ್ನೂ ಆಶ್ಚರ್ಯ ಚಕಿತರಾಗಿ ಮಾಡುವ ಘಟನೆಗಳನ್ನು ತಿಳಿದುಕೊಂಡರೆ ಅಗ ಎಲ್ಲವೂ ನಮಗೆ ಅರ್ಥವಾಗುತ್ತದೆ.

ಆದ್ದರಿಂದ ಬಲವೆನ್ನುತ್ತಾ, ದಯೆಯಿಲ್ಲದೆ ಪ್ರವರ್ತಿಸಿ ಜೀವನವನ್ನು ಕಷ್ಟಗಳ ಪಾಲಾಗಿ ಮಾಡಿಕೊಳ್ಳಬೇಡಿ. ಶಾರೀರಿಕ ಬಲಕ್ಕಿಂತ ದಯಾಬಲ ದೊಡ್ಡದೆಂದು ತಿಳಿದುಕೊಳ್ಳಿ. ಕಾರಣ 'ದಯೆ' ಇರುವವರ ಬಳಿ ದೈವ ಬಲ ಇರುತ್ತದೆ.ಒಂದು ವಿಧವಾಗಿ ಹೇಳಬೇಕೆಂದರೆ ಅವರು ದೇವರ ಅನುಗ್ರಹಕ್ಕೆ ಪಾತ್ರರಾಗುತ್ತಾರೆ. ಜೀವನದಲ್ಲಿ ಎಷ್ಟೊ ಲಾಭಗಳನ್ನು ಹೊಂದುತ್ತಾರೆ. ಎಲ್ಲಾ ಸಮಸ್ಯೆಗಳು ಭಗವಂತನ ದಯೆಯಿಂದ ಹಿಮ್ಮೆಟ್ಟಿಸುತ್ತಾರೆ. ಆನಂದವಾಗಿ ಜೀವಿಸುತ್ತಾರೆ. ಅಷ್ಟೇ ಅಲ್ಲ ದಯೆ ತೋರಿದವರಿಗಾಗಿ, ಆ ಜೀವಿಗಳು ಕೂಡ ಪ್ರಾರ್ಥಿಸುತ್ತವೆ. ಆದ್ದರಿಂದ 'ದೇಹ' ಬಲಕ್ಕಿಂತ 'ದಯಾ'ಬಲ ದೊಡ್ಡದೆಂದು ತಿಳಿದುಕೊಳ್ಳಿ. ದಯಯುಳ್ಳವರಾಗಿ ಜೀವಿಗಳ ಮೇಲೆ ದಯೆ ತೋರಿ ಕ್ರೂರತ್ವವನ್ನು ಬಿಡಿ.

# ಒಂದು ಮೇಕೆಯ ಆತ್ಮಕಥೆ

ನಾನು ಎಲ್ಲ ಜೀವಿಗಳ ಹಾಗೆಯೇ ಭಗವಂತನಿಂದ ಸೃಷ್ಟಿಸಲ್ಪಟ್ಟ ಒಂದು ಮೇಕೆ. ನಾನು ಇತರ ಪ್ರಾಣಿಗಳಂತೆ ಅನೇಕ ಜನ್ಮಗಳನ್ನು ತೆಗೆದುಕೊಂಡ ನಂತರ, ಈ ತಾಯಿ



ಮೇಕೆಯ ಗರ್ಭದಲ್ಲಿ ಪ್ರವೇಶಿಸಿದ ಕೂಡಲೇ ಜಿಗುಪ್ಸಾಕರವಾದ ಪಂಜರದಲ್ಲಿ, ಐದು ಮಾಸಗಳ ಕಾಲ ಬಂಧನದಲ್ಲಿ ಇರುವಂತೆ ಕಷ್ಟಪಟ್ಟು ಜನಿಸಿದ ನಂತರ, ಈ ಭೂ ಪ್ರಪಂಚವು ಜೀವಿಸಲು ಅನುವಾದ ಒಳ್ಳೆಯ ಹಾಗೂ ಆಹ್ಲಾದಕರವಾದ ಪ್ರದೇಶವೆಂದು ನನಗೆ ಅನಿಸಿತು.

ನನ್ನ ಯಜಮಾನ ಹಾಗೂ ಆತನ ಚಿಕ್ಕ ಮಕ್ಕಳು ನನ್ನನ್ನು ಎಷ್ಟೋ ಪ್ರೀತಿಯಿಂದ ನೋಡಿಕೊಳ್ಳುತ್ತಾ ತಮ್ಮ ಮಡಿಲಲ್ಲಿ ಇಟ್ಟುಕೊಂಡು ಎಳೆಯ ಎಲೆಗಳನ್ನು ನನಗೆ ತಿನ್ನಲು ಕೊಡುತ್ತಿದ್ದರು. ನಾನು ತಾಯಿಯ ಹಾಲು ಕುಡಿಯುತ್ತಾ ತ್ವರಿತವಾಗಿ ಬೆಳೆಯಲಾರಂಭಿಸಿದೆನು. ಆ ಯಜಮಾನ ನನ್ನನ್ನು ಅಪ್ಯಾಯವಾಗಿ ತಡವತ್ತಾ ತನ್ನ ವ್ಯವಸಾಯ ಕ್ಷೇತ್ರಕ್ಕೆ ತೆಗೆದುಕೊಂಡು ಹೋಗುತ್ತಿದ್ದನು. ಅಲ್ಲಿ ನಾನು ಹಸಿರು ಎಲೆಗಳನ್ನು ತಿನ್ನುತ್ತಿದ್ದೆನು. ಹಾಗೇ ನಾನು ನನ್ನ ಶರೀರದಲ್ಲಿರುವ ವ್ಯರ್ಥ ಪದಾರ್ಥಗಳನ್ನು ಆತನ ಹೊಲದಲ್ಲಿ ವಿಸರ್ಜಿಸಿದಾಗ ಆತನು ಏನೂ ಅನ್ನುತ್ತಿರಲಿಲ್ಲ. ಅದಕ್ಕೆ ಕಾರಣವೇನು ಎಂದು ನನ್ನ ತಾಯಿಯನ್ನು ಕೇಳಿದಾಗ, ನಮ್ಮ ವ್ಯರ್ಥ ಪದಾರ್ಥಗಳು ಆತನ ಹೊಲದಲ್ಲಿ ಗಿಡಗಳಿಗೆ ಗೊಬ್ಬರವಾಗಿ ಬದಲಾಗಿ, ಬೆಳೆಯು ಅಧಿಕವಾದ ಇಳುವರಿಯನ್ನು ಕೊಡುತ್ತದೆ, ಎಂದು ಹೇಳಿದಳು. ಆದ್ದರಿಂದ ಇರಬಹುದು ಆತನಿಗೆ ನನ್ನ ಮೇಲೆ ಕೋಪ ಬರಲಿಲ್ಲ ಎಂದುಕೊಳ್ಳುತ್ತೇನೆ.

ಕಾಲ ಕಳೆಯುತ್ತಾ ಇದ್ದಂತೆ ನಾನು ನನ್ನ ಸಹಚರರೊಂದಿಗೆ ಜೀವಿಸುತ್ತಾ ಇದ್ದೆನು. ಒಂದೂವರೆ ವರ್ಷಗಳ ನಂತರ ನನ್ನ ಯಜಮಾನ ನನ್ನ ಸಹಚರರು 40–50 ಮಂದಿಯೊಂದಿಗೆ ನನ್ನನ್ನು ತೆಗೆದುಕೊಂಡು ಒಂದು ಅಪರಿಚಿತನ ಮುಂದೆ ಸಮೂಹವಾಗಿ ನಿಲ್ಲಿಸಿದನು. ಆನಂತರ ಒಂದು ದೊಡ್ಡ ಮೋಟಾರ್ ವಾಹನ ಅಲ್ಲಿಗೆ ಬಂದ ಮೇಲೆ ನಮ್ಮನ್ನು ಅದರಲ್ಲಿ ಹೋಗುವಂತೆ ಬಲವಂತ ಮಾಡಿದರು. ನಾನು ನನ್ನ ತಾಯಿಯ ಬಳಿಗೆ ಹೋಗಲು ಪ್ರಯತ್ನಿಸಿದಾಗ ವಿಕೃತವಾಗಿ ನೋಡುತ್ತಿದ್ದ

ಮನುಷ್ಯನೊಬ್ಬನು ಕೋಲಿನಿಂದ ನನ್ನನ್ನು ಬಾರಿಸಿದನು. ನಿಸ್ಸಹಾಯಕವಾಗಿ ನಾವು ವಾಹನದೊಳಕ್ಕೆ ಸೇರಿದೆವು. ಗುಂಪಿನಲ್ಲಿ ಒಬ್ಬರ ಮೇಲೆ ಒಬ್ಬರು ಬಿದ್ದಿದ್ದರಿಂದ ನನಗೆ ತಲೆ ತಿರುಗಿದಂತಾಯಿತು. ನನ್ನ ಸಹಚರರು ಕೂಡ ಕಳಾವಿಹೀನವಾದ ಮುಖಗಳಿಂದ ಇದ್ದರು. ಪ್ರತಿಯೊಬ್ಬರ ಮುಖದಲ್ಲೂ ಭಯ ಆವರಿಸಿತ್ತು, ವಾಹನ ಹಾಗೆ ಹೀಗೆ ಕದಲುತ್ತಿದ್ದಾಗ ನಮ್ಮ ಚರ್ಮ ಕಿತ್ತುಕೊಂಡು ಹೋದಂತಾಯಿತು. ಹಗಲು ಕಳೆದು, ರಾತ್ರಿ ಬಂದಿತು ಮತ್ತೊಂದು ಹಗಲು–ರಾತ್ರಿ ಕಳೆದು ಹೋಯಿತು ಆದರೆ ಮೋಟಾರ್ ವಾಹನ ನಿಲ್ಲದಂತೆ ಹೋಗುತ್ತಲೇ ಇದೆ. ವಾಹನ ಯಜಮಾನ ಎರಡು ಸಾರಿ ಸ್ವಲ್ಪ ಆಹಾರ ಹಾಕಿದರು. ಆದರೆ ಅದು ನಮ್ಮ ಹೊಟ್ಟೆಯನ್ನು ಅರ್ಧವೂ ಕೂಡ ತುಂಬಿಸಲಾರದೆ ಹೋಗಿತ್ತು. ಆ ಮಾರನೇ ದಿನ ಒಂದು ಮಹಾನಗರದಲ್ಲಿ ವಾಹನ ನಿಂತಿತು ಒಬ್ಬ ಉದ್ದನೆಯ ಗಡ್ಡ ಉಳ್ಳ ಮನುಷ್ಯ ವಾಹನವನ್ನು ಸಮೀಪಿಸಿ ವಾಹನದ ಯಜಮಾನನಿಗೆ ಏನೋ ಕೊಡುತ್ತಿದ್ದಂತೆಯೇ ನಾವೆಲ್ಲರೂ ಆತನ ಸ್ವಾಧೀನವಾದೆವು. ನಮ್ಮ ಹೊಸ ಯಜಮಾನ ನಮ್ಮನ್ನು ಕೋಲಿನಿಂದ ಹೊಡೆಯುತ್ತಾ, ನಮ್ಮನ್ನು ಒಂದು ಮನೆಗೆ ತೆಗೆದುಕೊಂಡು ಹೋದನು. ಆತನು ನಮ್ಮೆಲ್ಲರನ್ನು ಬಿಸಿಲಿನಲ್ಲಿ ನಿಂತುಕೊಳ್ಳುವಂತೆ ಮಾಡಿದರಿಂದ ಬಿಸಿ ಕಿರಣಗಳು ಮೂಲಕ ನಮಗೆ ಉಂಟಾದ ಆಯಾಸ, ಹಸಿವು ಹಾಗೂ ಬಾಯಾರಿಕೆಗಳು ಉಂಟಾದವು. ಇವೆಲ್ಲಕ್ಕೂ ಮೀರಿದ ಕೋಲಿನ ಭಯ ನಮ್ಮನ್ನು ಮರಣಕ್ಕೆ ಹತ್ತಿರವಾಗಿ ಸೆಳೆಯುತ್ತಿತ್ತು.

ಸುಧೀರ್ಘಕಾಲ ಕಾಯ್ದ ನಂತರ ನಮ್ಮನ್ನು ಒಂದು ಮನೆಯೊಳಗೆ ದೂಡಿದರು. ಅಲ್ಲಿ ಕುಳಿತ ಒಬ್ಬ ಮನುಷ್ಯ ಕಿವಿಗಳಿಗೆ ಇರಿಸಿಕೊಂಡಿದ್ದ ಒಂದು ಮೆದುಕೊಳವೆಯ ಮೂಲಕ ನನ್ನ ಸಹಚರರನ್ನು ಪರೀಕ್ಷಿಸಲು ಮುಂದಾದನು. ನನ್ನ ಸರದಿ ಬರುವವರೆಗೂ ನನ್ನ ಯಜಮಾನ ಆತನಿಗೇನೋ ಕೊಟ್ಟ ಕೂಡಲೇ ನಮ್ಮನ್ನು ಎಂತಹ ತನಿಖೆಗೆ ಒಳಪಡಿಸದೆ ಒಳಗಡೆ ಕಳುಹಿಸಿದನು. ನಾನು ಇದೇನು ಎಂದು ಅರ್ಥಮಾಡಿಕೊಳ್ಳಲಾರದೇ ಹೋದೆನು. ಆದರೆ ನನ್ನ ಸಹಚರರಲ್ಲಿ ಎಲ್ಲಕ್ಕಿಂತ ದೊಡ್ಡದಾದ ಒಂದು ಮೇಕೆ, ಆತನು ಒಬ್ಬ ವೈದ್ಯನೆಂದು ಇದರ ಅರ್ಥ ನಮಗೆ ಸಾವು ಹತ್ತಿರ ಬರುತ್ತಿದೆ ಎಂದು ತಿಳಿಸಿತು.

ಅಲ್ಲಿಗೆ ಹಸಿವು ಬಾಯಾರಿಕೆಗಳಿಂದ ಬಳಲಿ ಹೋಗುವುದರೊಂದಿಗೆ ಅರ್ಧ ಸತ್ತಂತೆ ಇದ್ದ ನನಗೆ ಇದು ಕೇಳಿದ ಕೂಡಲೇ,ತಿನ್ನಬೇಕೆಂಬ ಕೋರಿಕೆಯು ಮುರಿಯಿತು. ಆ ತಿಂಡಿಯನ್ನು ತಿನ್ನಲಾರದೆ ಹೋದೆನು, ನೀರು ಸಹ ನನ್ನ ಗಂಟಲಲ್ಲಿ ತಣ್ಣಗಾಗುವ

ಬದಲು ಹಿಂಸೆ ಉಂಟು ಮಾಡಿದ್ದು, ಆನಂತರ ಪಕ್ಕದಲ್ಲಿರುವ ಕೋಣೆ ಬಾಗಿಲು ತೆರೆದ ಕೂಡಲೇ ನಾನು ನೋಡಿದ ದೃಶ್ಯವು ಭಯದೊಂದಿಗೆ ನಡುಗುವಂತೆ ಮಾಡಿತು. ನನ್ನ ಕಾಲಿನ ಮೇಲೆ ನಾನು ನಿಲ್ಲುವ ಶಕ್ತಿ ಹೋಗಿ ನನ್ನ ಕಾಲುಗಳು ಸೋತು ಹೋದವು. ನನ್ನ ಸಹಚರರ ಕೂಗುಗಳು ಕಿರುಚಾಟಗಳು ಆ ಕೋಣೆಯಲ್ಲಿಂದ ಕೇಳಿಸಿದ ಕೂಡಲೇ ನನಗೆ ಕಣ್ಣೀರು ನಿಲ್ಲಲಿಲ್ಲ...

ನಾನು ಜೋರಾಗಿ ಕಿರುಚಬೇಕೆಂದು ಪ್ರಯತ್ನಿಸಿದೆನು ಆದರೆ ಗಂಟಲಿನಿಂದ ಧ್ವನಿ ಹೊರಬರಲಿಲ್ಲ. ಹೊರಗೆ ಓಡಿ ಹೋಗಲು ಪ್ರಯತ್ನಿಸಿದನು. ಆದರೆ ಒಬ್ಬಾತ ನನ್ನ ಹಿಂದಿನ ಎರಡೂ ಕಾಲುಗಳನ್ನು ಬಂಧಿಸಿದನು. ರಾಕ್ಷಸನಂತಹ ಭಯಾನಕ ವ್ಯಕ್ತಿ ದೊಡ್ಡ ಕತ್ತಿಯೊಂದಿಗೆ ನನ್ನ ಸಹಚರರಲ್ಲಿ ಒಬ್ಬರ ಕುತ್ತಿಗೆಯನ್ನು ಕಡಿಯುತ್ತಿರುವ ಕೋಣೆಯೊಳಗೆ, ನನ್ನನ್ನು ತಳ್ಳಿದನು. ಯಾದೃಚಿಕವಾಗಿ ನನ್ನ ಮನಸ್ಸಿನಲ್ಲಿ ಬಂದಿದ್ದು **"ಈತನು, ಋಷಿಗಳು, ಮುನಿಗಳು ಹಾಗೂ ಮಹನೀಯರ ವಾರಸುದಾರನೆಂದು ಹೇಳಿಕೊಳ್ಳುತ್ತಾ ಸಹಾನುಭೂತಿ ಅಹಿಂಸೆ ಯಂತಹ ಹಾಡುಗಳನ್ನು ಹಾಡುವ ಮನುಷ್ಯ ಒಬ್ಬರೇನೆ?"** ಎಂದು ಅನಿಸಿತು. ಅಲ್ಲ ಈಗ ಈತನು ಆ ಮನುಷ್ಯ ಅಲ್ಲ! ಏಕೆಂದರೆ ಮಾಂಸಹಾರಿಗಳಾದ ಕ್ರೂರ ಪ್ರಾಣಿಗಳು ಕೂಡಾ ಇಂತಹ ಮಾರಣಹೋಮವನ್ನು ಮಾಡಲು ಇಷ್ಟಪಡದ ಕೆಲಸಗಳನ್ನು ಇವನು ಮಾಡುತ್ತಿದ್ದಾನೆ. ಹಾಗೆ ನನ್ನ ಮನಸ್ಸಿನಲ್ಲಿ ಆಲೋಚನೆಗಳು ಕದಲುತ್ತಿರುವಾಗ ಒಬ್ಬ ನನ್ನ ಕಿವಿಗಳನ್ನು ಹಿಡಿದುಕೊಂಡು ಆ ಭಯಾನಕ ವ್ಯಕ್ತಿಯ ಕಡೆಗೆ ದೂಡಿದನು. ನೋವು ಈಗ ಕೋಪವೇಶವಾಗಿ ಬದಲಾಯಿತು. ಅಲ್ಲಿಂದ ಹೊರ ಬೀಳಲು ಪ್ರಯತ್ನಿಸುತ್ತ ನಾನು ಕಿರುಚುತ್ತಿದ್ದೇನೆ ಆದರೆ ಫಲಿತಾಂಶ ಶೂನ್ಯ ತಪ್ಪಿಸಿಕೊಳ್ಳಬೇಕೆನ್ನುವ ನನ್ನ ಪ್ರಯತ್ನ ಫಲಿಸದಿರುವುದರಿಂದ ನನ್ನ ರಕ್ತ ಕುದಿದು ನನ್ನ ಬಾಯಿಂದ ನೊರೆ ಬರಲು ಶುರುವಾಯಿತು. ನನ್ನ ಪ್ರಮೇಯವಿಲ್ಲದೆ ಮಲಮೂತ್ರಗಳನ್ನು ವಿಸರ್ಜಿಸಿದೆನು. ಆದರೂ ಯಾರು ನನ್ನ ನಿಸ್ಸಹಾಯ ಸ್ಥಿತಿಯನ್ನು ನೋಡಿ ಕರುಣೆ ತೋರಲಿಲ್ಲ. ಆದರೂ ಇನ್ನೂ ಇಬ್ಬರ ವ್ಯಕ್ತಿಗಳು ನನ್ನನ್ನು ಹಿಡಿದುಕೊಂಡು ಒಬ್ಬನು ನನ್ನ ಕಾಲು ಬಂಧಿಸಿ ಮತ್ತೊಬ್ಬರು ನನ್ನ ಕತ್ತನ್ನು ಕೊಯ್ಯಲು. ಶುರು ಮಾಡಿದನು ನನ್ನ ಕುತ್ತಿಗೆಯಿಂದ ರಕ್ತವು ಚಿಮ್ಮಿ ನನ್ನ ಶರೀರವೆಲ್ಲ ನೋವು ಆವರಿಸಿತು.

ತಕ್ಷಣ ಮರಣವನ್ನು ಕೋರಿಕೊಳ್ಳುವುದರ ಹೊರತು ಮತ್ತೊಂದು ದಾರಿಯು ಇರಲಿಲ್ಲ. ಅವರು ಸುಧೀರ್ಘಕಾಲ ನನ್ನ ಶರೀರವನ್ನು ಬಾಧೆಗೊಳಿಸದೆ ಒಂದೇ ಸಾರಿ ಸಾಯಿಸಬೇಕೆಂದು ಕೋರಿಕೊಂಡೆನು. ಆದರೆ ಅದು ನೆರವೇರಲಿಲ್ಲ. ಅದಾಗಲೇ ಕತ್ತಿಯು ನನ್ನ ಕತ್ತಿನಲ್ಲಿ ಅರ್ಧ ಮಾತ್ರವೇ ಇಳಿದಿತ್ತು. ಆದ್ದರಿಂದ ಅವರು ನನ್ನನ್ನು ಮತ್ತಷ್ಟು ಯಾತನೆಗೆ ಗುರಿ ಮಾಡಿದರು. ಸಾವು ಇನ್ನೂ ಸುಂದರ ತೀರದಲ್ಲಿದ್ದು ನರಕಯಾತನೆ ಅನುಭವಿಸುವ ಪ್ರತಿಕ್ಷಣವೂ ಒಂದು ಯುಗದಂತೆ ಕಳೆಯಲು ನನ್ನ ಸಾವು ಬೇಗ ಸಂಭವಿಸಬೇಕೆಂದು ಕೋರಿಕೊಳ್ಳುತ್ತಾ ಭಗವಂತನನ್ನು ಸ್ಮರಿಸುತ್ತಾ ಮರಣಕ್ಕಾಗಿ ಎದುರು ನೋಡುತ್ತಾ ಪ್ರಾರ್ಥಿಸಲು ಶುರು ಮಾಡಿದೆನು.

ನನ್ನ ಕಣ್ಣ ಮುಂದೆ ಕತ್ತಲಿನ ತೆರೆಗಳು ತೊಲಗಿ ಹೋಗುವುದು ಶುರುವಾಗಿದೆ ತಕ್ಷಣ ನಾನು ಪ್ರಜ್ಞಾಹೀನನಾದೆನು. ಬಹುಶಃ ಉಸಿರು ಕೂಡ ನಿಂತು ಹೋಯಿತು. ನೋಡುತ್ತಿದ್ದರೆ ನಾನು ಸತ್ತು ಹೋದಂತೆ ಇತ್ತು, ಮರಣ ಸಂದೇಶವನ್ನು ತಂದವರು ನನ್ನನ್ನು ಮೇಲೆ ತೆಗೆದುಕೊಂಡು ಹೋಗುತ್ತಿರುವಂತಿತ್ತು. ಆದರೆ ನಿಲ್ಲು! ಇದೇನು ನನ್ನ ಶರೀರ ಇನ್ನೂ ಪ್ರಾಣಿವಧೆ ಶಾಲೆಯಲ್ಲಿ ಬಿದ್ದಿದೆ ಇಬ್ಬರು ವ್ಯಕ್ತಿಗಳು ನನ್ನ ಚರ್ಮವನ್ನು ಅದರ ಹಿಂದೆ ಇರುವ ಮಾಂಸವನ್ನು ಕೊಬ್ಬಿನಿಂದ ಬೇರೆ ಮಾಡುತ್ತಿದ್ದರು. ಅವರು ಚರ್ಮವನ್ನು ಮತ್ತೊಂದು ಕಡೆ ಎಸೆದರು. ಸ್ವಲ್ಪ ಹೊತ್ತಿನ ನಂತರ ಒಬ್ಬ ವ್ಯಕ್ತಿ ನನ್ನ ಮಾಂಸವನ್ನು ಖರೀದಿಸಿ ಒಂದು ಹೋಟೆಲ್ನಲ್ಲಿ ಅಡಿಗೆ ಕೋಣೆಯೊಳಗೆ ತೆಗೆದುಕೊಂಡು ಹೋದನು. ಅಲ್ಲಿ ಮತ್ತೊಬ್ಬ ವ್ಯಕ್ತಿ ನನ್ನ ಮಾಂಸವನ್ನು ಚಿಕ್ಕ ಚಿಕ್ಕ ತುಂಡುಗಳನ್ನಾಗಿ ಮಾಡಿದನು ಬಹುಷಃ ಈ ಹಿಂಸೆ ಕೃತ್ಯಗಳೆಲ್ಲ ದೇವರಂತಹ ಈ ಮನುಷ್ಯನಿಗೆ ತುಂಬಾ ಅಲ್ಪವಾದಂತೆ ಕಾಣಿಸುವುದೇನೋ... ಏಕೆಂದರೆ ಗಾಯಗಳ ಮೇಲೆ ಉಪ್ಪು ಬಳಿಯುವುದು ಈತನ ವಂಶ ಪಾರಂಪರ್ಯ ಅಭ್ಯಾಸ ಇರಬಹುದು. ಹಾಗಾಗಿ ಅದನ್ನು ಇನ್ನೂ ಮುಂದುವರೆಸುತ್ತಿದ್ದನು.

ನನ್ನ ಮಾಂಸವನ್ನು ಮುದ್ದೆಯಂತೆ ಬದಲಾಯಿಸಿದ ನಂತರ ಆತನು ಉಪ್ಪು ಖಾರವನ್ನು ಸೇರಿಸುವುದೇ ಅಲ್ಲದೆ, ಬೆಂಕಿಯ ಮೇಲೆ ನನ್ನನ್ನು ಬೇಯಿಸಿದನು. ಪರ್ಯಾವಸನವಾಗಿ ಆತ ಒಂದು ಆಟವಿಕ ಪ್ರವೃತ್ತಿ ಹೊರಬಂದಿತು. ಮತ್ತೊಬ್ಬ ವ್ಯಕ್ತಿ ನನ್ನ ಮಾಂಸವನ್ನು ಒಂದು ಪ್ಲೇಟ್ ನಲ್ಲಿ ಇರಿಸಿ ಅಡುಗೆ ಕೋಣೆಯಿಂದ ಅಂದವಾಗಿ ಅಲಂಕರಿಸಲ್ಪಟ್ಟ ಒಂದು ದೊಡ್ಡ ಕೋಣೆಯಲ್ಲಿ ಸುಖ ಸೀನರಾದ ಒಂದು ಯುವ

ಜೋಡಿ ಕಡೆಗೆ ತೆಗೆದುಕೊಂಡು ಹೋದನು ನಾನು ಆನಂತರ ಏನು ನಡೆಯುವುದು ಎಂದು ಆಶ್ಚರ್ಯಗೊಳ್ಳುತ್ತಾ ಇದ್ದೆನು ತಮ್ಮ ಮುಂದೆ ಪ್ಲೇಟುಗಳನ್ನು ಇರಿಸಿದ ಮರುಕ್ಷಣ ಆ ಜೋಡಿಯಲ್ಲಿನ ಪುರುಷನು ಎಷ್ಟೋ ಪ್ರಿಯವಾಗಿ ನನ್ನ ಮಾಂಸವನ್ನು ತಿನ್ನಲು ಆರಂಭಿಸಿದನು. ಆದರೆ ಆತನಿಗೆ ಎದುರಾಗಿ ಕುಳಿತ ಸ್ತ್ರೀಗೆ ಮಾಂಸ ತಿನ್ನುವುದು ಇಷ್ಟವಿಲ್ಲದಂತೆ ಇತ್ತು ಆದರೆ ತನ್ನ ಗಂಡನಿಗೆ ಕೇವಲ ಜೊತೆಯಾಗಿ ಕುಳಿತಿದ್ದಂತೆ ಅನಿಸಿತು.

ಈಗ ನಾನು ಯಮಧರ್ಮರಾಜನ ಆಸ್ಥಾನದಲ್ಲಿ ವರಸೆಯಾಗಿ ನಿಂತಿರುವ ಎಷ್ಟೋ ಆತ್ಮಗಳೊಂದಿಗೆ ಸೇರಿದೆನು. ಪ್ರತಿಯೊಬ್ಬರ ಪಾಪ ಪುಣ್ಯಗಳ ಕೃತ್ಯಗಳನ್ನು ವಿವರಿಸುತ್ತಿರುವ ಚಿತ್ರಗುಪ್ತನು ನನ್ನ ದೃಷ್ಟಿಯನ್ನು ಆಕರ್ಷಿಸಿದನು. ನನ್ನ ಸರದಿ ಬಂದಾಗಲೇ ನಾನು ನನ್ನ ಗತ ಜನ್ಮದಲ್ಲಿ ಮೇಕೆ ಮಾಂಸದಿಂದ ಭೋಜನ ಕೂಟವನ್ನು ಏರ್ಪಡಿಸಿದ್ದಾಗಿ ಚಿತ್ರಗುಪ್ತ ಹೇಳಿದನು. ತತ್ಫಲಿತವಾಗಿಯೇ ನಾನು ಮೇಕೆಯಾಗಿ ಜನಿಸಿ ನನ್ನ ಮಾಂಸವನ್ನು ಇತರರಿಗೆ ಕೊಡಬೇಕಾಗಿ ಬಂದಿತು..

ನಾನು ನೋಡಿದ ಭೋಜನ ಶಾಲೆಯಲ್ಲಿ ನನ್ನ ಮಾಂಸವನ್ನು ತಿನ್ನುತ್ತಿದ್ದ ವ್ಯಕ್ತಿಗಳು ಗತ ಜನ್ಮದಲ್ಲಿ ನಾನೇ ಎಷ್ಟೋ ಪ್ರೇಮಿಸಿದ ನನ್ನ ಜೀವನ ಸರ್ವಸ್ವವನ್ನು ಧಾರೆಯೆರದ ನನ್ನ ಸಂತಾನವೇ ಎಂದು ಆತ ತಿಳಿಸಿದನು. ಈಗ ನಿನ್ನ ಮಾಂಸವನ್ನು ತಿನ್ನುತ್ತಿರುವರು ಮರುಜನ್ಮದಲ್ಲಿ ಇಂತಹ ಶಿಕ್ಷೆಯನ್ನೇ ಅನುಭವಿಸುತ್ತಾರೆ ಎಂದು ಹೇಳಿದ ಕೂಡಲೇ, ನನ್ನ ಆತ್ಮ ರೋಧಿಸಿತು. ನಾನು ಅನುಭವಿಸಿದ ನರಕಯಾತನೆ ಯಾರಾದರೂ ಅನುಭವಿಸಬೇಕೆಂದು ನಾನು ಹೇಗೆ ಬಯಸಬಲ್ಲೆ!? ಆದ್ದರಿಂದ ಅವರನ್ನು ಕ್ಷಮಿಸು, ನಾನು ಕೂಡ ಅವರನ್ನು ಕ್ಷಮಿಸಿದ್ದೇನೆ ಆದ್ದರಿಂದ ನನಗೆ ಅವರ ಮೇಲೆ ಎಂತಹ ಪ್ರತೀಕಾರ ಆಕಾಂಕ್ಷೆ ಇಲ್ಲ ಎಂದು ಯಮರಾಜನನ್ನು ಬೇಡಿದೆನು. ಆತ ನನ್ನನ್ನು ಕರುಣೆಯಿಂದ ನೋಡಿ ಒಂದು ಮೇಕೆಯಾಗಿ ನೀನು ಕೇವಲ ಎಲೆಗಳನ್ನು ಹಸಿರುಗಳನ್ನೇ ತಿಂದೆ ಅಷ್ಟೇ ಅಲ್ಲ ಯಾರಿಗೂ ಅಪಕಾರ ಮಾಡಲಿಲ್ಲ ಮೇಲಾಗಿ ನಿನ್ನನ್ನು ಹಿಂಸಿಸಿದ ಎಲ್ಲರನ್ನು ಕ್ಷಮಿಸಿದೆ. ಆದ್ದರಿಂದ ಮರುಜನ್ಮದಲ್ಲಿ ನೀನು ಮಾನವನಾಗಿ ಹುಟ್ಟುವೆ. ಎಂದು ದಯೆಯೊಂದಿಗೆ ಆಶೀರ್ವದಿಸಿದರು.ಆ ವಿಧವಾಗಿ ಮಾನವ ಜೀವನವನ್ನು ಹೊಂದಲು ನನ್ನ ಆತ್ಮವನ್ನು ಭೂಮಿಗೆ ಕಳುಹಿಸಿದರು.

ನಂತರದ ಜನ್ಮಕ್ಕೆ ಬಂದ ಕೂಡಲೇ, ಈಗ ನಾನು ಎಷ್ಟೋ ಮಾನವತ್ವದಿಂದ ಹಾಗೂ ಸತ್ಯ–ಅಹಿಂಸಾ ಧರ್ಮಗಳೊಂದಿಗೆ ಪ್ರವರ್ತಿಸಬೇಕೆಂದು ಪ್ರತಿಜ್ಞೆ ಮಾಡಿದೆನು. ಪಕ್ಷಿಗಳು ಹಾಗೂ ಪ್ರಾಣಿಗಳನ್ನು ಸಾಯಿಸದೆ ಮಾಂಸಾಹಾರ ತಿನ್ನುವುದನ್ನು ಮಾಡಬಾರದು ಯಾವ ಜೀವಿಯನ್ನು ಕೊಲ್ಲಬಾರದು ಅವುಗಳಿಗೆ ಎಂತಹ ಹಾನಿಯನ್ನು ಉಂಟುಮಾಡಬಾರದೆಂದು ಪ್ರತಿ ಜೀವಿಯನ್ನು ರಕ್ಷಿಸಬೇಕು ಎಂದುಕೊಂಡೆನು. ಈ ಚಿಂತೆಯಲ್ಲಿ ನಾನು ಹೊಸ ತಾಯಿಯ ಗರ್ಭಾಶಯದಲ್ಲಿ ಪ್ರವೇಶಿಸಿದನು. ಹಾಗೆಯೇ ಮಾನವತ್ವವಿರುವ ಮಾನವನ ಹಾಗೇ ನನ್ನ ಹೊಸ ಜೀವನ ಆರಂಭವಾಯಿತು.

ಒಂದು ಮೇಕೆ ಕಥೆ ಓದಿದ ನಂತರವಾದರೂ ಕ್ರೂರವಾದ ಮಾಂಸ ಭಕ್ಷಣೆಯನ್ನು ಬಿಡಿ. ಕೆಲವು ಜನ್ಮಗಳು ನರಕವನ್ನು ಅನುಭವಿಸಿ ತಿಳಿದುಕೊಳ್ಳುವ ಸತ್ಯವನ್ನು ಈಗಲೇ ತಿಳಿದುಕೊಳ್ಳಿ. ಜೀವಹಿಂಸೆ ಮಾಡಬೇಡಿ. ಮಾಂಸಾಹಾರ ತಿನ್ನದಿರಿ. ನಮ್ಮ ಸಹೋದರರಾದ ಪ್ರಾಣಿಗಳನ್ನು ಪ್ರೀತಿಸಿ. ಅವುಗಳ ಮೇಲೆ ದಯೆ ತೋರಿಸಿ.

ಪ್ರಾಣಿಗಳಿಗೆ, ವೃಕ್ಷಗಳಿಗೆ ತುಂಬಾ ವ್ಯತ್ಯಾಸ ಇದೆಯೆಂದು ತಿಳಿದುಕೊಳ್ಳಿ. ವೃಕ್ಷಗಳ ಕೊಂಬೆಗಳು ಹಾಗೂ ಎಲೆಗಳು ಬೇರ್ಪಟ್ಟರೆ, ಕತ್ತರಿಸಿದರೆ ಮತ್ತೆ ಬೆಳೆಯುತ್ತದೆ ಎಲೆಗಳು ಚಿಗುರುತ್ತದೆ. ಕೆಲವು ಗಿಡಗಳು ಆಗಾಗ ಕೊಂಬೆಗಳನ್ನು ರೆಂಬೆಗಳನ್ನು ಕತ್ತರಿಸುವುದರಿಂದಲೇ ಬೆಳೆಯುತ್ತವೆ. ಕತ್ತರಿಸಿದ ಗಿಡಗಳು ಮತ್ತೆ ನಾಟಬಹುದು. ಆದರೆ ಈ ಸೌಲಭ್ಯ ಪ್ರಾಣಿಗಳಲ್ಲಿ ಅಸಾಧ್ಯ.. ಪ್ರಾಣಿಗಳ ಯಾವ ಅಂಗಾಂಗ ಕತ್ತರಿಸಿದರು ಅವು ಬೆಳೆಯುವುದಿಲ್ಲ. ಮನುಷ್ಯ ಗಿಡಗಳಂತೆ, ಪ್ರಾಣಿಗಳನ್ನು ಭೂಮಿಯಿಂದ ಬೆಳೆಯಲು ಸಾಧ್ಯವಿಲ್ಲ.

ಮಾಂಸ ತಿಂದು ಸಾವಿರಾರು ಟನ್ನುಗಳ ಭಾರವನ್ನು ಹೊರುವುದಕ್ಕಿಂತ, ಶಾಕಾಹಾರ ತಿಂದು ಕೆಲವು ಗ್ರಾಂಗಳ ಪಾಪ ಭಾರವನ್ನು ಹೊರುವುದು ಉತ್ತಮ. ಆದ್ದರಿಂದ ಶಾಕಾಹಾರ ಶ್ರೇಷ್ಠವೆಂದು ಮಾಂಸಾಹಾರ ಪಾಪಾಹಾರ ಎಂದು ತಿಳಿದುಕೊಳ್ಳಿ. "ಮಾಂಸಾಹಾರ ಬಿಡಿ ಧ್ಯಾನ ಮಾಡಿ"

(ಸಸ್ಯಾಹಾರವೇ? ಅಥವಾ ಮಾಂಸಾಹಾರವೇ? ಎನ್ನುವ ಪುಸ್ತಕದಿಂದ)

**ನಾವು ಮಾನವರು ದಯೆ ತೋರುವುದೇ ನಮ್ಮ ಧರ್ಮ**

# ಭೂತದಯೆ ಕುರಿತು ವಿವಿಧ ಮತ ಧರ್ಮಗಳ ಹೇಳಿಕೆ

## ಹಿಂದೂ ಮತ

### ಭೂತ ದಯೆಯ ಕುರಿತು ಭಗವದ್ಗೀತೆಯಲ್ಲಿರುವ ವಿವರಣೆ



ಭೂತ ದಯೆ ಕುರಿತು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಭಗವಾನನು ಅನೇಕ ಸಂಧರ್ಭಗಳಲ್ಲಿ ಹೇಳಿರುವುದೇನೆಂದರೆ, ಜೀವಿಗಳನ್ನು ಏಕೆ ಹಿಂಸಿಸಬಾರದು? ಪ್ರಾಣಿಗಳನ್ನು ಹಿಂಸಿಸುವುದರಿಂದ ಉಂಟಾಗುವ ನಷ್ಟಗಳು, ಅವುಗಳ ಪರಿಣಾಮಗಳನ್ನು ಚೆನ್ನಾಗಿ ವಿವರಿಸಿದ್ದಾರೆ.

ಮಾನವರು ಕಷ್ಟಗಳಿಂದ ಹೊರಬರಬೇಕೆಂದರೆ, ಅಂದರೆ ಮುಕ್ತಿ ಹೊಂದಬೇಕೆಂದರೆ, ಸಮಸ್ಯೆಗಳಿಂದ, ರೋಗಗಳಿಂದ, ಬಾಧೆಗಳಿಂದ, ಅಶಾಂತಿಯಿಂದ, ಕುಟುಂಬ ಸಮಸ್ಯೆಗಳಿಂದ, ಆರ್ಥಿಕ ಸಮಸ್ಯೆಗಳಿಂದ ಮುಕ್ತಿ ಲಭಿಸಬೇಕೆಂದರೆ, ಪೂಜೆಗಳು, ವ್ರತಗಳು, ಭಜನೆಗಳು, ಜಪಗಳನ್ನು ಮಾಡಿದರೆ ಸರಿಹೋಗುವುದಿಲ್ಲ ಅದಕ್ಕಿಂತ ಅಂದರೆ ಪ್ರಾಣಿಗಳಿಗೆ ದಯೆತೋರಬೇಕು, ಒಳಿತು ಮಾಡುವುದರಲ್ಲಿ ಆಸಕ್ತಿ ಹೊಂದಿರಬೇಕು. ಅವುಗಳ ಮೇಲೆ ಕರುಣೆ ತೋರಿಸಬೇಕು. ಜೀವಿಗಳ ಮೇಲೆ ಕಾಠಿಣ್ಯತೆ ಪ್ರದರ್ಶಿಸದೆ ಅವುಗಳೊಂದಿಗೆ ಸ್ನೇಹವನ್ನು ಮಾಡಬೇಕು. ಅಂದರೆ ಎಲ್ಲವನ್ನೂ ಸಮಭಾವದೊಂದಿಗೆ ನೋಡಬೇಕು. ಅವುಗಳಲ್ಲಿ ದೇವರನ್ನು ಕಾಣಬೇಕು ಅಂದರೆ ಅವರ ನೋವುಗಳನ್ನು, ಸುಖ–ದುಃಖಗಳನ್ನು ತನ್ನ ಸುಖ ದುಃಖಗಳಂತೆ ಭಾವಿಸಬೇಕು ಇದಕ್ಕೆ ಪ್ರಾಣಿಗಳನ್ನು ಬಾಧಿಸಬಾರದು.

ಹಿಂಸೆಗೆ ಮೂಲ ಕಾರಣವಾದ ಮಾಂಸ ಭಕ್ಷಣೆಯನ್ನು ಬಿಡಬೇಕು ಇವು ಆಚರಿಸಿದಾಗಲೇ ಕಷ್ಟಗಳಿಂದ ಮುಕ್ತಿ ಹೊಂದಬಲ್ಲರು. ಅಷ್ಟೇ ಹೊರತು ಹಿಂಸೆ ಮಾಡಿದವರು ಎಷ್ಟು ಆರಾಧನೆಗಳನ್ನು ಮಾಡಿದರು ವ್ಯರ್ಥ ವೆಂದು ಭಗವದ್ಗೀತೆಯ ಅನುಸಾರ ನಾವು ಗ್ರಹಿಸಬಹುದು.

ಆದ್ದರಿಂದ "**ಗೀತ ಎಂದು ಪಾರಾಯಣ ಮಾಡುವುದಲ್ಲ ಭಗವಂತನು ಹೇಳಿದ್ದನ್ನು ಅನುಸರಿಸಬೇಕು, ಆತನನ್ನು ಆರಾಧಿಸಬಾರದು, ಆತ ಹೇಳಿದ್ದು ಆಚರಿಸಬೇಕು**" ಇದು ಪ್ರತಿಯೊಬ್ಬರೂ ಗ್ರಹಿಸಬೇಕಾದ ವಿಷಯ ಕಾರಣ ಜೀವಿಗಳಲ್ಲಿ ಇರುವುದು ಭಗವಂತನೇ, ಅಂದರೆ ನಾವು ಯಾರನ್ನು ಆರಾಧಿಸುತ್ತೇವೆಯೋ ಆತನೇ ಜೀವಿಗಳಲ್ಲಿ ಇದ್ದಾನೆ.

ಆದ್ದರಿಂದ ಜೀವ ಹಿಂಸೆ ಮಾಡುವವರು ಮಾಂಸ ಭಕ್ಷಣೆ ಮಾಡುತ್ತಾ ಹಿಂಸೆಗೆ ಕಾರಣವಾದವರು ಶೋಡಷೋಪಚಾರ ಪೂಜೆಗಳು ಮಾಡಿದರು ಭಗವಂತನನ್ನು ಆನಂದ ಪಡಿಸಲಾರರು ; ಕಾರಣ **"ಸಮಸ್ತ ಪ್ರಾಣಿಗಳು ಆತನ ರೂಪಗಳೇ!" ಎಲ್ಲದರಲ್ಲೂ ಇರುವವನು ಅವನೇ!"** ಆದ್ದರಿಂದ ಎಲ್ಲಾ ಒಂದೇ ಎಂದು ತಿಳಿದುಕೊಳ್ಳಬೇಕು.

ಭಗವದ್ಗೀತೆಯನ್ನು ಬೋಧಿಸುವ ಹಿರಿಯರು ಗುರುಗಳು ಪಂಡಿತರು ಹಿಂಸೆಯ ಕುರಿತು ಪ್ರಸ್ತಾಪಿಸದೆ ಇರುವುದರಿಂದ ಸಾಮಾನ್ಯರು, ಪಾಮರರು ಮಾಂಸ ಭಕ್ಷಣೆ ತಪ್ಪಲ್ಲ ಎಂದು ಭಾವಿಸಿದ್ದಾರೆ. ಪಾಪವಲ್ಲ ಎಂದುಕೊಳ್ಳುತ್ತಿದ್ದಾರೆ. ತಲಾಂತರಗಳಿಂದ ಆಚಾರವಾಗಿ ಬರುತ್ತಿದೆ, ಎಂದು ಮಾಂಸ ತಿಂದರೆ ಬಲ ಬರುವುದು, ರುಚಿಯಾಗಿರುವುದು ಎಂಬ ತಪ್ಪು ಕಲ್ಪನೆಗಳಿಂದ ತಾವು ತಿನ್ನುವುದಲ್ಲದೆ ಚಿಕ್ಕಂದಿನಿಂದಲೂ ಮಕ್ಕಳಿಗೆ ಕೂಡ ತಿನ್ನಲು ಪ್ರೋತ್ಸಾಹಿಸುತ್ತಿದ್ದಾರೆ ಬಲವಂತ ಮಾಡುತ್ತಿದ್ದಾರೆ. ತಿನ್ನದಿದ್ದರೆ ಒತ್ತಡ ಹೇರುತ್ತಿದ್ದಾರೆ. ಇದಕ್ಕಿಂತ ಅವರು ಏನನ್ನು ಆಲೋಚಿಸುತ್ತಿಲ್ಲ.

ಮಾಂಸ ಎಂದರೆ ಸತ್ತು ಹೋದ ಪ್ರಾಣಿಗಳ ಮೃತ ಆಹಾರವೆಂದು ರಕ್ತದ ಕೂಳು ಎಂದು ಆಲೋಚಿಸುತ್ತಿಲ್ಲ ರಕ್ತ ಮಾಂಸಗಳು ಮಾನವನ ಅಹಾರ ಅಲ್ಲ ಎಂದು ಜೀವಿಗಳನ್ನು ಸಾಯಿಸೋದು ಪಾಪವೆಂದು ತಿಳಿದುಕೊಳ್ಳಲಾರದೆ ಇದ್ದಾರೆ. ಅಮಾಯಕ ಜೀವಿಗಳೆಂದು, ಅವು ಕನಿಷ್ಠ ತಮ್ಮ ನೋವನ್ನು ಕಷ್ಟವನ್ನು ಕೂಡ ಕೇಳಿಕೊಳ್ಳಲಾರದ ಸ್ಥಿತಿಯಲ್ಲಿ ಇವೆ ಎಂದು ಮಾನವರು ಆಲೋಚಿಸುತ್ತಿಲ್ಲ. ಅಷ್ಟೇ ಅಲ್ಲ ತಾವು ಮಾನವರು ಮಾನವತ್ವವೇ ತಮ್ಮ ಸಹಜ ಲಕ್ಷಣವೆಂದು ಕ್ರೂರತ್ವ ರಾಕ್ಷಸತ್ವವು ತಮ್ಮ ಲಕ್ಷಣವಲ್ಲ ಎಂದು ಗ್ರಹಿಸುತ್ತಿಲ್ಲ ಸೃಷ್ಟಿಯಲ್ಲಿನ ಸಮಸ್ತ ಜೀವಿಗಳು ಅಂದರೆ ಮಾನವನೊಂದಿಗೆ ಭಗವಂತನ ಸೃಷ್ಟಿಯಲ್ಲಿ ಇರುವವುಗಳೇ ಎಂದು, ಎಲ್ಲರೂ ಆತನ ರೂಪಗಳು ಎಲ್ಲವೂ ಆತನು ಶಕ್ತಿಯೇ ಆತನ ಮಕ್ಕಳೆಂದು ಗ್ರಹಿಸಲಾರದೇ ಹೋಗುತ್ತಿದ್ದಾರೆ.

ಆದ್ದರಿಂದ ಆಲೋಚಿಸಬೇಕು **"ಭಗವಂತನನ್ನು ಪೂಜಿಸುವುದಲ್ಲ ಭಗವಂತನು ಬೋಧಿಸಿದ್ದನ್ನು ಆಚರಿಸಬೇಕು"**

ಭಗವದ್ಗೀತೆಯಲ್ಲಿ ಜೀವ ಹಿಂಸೆಯ ಕುರಿತು ಏನು ಹೇಳಿಲ್ಲ ಎಂದು ಕೊಳ್ಳ ದಿರಿ ಖಚಿತವಾಗಿ ಹಿಂಸೆ ಮಾಡಬಾರದೆಂದು ಹೇಳಲಾಗಿದೆ. **"ಅಹಿಂಸೆಯೇ ಎಲ್ಲಕ್ಕಿಂತ ದೊಡ್ಡ ಧರ್ಮ ಎಂದು ಹೇಳಲಾಗಿದೆ"** ಆದ್ದರಿಂದ **"ಜೀವ ಹಿಂಸೆ ಮಾಡದಿರಿ ಮಾಂಸ ಭಕ್ಷಣೆ ಬಿಡಿ ಭಗವದ್ಗೀತೆಯಲ್ಲಿ ಭಗವಾನನು ಭೂತದಯೆ ಕುರಿತು ಹೇಳಿದ ವಿಷಯಗಳನ್ನು ನೋಡೋಣ ":-**

ಈ ಕೆಳಗಿನ ಶ್ಲೋಕಗಳ ಮೂಲಕ ಎಲ್ಲಾ ಜೀವಗಳಲ್ಲಿ ಇರುವುದು ತಾನೇ ಎಂದು ಸ್ಪಷ್ಟವಾಗಿ ಹೇಳಲಾಗಿದೆ.

**ಶ್ಲೋಕ॥ "ಅಹಮಾತ್ಮ ಗುಡಾಕೇಶ ಸರ್ವಭೂತಾಶಯ ಸ್ಥಿತಃ**
**ಅಹಮಾಧಿಶ್ಚ ಮಧ್ಯಂಚ ಭೂತನಾಮಂತ ಏವಚ". (ಭ. ಗೀ 10–20)**

ತಾ :– ಅರ್ಜುನ ಸರ್ವಪ್ರಾಣಿಗಳಲ್ಲಿ ಸ್ಥಿತವಾಗಿರುವ ಆತ್ಮ ಜ್ಞಾನಿ ಆಗಿದ್ದೇನೆ ಹಾಗೂ ಪ್ರಾಣಿಗಳ ಆದಿ ಮದ್ಯಾಂತಗಳು ನಾನೆ ಆಗಿರುವೆನು.


ಮೇಲಿನ ಶ್ಲೋಕ ಅರ್ಥದ ಮೂಲಕ ಸಮಸ್ತ ಜೀವಿಗಳು ಭಗವಂತನ ಸ್ವರೂಪಗಳೆಂದು ತಿಳಿದುಕೊಳ್ಳಬೇಕು. ಆದರಿಂದ ಯಾವುದನ್ನು ಹಿಂಸಿಸಿದರು ಭಗವಂತನನ್ನು ಹಿಂಸಿಸಿದಂತೆ ಇದೇ ವಿಷಯವನ್ನು ಈ ಕೆಳಗಿನ ಶ್ಲೋಕದಲ್ಲಿ ಕೂಡ ಹೇಳಲಾಗಿದೆ

**ಶ್ಲೋಕ॥ ಆತ್ಮೌಪಮ್ಯಯೇನ ಸರ್ವತ್ರ ಸಮಮ್ ಪಶ್ಯತಿಯೋರ್ಜುನ**
**ಸುಖಂ ವಾ ಯದಿ ವಾ ದುಃಖ ಸ ಯೋಗಿ ಪರಮೋ ಮತಃ (ಭ. ಗೀ. 6–32)**

ತಾ :– ಓ ಅರ್ಜುನ ಯಾರು ಸಮಸ್ತ ಪ್ರಾಣಿಗಳ ಸುಖವನ್ನಾಗಲಿ ದುಃಖವನ್ನಾಗಲಿ ತನ್ನ ಸುಖ ದುಃಖಗಳಾಗಿ ನೋಡುವನು ಅವನೇ ಎಲ್ಲರಿಗಿಂತ ನನಗೆ ಪ್ರಿಯನು.

ಈ ಶ್ಲೋಕದ ಮೂಲಕ ತನ್ನ ಶರೀರಕ್ಕೆ ಉಂಟಾದ ಬಾಧೆ ತನಗೆ ಎಷ್ಟು ಕಷ್ಟವಾಗಿರುವುದು ಹಾಗೆಯೇ ಸಮಸ್ತ ಪ್ರಾಣಿಗಳ ಬಾಧೆಯು ಕೂಡ ಅವುಗಳಿಗೆ ಅಷ್ಟು ಕಷ್ಟವಾಗಿ ಇರುತ್ತದೆ ಎಂದು ತಿಳಿದುಕೊಳ್ಳಬೇಕು ಅಂದರೆ ಭಗವಂತನಿಗೆ ಇಷ್ಟರಾಗಬೇಕೆಂದರೆ ಷೋಡಶೋಪಚಾರ ಪೂಜೆಗಳು ಮಾಡಿದರೆ ಲಾಭವಿಲ್ಲ ಜೀವ ಹಿಂಸೆ, ಮಾಂಸ ಭಕ್ಷಣೆ ಮಾಡಬಾರದೆಂದು ಭೂತದಯೇ ಹೊಂದಿರಬೇಕೆಂದು ತಿಳಿದುಕೊಳ್ಳಬೇಕು.

**ನಮ್ಮನ್ನು ತಿನ್ನಬೇಡಿ! ಪ್ರೇಮ ಮಾಡಿ**



**ಭಗವಂತನಿಗೆ ಎಲ್ಲಾ ಪ್ರಾಣಗಳು ಅಮೂಲ್ಯವೇ**

ಎಲ್ಲವೂ ಎಲ್ಲವೂ ಭಗವಂತನೇ ಎಂದು ಗ್ರಹಿಸದೆ ಜೀವ ಹಿಂಸೆ ಮಾಡುವವರಿಗೆ ಎಂತಹ ಗತಿ ಬರುತ್ತದೆ ಶ್ರೀ ಕೃಷ್ಣ ಭಗವಾನ್ ಈ ಕೆಳಗಿನ ಶ್ಲೋಕದ ಮೂಲಕ ವಿವರಿಸಿದ್ದಾನೆ.

**ಶ್ಲೋಕ॥ ತಾನಹಮ್ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್**

**ಕ್ಷಿಪಾಮ್ಯಜಸ್ರ ಮಶುಭಾ ನಾಸುರಿಷ್ವೇವ ಯೋನಿಷು (ಭ. ಗೀ.16–19 )**

ತಾ :–ಆ ಪ್ರಕಾರವಾಗಿ ಸಮಸ್ತ ಪ್ರಾಣಿಗಳಲ್ಲಿ ಆತ್ಮ ಸ್ವರೂಪನಾದ ನನ್ನನ್ನು ಹಿಂಸಿಸುವ ಕ್ರೂರವಾದ, ದುಷ್ಟರನ್ನು ಜನನ ಮರಣಗಳೊಂದಿಗೆ ಇರುವ ದುಃಖಕರವಾದ ಘೋರ ಸಂಸಾರದಲ್ಲಿ ಮಾತು ಮಾತಿಗೂ ಬೀಳಿಸಿ ಅವರನ್ನು ಬಹು ದುಃಖಕರವಾದ ಅಸುರ ಯೋನಿಗಳಲ್ಲಿ ಹುಟ್ಟಿಸುವೆನು.

**ಶ್ಲೋಕ ॥ ಅಸುರಿಂ ಯೋನಿ ಮೊಪನ್ನಾ ಮೂಢ ಜನ್ಮನಿ ಜನ್ಮನಿ।**

**ಮಾ ಮಪ್ರಾಪ್ಯೈವ ಕೌಂತೇಯ ತತೋ ಯೊಂತ್ಯಧಮಾಂ ಗತಿಮ್ ॥(16–20)**

ತಾ :–ಓ ಅರ್ಜುನ!ಅಸುರ ಯೋನಿಗಳಲ್ಲಿ ಜನಿಸಿದ ಪ್ರಾಣಿಹಿಂಸಕರಾದ ಮೂಢರು ಪ್ರತಿ ಜನ್ಮದಲ್ಲಿ ನನ್ನನ್ನು ಹೊಂದುವ ಮಾರ್ಗ ತಿಳಿಯದೆ ಇನ್ನೂ ಅಧೋಗತಿಗೆ ಇಳಿದು. ಬಹುಕಾಲ ದುಃಖ ಭೂಯಿಷ್ಟವಾದ ಘೋರ ನರಕವನ್ನು ಹೊಂದುತ್ತಾರೆ.

ಈ ವಿಧವಾಗಿ ಮೇಲಿನ ಶ್ಲೋಕಗಳ ಮೂಲಕ ಸಾಕ್ಷಾತ್ ಶ್ರಿ ಕೃಷ್ಣ ಪರಮಾತ್ಮ ಗೀತೆಯಲ್ಲಿ "ಜೀವಹಿಂಸೆ ಮಾಂಸ ಭಕ್ಷಣೆ"ಯಿಂದ ಬರುವ ನಷ್ಟಗಳ ಕುರಿತು ತಿಳಿಸಿದ್ದಾರೆ. ಅಷ್ಟೇ ಅಲ್ಲ ಜೀವಹಿಂಸೆ ಮಾಡುವವರು ಭಗವಂತನನ್ನು ಹೊಂದಲಾರರು ದೇವರು ಎಂದರೆ ಯಾರು ಎಂದು ತಿಳಿಯಲಾರರು ಎಂದು ಭಗವಂತನನ್ನು ಹೊಂದಬಲ್ಲ ಮಾರ್ಗವನ್ನು ತಿಳಿದುಕೊಳ್ಳಲಾರರು ಎಂದು ಹಾಗೆಯೇ ಎಷ್ಟೋ ಜನ್ಮಗಳು ದುಃಖದಲ್ಲಿ ಜೀವಿಸುತ್ತಾರೆ ಎಂದು ದೇವರು ಹೇಳಿದ್ದಾರೆ.

ಆದ್ದರಿಂದ ಪ್ರಾಣಿವಧೆ, ಪ್ರಾಣಿ ಬಲಿಗಳನ್ನು ಬಿಡಬೇಕು ಆತ ಎಲ್ಲಾ ಪ್ರಾಣಿಗಳನ್ನು ಪ್ರೇಮಿಸುವವರು ತನಗೆ ಇಷ್ಟವೆಂದು ಈ ಕೆಳಗಿನ ಶ್ಲೋಕದಲ್ಲಿ ಹೇಳಿದ್ದಾನೆ.

**ಶ್ಲೋಕ ॥ ಅದ್ವೇಷ್ಟಾ ಸರ್ವಭೂತಾನಾಮ್ ಮೈತ್ರಹ: ಕರುಣ ಏವಚ**

**ನಿರ್ಮಮೋ ನಿರಹಂಕಾರ: ಸಮದುಃಖಸುಖ: ಕ್ಷಮಿ (ಭ ಗೀ 12–13)**

ತಾ :– ಸಮಸ್ತ ಪ್ರಾಣಿಗಳ ಮೇಲೆ ದ್ವೇಷವಿಲ್ಲದವನು, ಮೈತ್ರಿ ಕರುಣೆಯುಳ್ಳವನು, ಅಹಂಕಾರ ಮಮಕಾರಗಳು ಇಲ್ಲದವನು, ಸುಖ ದುಃಖ:ಗಳಲ್ಲಿ ಸಮಭಾವ ಉಳ್ಳವನು, ಸಹನೆಯುಳ್ಳವನು, ಯಾರೋ ಆತ ನನಗೆ ಇಷ್ಟವಾದವನು.

**ಶ್ಲೋಕ:– ಭೋಕ್ತಾರಂ ಯಜ್ಞತಪಸಾಂ ಸರ್ವಲೋಕ ಮಹೇಶ್ವರಮ್**

**ಸುಹೃದಂ ಸರ್ವಭೂತಾನಾಂ ಜ್ಞಾತ್ವಾಮಾಂ ಶಾಂತಿ ಮೃಚ್ಛತಿ (ಭ. ಗೀ 5–29)**

ತಾ :–ಯಜ್ಞಗಳ ತಪಸ್ಸುಗಳ ಫಲಗಳನ್ನು ಅನುಭವಿಸುವವನು, ಸಮಸ್ತ ಲೋಕಗಳ ಶಾಸಕನು, ಸಮಸ್ತ ಪ್ರಾಣಿಗಳ ಹಿತವನ್ನು ಬಯಸುವವನು ನನ್ನನ್ನು ಅರಿತ ಮನುಜನು ಶಾಂತಿಯನ್ನು ಹೊಂದುತಿದ್ದಾನೆ.

ಪ್ರಸ್ತುತ ಎಲ್ಲರಿಗೂ, ಎಲ್ಲವೂ ಇದ್ದರೂ ಯಾರಿಗೂ ಶಾಂತಿ ಇಲ್ಲ. ಇದಕ್ಕೆ ಮುಖ್ಯ ಕಾರಣ ಮೇಲಿನ ಶ್ಲೋಕದ ಮೂಲಕ ಭಗವಾನನು ಹೇಳಿದ್ದಾನೆ. **ಆತನ ಸಂದೇಶವೇನೆಂದರೆ ಆತನಿಂದ ಸೃಷ್ಟಿಸಲಾದ 84 ಲಕ್ಷ ಜೀವ ರಾಶಿಗಳ ಆನಂದವನ್ನು ಆತ ಕೋರಿಕೊಳ್ಳುತ್ತಾನೆ ಎಂದು ಯಾರು ತಿಳಿದು ಕೊಂಡು ಆ ಪ್ರಕಾರವಾಗಿ ಪ್ರವರ್ತಿಸುವರೋ ಅವರೇ ಶಾಂತಿಯನ್ನು ಹೊಂದುತ್ತಾರೆ** ಎಂದು ಹೇಳಿದ್ದಾರೆ. ಆದ್ದರಿಂದ ಶಾಂತಿಯಿಂದ ಜೀವಿಸಬೇಕು ಎನ್ನುವವರು ಭಗವಂತನಿಗೆ ತಾವು ಮಾತ್ರವೇ ಇಷ್ಟವುಳ್ಳವರು ಎಂದು ಭಾವಿಸಬಾರದು. ಆತನಿಗೆ ಪ್ರಾಣಿಗಳನ್ನು ಸೇರಿಸಿ ಎಲ್ಲರೂ ಇಷ್ಟವುಳ್ಳವರೇ. ಆತ ಎಲ್ಲರ ಹಿತವನ್ನು ಕೋರುವವನು ಎಂದು ಅರ್ಥ ಮಾಡಿಕೊಳ್ಳಬೇಕು. ಪ್ರಾಣಿಗಳ ಮೇಲೆ ಅಮಾಯಕ ಮೂಕ ಜೀವಿಗಳ ಮೇಲೆ ಕರುಣೆ ತೋರಿಸಬೇಕು.

## ಮನುಸ್ಮೃತಿ

**ನಾ ಕೃತ್ಯಾಪ್ರಾಣಿನಾಂ ಹಿಂಸಾ ಮಾಂಸಮುಪಾದ್ಯತೆ ಕೃಚಿತ್**
**ನಚ ಪ್ರಾಣಿವದ: ಸ್ವರ್ಗಸ್ತ ನ್ಮಾನ್ಮಾಂಸ ವಿವರ್ಜಯೇತ್ (5–4)"**



ತಾ :– ಪ್ರಾಣಿಗಳನ್ನು ಕೊಲ್ಲದೆ ಮಾಂಸವು ಲಭಿಸುವುದಿಲ್ಲ ಪ್ರಾಣಿಗಳ ಹತ್ಯೆ ಸುಖದಾಯಕವಲ್ಲ ಆದ್ದರಿಂದ ಮಾಂಸಾಹಾರವನ್ನು ಬಿಡಲು ಬಿಡುವುದು ಎಲ್ಲರಿಗೂ ಶ್ರೇಯಸ್ಕರ.

ಮಾಂಸಭಕ್ಷಣೆಯು ವೇದಾದಿ ಶಾಸ್ತ್ರಗಳಿಗೆ ವಿರುದ್ಧವಾದದ್ದು. ಅಷ್ಟೇ ಅಲ್ಲ ಘೋರ ಹಿಂಸೆ ಪಾಪಗಳಿಗೆ ಮೂಲ,ಆದ್ದರಿಂದ ಮಾಂಸ ತಿನ್ನುವವನು ಯಾರಾದರೂ ಶಾಸ್ತ್ರ ದೃಷ್ಟಿಯಲ್ಲಿ ದುಷ್ಟನೆಂದು ಹೇಳಲ್ಪಡುತ್ತಾನೆ.

## ಮಹಾಭಾರತ ಅನುಶಾಸನ ಪರ್ವ :–



**"ಯೇ ಭಕ್ಷಯಂತಿ ಮಾಂಸಾನಿ ಭೂತಾನಾಮ್ ಜೀವಿ ತೃಷಿಣಾಮ್ ಭಕ್ಷಯಂತಿ**
**ತೇಪಿ ಭೂತ ಸ್ತಿರಿತಿ ಮೇನಾಸ್ತಿ ಸಂಶಯಃ ॥"**

ತಾ :–ಯಾವ ಪ್ರಾಣಿ ತಾನು ಬದುಕಿರಬೇಕೆಂದು ಬಯಸುವುದು ಆ ಪ್ರಾಣಿಯನ್ನು ಒಂದು ಮಾಂಸವನ್ನು ತಿನ್ನುವವರು ಮರುಜನ್ಮದಲ್ಲಿ ಅಂತಹ ಪ್ರಾಣಿಗಳಿಂದಲೇ ತಿನ್ನಲ್ಪಡುತ್ತಾರೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

# ಕ್ರೈಸ್ತ ಮತ

## ಭೂತ ದಯೆ ಕುರಿತು ಜೀಸಸ್ ಕ್ರೈಸ್ಟ್

ಹೊಸ ನಿಬಂಧನೆಯ ಅರೇಬಿಕ್ ಭಾಷೆಯಲ್ಲಿ ಮಾಡಲ್ಪಟ್ಟಿರುವ ಅನುವಾದದಲ್ಲಿ ಯೇಸುಕ್ರಿಸ್ತನ ಒಂದು ಭಾವಗಳು :



ಯೇಸು ಪ್ರಭು ಹೀಗೆ ಆಜ್ಞಾಪಿಸಿದ್ದಾರೆ ನೀನು ಯಾರನ್ನು ಸಾಯಿಸಬೇಡ ಏಕೆಂದರೆ ಪರಮೇಶ್ವರನ ಪ್ರತಿಜೀವಿಗೆ ಪ್ರಾಣವನ್ನು ಪ್ರಸಾದಿಸಿದ್ದಾನೆ ಪ್ರಭು ನೀಡಿರುವುದನ್ನು ಮಾನವನು ಕಸಿದುಕೊಳ್ಳಬಾರದು ನಾನು ನಿಮ್ಮೊಂದಿಗೆ ಸತ್ಯವನ್ನು ಹೇಳುತ್ತಿದ್ದೇನೆ ಭೂಮಿಯ ಮೇಲೆ ವಾಸಿಸುವ ಪ್ರಾಣಿಗಳೆಲ್ಲರಿಗೂ ಒಂದೇ ತಾಯಿಂದ ಜೀವನ ಪ್ರಾಪ್ತಿಯಾಗುತ್ತದೆ ಆದ್ದರಿಂದ ಯಾರು ಯಾರನ್ನು ಕೊಂದರೂ ತನ್ನ ಸೋದರರನ್ನು ಕೊಲ್ಲುತ್ತಿದ್ದಾನೆ ಎಂದು ಆತನಿಂದ ಅಭಿಮುಖವಾಗಿ ಜೀವನದಾಯಕವಾದ ತನ್ನ ಎದೆ ಹಾಲನ್ನು ಪ್ರಕೃತಿಯು ಆತನಿಗೆ ನೀಡುವುದಿಲ್ಲ **"ದೇವತೆಗಳು ಅಂತಹವರನ್ನು ದ್ವೇಷಿಸುತ್ತಾರೆ. ಸೈತಾನ್ ಅವರ ಶರೀರಗಳನ್ನು ತನ್ನ ನಿವಾಸವನ್ನಾಗಿ ಮಾಡಿಕೊಳ್ಳುತ್ತಾನೆ"** ಅವರ ಶರೀರದಲ್ಲಿ ಆ ಕೊಲ್ಲಲ್ಪಟ್ಟ ಪ್ರಾಣಿಗಳ ಮಾಂಸವು ಅವರ ಸಮಾಧಿಯಾಗಿ ತಯಾರಾಗುತ್ತದೆ ಏಕೆಂದರೆ ನಾನು ನಿಮ್ಮೊಂದಿಗೆ ಸತ್ಯವನ್ನು ಹೇಳುತ್ತಿದ್ದೇನೆ, ಒಂದು ಜೀವಿಯನ್ನು ಹತ್ಯೆ ಮಾಡಿದವರು ಯಾರಾದರೂ ತಮ್ಮನ್ನು ತಾವೇ ಹತ್ಯೆ ಮಾಡಿಕೊಳ್ಳುತ್ತಾರೆ. ಸಾಯಿಸಲ್ಪಟ್ಟ ಜಂತುಗಳ ಮಾಂಸವನ್ನು ತಿಂದವರು ಯಾರಾದರೂ ಮೃತ್ಯುವನ್ನು ಅಪ್ಪಿಕೊಂಡಂತೆಯೇ ಆತನ ರಕ್ತದಲ್ಲಿ ಆ ಸಾಯಿಸಲ್ಪಟ್ಟ ಪ್ರಾಣಿಗಳ ರಕ್ತದ ಪ್ರತಿಬಿಂಬ ವಿಷವಾಗಿ ಬದಲಾಗುತ್ತದೆ. ಆತನ ಮಾಂಸದಲ್ಲಿ ಅವುಗಳ ಮಾಂಸಗಳ ದುರ್ಗಂಧ ಬರಲು ಪ್ರಾರಂಭವಾಗುತ್ತದೆ. ಹಾಗೂ ಪ್ರಾಣಿಗಳ ಸಾವು ಆತನ ಸಾವು ಆಗುತ್ತದೆ ಏಕೆಂದರೆ, "ಸೈತಾನ್ ಪ್ರತಿ ಪೈಸೆಗೆ ಲೆಕ್ಕ ಕೇಳುತ್ತಾನೆ. ಆತನು ಕಣ್ಣಿಗೆ ಬದಲಾಗಿ ಕಣ್ಣುಗಳು.. ಕೈಗೆ....ಕೈ ಕಾಲಿಗೆ... ಕಾಲು ಒಂದು ಜೀವಿಯನ್ನು ಸುಡುವುದಕ್ಕೆ ಬದಲಾಗಿ ನಮ್ಮನ್ನು ಸುಡುತ್ತಾನೆ..ಗಾಯಕ್ಕೆ ಬದಲಾಗಿ ಗಾಯಮಾಡುತ್ತಾನೆ ...ಮೃತ್ಯುವಿಗೆ ಬದಲಾಗಿ ಮೃತ್ಯುವನ್ನು ಕೊಡುತ್ತಾನೆ". ಏಕೆಂದರೆ ಈ ಪಾಪಕ್ಕೆ ಫಲ ಮೃತ್ಯು ಆದ್ದರಿಂದ ಯಾರನ್ನು ಹತ್ಯೆ ಮಾಡಬಾರದು, ಮೂಕ ಜೀವಿಗಳ ಮಾಂಸವನ್ನು ತಿನ್ನಬಾರದು ಇಲ್ಲದಿದ್ದರೆ ನೀನು ಖಂಡಿತ ಸೈತಾನ ಆಕ್ರೋಶಕ್ಕೆ ಗುರಿಯಾಗುವೆ ಏಕೆಂದರೆ ಇದು(ಕೊಲ್ಲುವುದು ಮಾಂಸವನ್ನು ತಿನ್ನುವುದು) ನೋವುಗಳಿಂದ ಹಾಗೂ ದುಃಖಗಳಿಂದ ಕೂಡಿದ ಮಾರ್ಗ... ಇದು ಮರಣದ ಕಡೆಗೆ ನಮ್ಮನ್ನು ತೆಗೆದುಕೊಂಡು ಹೋಗುತ್ತದೆ.

ದೇವತೆಗಳು ನಿನ್ನ ಜೀವನ ಮಾರ್ಗದಲ್ಲಿ ನಿನ್ನ ಸೇವೆ ಮಾಡಬೇಕೆಂದರೆ, ಪರಮೇಶ್ವರನ ಆಜ್ಞೆಯನ್ನು ಅನುಸರಿಸು, ಪರಮೇಶ್ವರನ ಮಾತನ್ನು ಕೇಳು, 'ನೋಡು, ಭೂಮಿ ಮೇಲೆ ಇರುವ ಫಲಭರಿತ ವೃಕ್ಷಗಳನ್ನು, ಮೂಲಿಕೆಗಳನ್ನು ಹಾಗೂ ಪ್ರಾಣಿಗಳ ಹಾಲನ್ನು ನಿನಗೆ ಆಹಾರವಾಗಿ ನೀಡಿದ್ದಾನೆ. ಪ್ರತಿ ಪ್ರಾಣಿಗೆ ಹಚ್ಚಹಸಿರಿನ ಗಿಡಗಳನ್ನು ನೀಡಿದ್ದಾನೆ.ಮಾಂಸವನ್ನು ಹಾಗೂ ಮಾಂಸವನ್ನು ತಯಾರಿಸುವ ರಕ್ತವನ್ನು ನೀನು ಸೇವಿಸಬಾರದು. "ನನ್ನನ್ನು ಪ್ರೇಮಿಸುತ್ತಾ, ನನ್ನ ಆಜ್ಞೆಯನ್ನು ಅನುಸರಿಸುವವರ ಮೇಲೆ ದಯೆಯು ವರ್ಷಿಸುತ್ತದೆ." ಆದ್ದರಿಂದ "ಪರಮೇಶ್ವರನನ್ನು ಸಂಪೂರ್ಣವಾದ ಮನಸ್ಸು ಆತ್ಮ ಹಾಗೂ ಶಕ್ತಿಯೊಂದಿಗೆ ಪ್ರೇಮಿಸಿ", ಇದು ನನ್ನ ಮೊದಲ ಹಾಗೂ ಎಲ್ಲಕ್ಕಿಂತಲೂ ಮುಖ್ಯವಾದ ಆಜ್ಞೆ.. ಎರಡನೇಯ ಆಜ್ಞೆ ಏನೆಂದರೆ, "ನಿನ್ನನ್ನು ನೀನು ಪ್ರೇಮಿಸಿದಂತೆ ನಿನ್ನ ನೆರೆಹೊರೆಯವರನ್ನು ಪ್ರೇಮಿಸು". ಈ ಆದೇಶಗಳಿಗೆ ಮಿಗಿಲಾದ ಆಜ್ಞೆ ಬೇರೆ ಯಾವುದು ಇಲ್ಲ.


ಈ ಮಾತುಗಳನ್ನು ಕೇಳಿದ ಎಲ್ಲರೂ ಮೌನ ವಹಿಸಿದರು ಆದರೆ ಅವರೆಲ್ಲರಲ್ಲಿ ಒಬ್ಬನು ಮಾತ್ರ ಹೀಗೆ ಪ್ರಶ್ನಿಸಿದ "ಸ್ವಾಮಿ,ಕಾಡಿನಲ್ಲಿ ಒಂದು ಕ್ರೂರ ಮೃಗ ನನ್ನ ಸೋದರನ ಮೇಲೆ ದಾಳಿ ಮಾಡಿದರೆ, ನಾನು ನಮ್ಮ ಸೋದರನನ್ನು ಸಾಯಲು ಬಿಡಬೇಕೆ ಅಥವಾ ಆ ಪ್ರಾಣಿಯನ್ನು ಕೊಲ್ಲಬೇಕೆ?ಆ ಪ್ರಾಣಿಯನ್ನು ಸಾಯಿಸುವುದರಿಂದ ನಿಮ್ಮ ಆದೇಶಗಳನ್ನು ಉಲ್ಲಂಘಿಸಿದಂತೆ ಆಗುವುದಿಲ್ಲವೇ!? "

ಆಗ ಯೇಸು ಪ್ರಭು ಹೀಗೆ ಉತ್ತರಿಸಿದರು.. ಭೂಮಿ ಮೇಲೆ ಹಾಗೂ ನೀರಿನ ಮೇಲೆ ಇರುವ ಎಲ್ಲಾ ಜೀವಿಗಳು ಮಾನವರ ಸೇವಕರಾಗಿ ಮಾಡಲ್ಪಟ್ಟಿವೆ ಎನ್ನುವುದು ಮೊದಲಿನಿಂದ ಬಂದ ಆದೇಶ. ಈ ಭೂಮಿ ಮೇಲೆ ಇರುವ ಪ್ರಾಣಿಗಳೆಲ್ಲದರಲ್ಲಿ ಪರಮೇಶ್ವರನು ಕೇವಲ ಮಾನವನನ್ನು ಮಾತ್ರವೇ ತನ್ನ ರೂಪದಲ್ಲಿ ತಯಾರಿಸಿದ್ದಾನೆ. ಮನುಷ್ಯ ಪ್ರಾಣಿಗಳಿಗಾಗಿ ಆಹಾರ ಅಲ್ಲ ಆದ್ದರಿಂದ ನೀನು ನಿನ್ನ ಸೋದರನ ಪ್ರಾಣವನ್ನು ರಕ್ಷಿಸಲು ಆ ಅಡವಿಪ್ರಾಣಿಯನ್ನು ಕೊಂದರೆ ಅದು ಆಜ್ಞೆಯನ್ನು ಉಲ್ಲಂಘಿಸುವುದಲ್ಲ. ಮಾನವನು ಪ್ರಾಣಿಗಳಿಗಿಂತ ಉನ್ನತವಾದವನು. ನಾನು ಸತ್ಯವನ್ನು ಹೇಳುತ್ತಿದ್ದೇನೆ, **"ಆದರೆ ಯಾವ ಕಾರಣವಿಲ್ಲದೆ ಯಾರಾದರೂ ಪ್ರಾಣಿಯನ್ನು ಕೊಂದರೆ ಅದು ದಾಳಿ ಮಾಡದಿರುವಾಗ, ಅದನ್ನು ಬೇಟೆಯಾಡಿ ತನ್ನ ಮೋಜಿಗಾಗಿ ಅಥವಾ ಅದರ ಮಾಂಸ ತಿನ್ನಲಿಕ್ಕಾಗಿ, ಚರ್ಮಕ್ಕಾಗಿ ಅಥವಾ ಅದರ ದಂತಗಳಿಗಾಗಿ ಪ್ರಾಣಿಯನ್ನು ಕೊಂದರೆ ಆ ಕೆಲಸ ಪಾಪದೊಂದಿಗೆ ಕೂಡಿರುವುದು"** ಏಕೆಂದರೆ ಹಾಗೆ ಮಾಡುವಾಗ ಆತನು ಹಾಗೆ ಮಾಡುವುದರಿಂದ ಆತ ಮನುಷ್ಯ ಶರೀರದಲ್ಲಿರುವ ಕಾಡು ಮೃಗದ ಸ್ಥಾಯಿಗೆ ಇಳಿಯುತ್ತಾನೆ. ಆದ್ದರಿಂದ ಆತನ ಅಂತ್ಯವೂ ಆ ಪ್ರಾಣಿಯ ಅಂತ್ಯದಂತೆ ಆಗುತ್ತದೆ.

**(ರಾಧಾಸ್ವಾಮಿ ಸತ್ಸಂಗಭ್ಯಾಸದವರಿಗೆ ಕೃತಜ್ಞತೆಗಳು)**

# ಇಸ್ಲಾಂ ಮತ

## ದಯೆ ದೈವ ಗುಣದ ಕುರಿತು ಮಹಮ್ಮದ್ ಪ್ರವಕ್ತರ ಹೇಳಿಕೆ



ಯಾರ ಮನಸ್ಸಿನಲ್ಲಿ ತಮ್ಮ ಜೊತೆಯಲ್ಲಿ ಜೀವಿಸುತ್ತಿರುವ ಮನುಷ್ಯರ ಕುರಿತು ದಯೆ ಕರುಣೆ ಇರುವುದಿಲ್ಲವೋ ಇತರ ಜೀವಿಗಳ ಮೇಲೆ ಸಹಾನುಭೂತಿ ಇರುವುದಿಲ್ಲವೋ ಅಂತಹವರನ್ನು ದೈವವು ತನ್ನ ಪ್ರತ್ಯೇಕ ಕರುಣೆಗೆ ದೂರವಾಗಿರಿಸುತ್ತಾನೆ.

ಒಂದು ಸಂದರ್ಭದಲ್ಲಿ ಮೊಹಮ್ಮದ್ ಪ್ರವಕ್ತ "ಸೃಷ್ಟಿ ಸಮಸ್ತವು ದೇವರ ಕುಟುಂಬ ಆದ್ದರಿಂದ ನೀವು ಪರಸ್ಪರ ಪ್ರೇಮಾನುರಾಗಗಳೊಂದಿಗೆ ಕರುಣೆ ವಾತ್ಸಲ್ಯಗಳೊಂದಿಗೆ ಸಹನೆ-ಸಹಾನುಭೂತಿಗಳೊಂದಿಗೆ ವರ್ತಿಸುತ್ತ ಸೃಷ್ಟಿಯಲ್ಲಿನ ಇತರ ಪ್ರಾಣಿಗಳೊಂದಿಗೆ ಜವಾಬ್ದಾರಿಯಿಂದ ನಡೆದುಕೊಳ್ಳಿ ಎಂದು ಹೇಳಿದ್ದಾರೆ. **– ಬುಖಾರಿ**

ಒಮ್ಮೆ ಮಹಾಪ್ರವಕ್ತ ಹೋಗುವ ದಾರಿಯಲ್ಲಿ ಒಂದು ಒಂಟೆ ಕಾಣಿಸುತಿತ್ತು, ಅದರ ಹೊಟ್ಟೆ ಅದರ ಬೆನ್ನಿಗೆ ಅಂಟಿಕೊಂಡಂತಿತ್ತು ಅದರ ಪರಿಸ್ಥಿತಿ. ಆಗ ಅವರು ತಮ್ಮ ಅನುಚರರಿಗೆ ಹೀಗೆ ಬೋಧಿಸಿದರು "ಪ್ರಾಣಿಗಳ ಕುರಿತು ಮಾತುಬಾರದ ಮೂಕ ಜೀವಿಗಳ ಕುರಿತು ಭಯಪಡಿ, ಇವುಗಳನ್ನು ಒಳ್ಳೆಯ ಸ್ಥಿತಿಯಲ್ಲಿ ಪೋಷಿಸಿ ನಂತರ ಅದರ ಮೇಲೆ ಸವಾರಿ ಮಾಡಿ. ಒಳ್ಳೆಯ ಸ್ಥಿತಿಯಲ್ಲಿ ಇರಲು ಬಿಡಿ"

**– ಅಬುದಾವೂದ್ – ಸುಹೇಲ್ ಇಬ್ನುಲ್ ಅನನ್ಯ ಹನ್ಜಲಿಯ**

**ಅಬ್ದುಲ್ ವಿನ್ ಜಫರ್ ಉಲ್ಲೇಖ:-**

ಒಮ್ಮೆ ಮಹಾಪ್ರವಕ್ತ ಒಂದು ಅನ್ಸಾರಿ ಸಹಜರನ ತೋಟದಲ್ಲಿ ಪ್ರವೇಶಿಸಿದರು. ಅಲ್ಲಿ ಯಾರೋ ಒಂದು ಒಂಟೆಯನ್ನು ಕಟ್ಟಿದ್ದರು ಅದು ಮಹಾಪ್ರವಕ್ತನನ್ನು ನೋಡಿ ಬಾದೆಯಿಂದ ಅರಚಿತು. ಅದರ ಕಣ್ಣಿಂದ ಅಶ್ರುವು ಬರಲಾರಂಭಿಸಿತು. ಮಹಾಪ್ರವಕ್ತ ಅದರ ಬಳಿಗೆ ಹೋಗಿ ಅದರ ಹಣೆಯನ್ನು ಕಪೋಲವನ್ನು ಮೃದುವಾಗಿ ಸವರಿದಾಗ ಅದು ಸಮಾಧಾನ ಗೊಂಡಂತೆ ಕಾಣಿಸಿತು. 'ಈ ಒಂಟೆ ಯಾರದು?' ಎಂದು ಮಹಾಪ್ರವಕ್ತ ಕೇಳಿದರು.

ಒಬ್ಬ ಅನ್ಸಾರಿ ಯುವಕನು ಬಂದು ದೈವ ಪ್ರವರ್ತ ಈ ಒಂಟೆ ನನ್ನದೇ ಎಂದು ಉತ್ತರಿಸಿದನು. ಅದಕ್ಕೆ ಆತ ನಿನಗೆ ದೇವರ ಭೀತಿ ಇಲ್ಲವೇ?ಅಲ್ಲಾಹ್ ನಿನಗೆ ಸ್ವಾದಿನ ಮಾಡಿದ ಈ ಮೂಕ ಪ್ರಾಣಿಯ ಕುರಿತು ನೀನು ಅಲ್ಲಾಹ್ ಗೆ ಭಯಪಡುವುದಿಲ್ಲವೇ ಇದು ಅತ್ತು ನನ್ನೊಂದಿಗೆ ಪಿರ್ಯಾದಿ ಮಾಡುತ್ತಿದೆ ನೀನು ಇದನ್ನು ಸರಿಯಾಗಿ ಮೇಯಿಸದೇ ಯಾವಾಗಲೂ ಕೆಲಸ ಮಾಡಿಕೊಳ್ಳುತ್ತಲೇ ಇರುತ್ತೀಯಾ ಎಂದು ಇದು ನನಗೆ ಪಿರ್ಯಾದು ಮಾಡಿದೆ ಎಂದು ಗದರಿಸಿದರು. **–ರಿಯಾಜುಸ್ಸಾಲಿಹೀನ್**

(ಸಂಗ್ರಹ : ಹದೀಸ್ ಬೆಳಕು, ಮೂಲ :ಮೌಲಾನ ಜಲೀಲ್ ಅಹೇಸನ್ ನದ್ವಿ )

# ಪ್ರಾಣಿಗಳ ಪ್ರಾರ್ಥನೆ



ಪ್ರಾಣಿಗಳು ಕೂಡ ಪ್ರಾಣವಿರುವ ಜೀವಿಗಳೆ ಅವುಗಳಿಗೆ ಬಾಧೆ ನೋವು ಇರುತ್ತದೆ. ಅವು ಕೂಡ ಮಾನವರಂತೆ ಸುಖವನ್ನು ಕೋರು ಕೊಳ್ಳುತ್ತವೆ. ಗಮನಿಸಿ, ನಾಯಿಗೆ ಬಿಸ್ಕತ್ತುಗಳನ್ನು ತೋರಿಸಿದರೆ ಬಾಲ ಆಡಿಸುತ್ತಾ ಬಳಿಗೆ ಬರುತ್ತದೆ ಆದರೆ ಕೋಲು ತೋರಿಸಿದರೆ ಬಾಲ ಮುದುಡಿಕೊಂಡು ಓಡಿ ಹೋಗುತ್ತದೆ ಕಾರಣ ಬಿಸ್ಕತ್ತು ತಿಂದರೆ ಸುಖ ಕೋಲಿನಿಂದ ಏಟು ಬಿದ್ದರೆ ಆ ನೋವು ತುಂಬಾ ಹಿಂಸೆಯಾಗಿರುತ್ತದೆ.

ಅವು ಕೂಡ ಮಾನವರಂತೆ ಬಾದೆಯಾದಾಗ ಪ್ರತಿಭಟಿಸುತ್ತವೆ ಬಾಧೆಪಡುತ್ತವೆ ಹಾಗೆ ಕಷ್ಟ ಉಂಟಾದಾಗ ಮಾನವರಂತೆ ಭಗವಂತನನ್ನು ಪ್ರಾರ್ಥಿಸುತ್ತವೆ. ಆದರೆ ಅವು ತಮ್ಮ ಭಾಷೆಯಲ್ಲಿ ಪ್ರಾರ್ಥಿಸುತ್ತವೆ. ಆದರೆ ಅವುಗಳು ಭಾಷೆ ಮಾನವರಿಗೆ ಅರ್ಥವಾಗುವುದಿಲ್ಲ. ಆದ್ದರಿಂದ ಪ್ರಾಣಿಗಳು ಪ್ರಾರ್ಥಿಸುವುದಿಲ್ಲವೆಂದು ಇಲ್ಲವೆಂದು ತಿಳಿದುಕೊಳ್ಳಬೇಡಿ.

ಶ್ರೀ ಕೃಪಾಲ್ ಸಿಂಗ್ ಸಾರಾಂಗ್ ರವರು "ಹಂಸವು ರತ್ನಗಳು ಮುತ್ತುಗಳನ್ನು ಸೇವಿಸುತ್ತದೆ" ಎನ್ನುವ ಪುಸ್ತಕದ ಮೂಲಕ ಪ್ರಾಣಿಗಳ ಪ್ರಾರ್ಥನೆಯ ಕುರಿತು ಈ ವಿಧವಾಗಿ ಹೇಳಿದ್ದಾರೆ.

"ಈ ಅಮಾಯಕ ಮೂಕ ಜೀವಿಗಳು ಮಾತಾಡಿದರೆ, ನಾವು ಅದರ ಪ್ರಾರ್ಥನೆ ಅರ್ಥ ಮಾಡಿಕೊಂಡರೆ ಅವು ಪರಮಾತ್ಮನ ಮುಂದೆ ಏನೆಂದು ಪ್ರಾರ್ಥಿಸುತ್ತವೆ ಎಂದು ನಮಗೂ ಅರ್ಥವಾಗುತ್ತದೆ".

ಓ ಪರಮಾತ್ಮ ಇಂದು ನಮ್ಮ ವಿನಂತಿಯನ್ನು ಕೇಳು,

ಪ್ರಭುವೇ ನಿಸ್ಸಹಾಯಕರಾದ ನಾವು ಎಷ್ಟೋ ಕಷ್ಟಗಳನ್ನು ಅನುಭವಿಸುತ್ತಿದ್ದೇವೆ ನಮ್ಮನ್ನು ಕೂಡ ನೀನೇ ಸೃಷ್ಟಿಸಿರುವೆ ಎಂದು ಈ ಲೋಕದಲ್ಲಿರುವ ಎಲ್ಲರೂ ಯಾವಾಗ ಅರ್ಥಮಾಡಿಕೊಳ್ಳುವರು

ನಮ್ಮ ನೋವು ಕೂಡ ಅವರ ನೋವಿನಂತೆ ಇರುತ್ತದೆ ಅಲ್ಲವೇ

ಓ ಪರಮಾತ್ಮ ನಾವು ಕೂಡ ನಿನ್ನವರೇ ಎಂದು ಇವರಿಗೆ ಹೇಳು.

ಮಾನವರು ಈ ಅತ್ಯಾಚಾರದಿಂದ ನಮ್ಮನ್ನು ಯಾವಾಗ ವಿಮುಕ್ತರನ್ನಾಗಿಸುತ್ತಾರೋ? ಅವರು ಕರುಣೆ, ದಯೆ, ಪ್ರೇಮಗಳನ್ನು ಯಾವಾಗ ಧರಿಸುತ್ತಾರೆ!

ನಮಗೆ ಇವರ ಅತ್ಯಾಚಾರದಿಂದ ಮುಕ್ತಿಯನ್ನು ಕೊಡಿಸು

ನಮ್ಮ ಈ ಪ್ರಾರ್ಥನೆಯನ್ನು ಆಲಿಸು! ಹೇ ಪರಮಾತ್ಮ! ಇದೇ ನಮ್ಮ ಪ್ರಾರ್ಥನೆ!"

**ಹಿಂಸಾ ಚೋಡೋ – ಅಂದರೆ ಪ್ರಾಣಗಳ ಮೇಲೆ ದಯವನ್ನು ತೋರಿಸಿ**
**ಹಂಸಾ ಪಕಡ್ – ಶ್ವಾಸದ ಮೇಲೆ ಗಮನವಿಟ್ಟು ಧ್ಯಾನ ಮಾಡಿ**

# ಭೂತದಯೇ ಕುರಿತು ಮಹಾಪುರುಷರ ಅಭಿಪ್ರಾಯಗಳು



"ಪ್ರಾಣಿಗಳ ಮೇಲೆ ದಯೆ ತೋರಿಸುವುದೇ ಧರ್ಮ ಅವುಗಳನ್ನು ಸಾಯಿಸುವುದು ಮಹಾ ಪಾಪ"

**–ಗೌತಮ ಬುದ್ಧ**



ಜೀವ ಕರುಣೆಯನ್ನು ಅಳವಡಿಸಿಕೊಂಡು ಮಾಂಸಾಹಾರವನ್ನು ಬಿಡು. ಕರುಣೆ ದಯೆಯೊಂದಿಗೆ ತುಂಬಿದ ಮನಸ್ಸು ಉಳ್ಳವರೆಲ್ಲರೂ ಸನ್ಮಾರ್ಗ ಸಂಘದಲ್ಲಿ ಸೇರಬಹುದು"

**– ವಡಲೂರ್ ವಳ್ಳಲಾರ್**




ಯಾವ ವ್ಯಕ್ತಿಯ ಹೃದಯದಲ್ಲಿ ದಯಾ ಬಾವ ಇಲ್ಲದಿದ್ದರೆ,ಆತನು ಪರಮಾರ್ಥ (ಭಗವಂತನ ) ಮಾರ್ಗದಲ್ಲಿ ನಡೆಯಲಾರ ದಯೆ ಎನ್ನುವುದು ಮತನಿಗೆ ಮೂಲ ಭಯ ಇಲ್ಲದ ಹೃದಯದಲ್ಲಿ ಈಶ್ವರಾನುಭೂತಿ ಉಂಟಾಗುವುದಿಲ್ಲ. **– ಕಬೀರ್ ಸಾಹೇಬ್**



"ಎಷ್ಟು ಉನ್ನತ ಜಾತಿಯಲ್ಲಿ ಹುಟ್ಟಿದರು, ಮಾಂಸಾಹಾರವನ್ನು ತಿನ್ನುವವರು ನೀಚ ಜಾತಿಗೆ ಸೇರಿದವರಂತೆ ಲೆಕ್ಕ"


**– ತಿರುಮೂಲರ್**



ದಯೆ ಅಥವಾ ಕರುಣೆ ಎನ್ನುವ ಪದಗಳಿಗೆ ಅರ್ಥ ಇತರ ಜೀವಿಗಳನ್ನು ಹತ್ಯೆ ಮಾಡದೇ ಇರುವುದು.

**– ತಿರುವಳ್ಳುವರ್**


ಯಹೂದಿಗಳ ಪ್ರವರ್ತ ನೂಹೆ ಮಹಾತ್ಮನ ಏಳನೆಯ ಸಂದೇಶ. ಯಾವ ಪರಿಸ್ಥಿತಿಯಲ್ಲೂ ಜೀವಿಸಿರುವ ಜಂತುಗಳ ಮಾಂಸವನ್ನು ತಿನ್ನಬಾರದು **–ನೂಹೆ**




ಮಾಂಸ ಮಧ್ಯಪಾನ ಹಾಗೂ ಮೊಟ್ಟೆಗಳು ವಿಷದೊಂದಿಗೆ ಸಮಾನ ಇವುಗಳನ್ನು ಸೇವಿಸಲು ಯಾವಾಗಲೂ ಯಾವ ವಿಧವಾಗಿಯೂ ಅನುಮತಿ ನೀಡಬಾರದು.


**– ಮಹಾರಾಜ್ ಸಾವನ್ ಸಿಂಗ್**

ದಯೆಯುಳ್ಳ ಹೃದಯವೇ ಭಗವಾನ್ ನಿಲಯ – **ಮಲಯಾಳ ಸ್ವಾಮಿ**






ಮಾನವನು ಎಂತಹ ಪರಿಸ್ಥಿತಿಗಳಲ್ಲೂ ಮಾಂಸ ತಿನ್ನುವುದು ಸರಿಯಲ್ಲ. ನಾವು ಪಶುಗಳಿಗಿಂತ ಉನ್ನತವಾದವರು, ಮಾಂಸವನ್ನು ತಿಂದು ಕೆಳವರ್ಗಕ್ಕೆ ಸೇರಿದ ಪ್ರಾಣಿಗಳಂತೆ ಪ್ರವರ್ತಿಸುವುದು ನಮಗೆ ಯುಕ್ತವಲ್ಲ – **ಮಹಾತ್ಮಾ ಗಾಂಧಿ**



ರಕ್ತವು ಸೇರಿದ ಎಂತಹ ಪದಾರ್ಥವನ್ನು ತಿನ್ನಬಾರದು ಯಾವ ಜೀವಿಯನ್ನು ಹತ್ಯೆ ಮಾಡಬಾರದು


**– ಲಿಯೋನಾರ್ಡ್ ಡಾವಿನ್ಸಿ**



"ಮುಳ್ಳು ಹೊಕ್ಕಿದರೆ ಬಾಧೆ ಪಡುವವರು ಪ್ರಾಣಿಗಳ ಕತ್ತನ್ನು ಕೊಯ್ದು ಹೇಗೆ ತಿನ್ನುತ್ತಾರೆ?"


**–ಮಲೂಕ್ ದಾಸ್**

ಎಲ್ಲರಲ್ಲೂ ಒಬ್ಬ ಪರಮಾತ್ಮನ ಪ್ರಕಾಶವೇ ಇರುವುದಿಲ್ಲ ಸಂಗತಿ ನೆನಪಿನಲ್ಲಿಡಿ ನೀವು ಹಿರಿಯರ ಜ್ಞಾನಸಾರ ನಡೆದುಕೊಳ್ಳುವುದಿಲ್ಲ ನಿರ್ದಯಿ(ದಯೆಯಿಲ್ಲದವನು ) ನಿಜವಾದ ಮತ ಭ್ರಷ್ಟನೂ ನಾಸ್ತಿಕನು ನೀಚನು **– ಪಲಟೂ ಸಾಹೇಬ್**



"ಕ್ಷಮೆ ಎನ್ನುವ ಜಪಗಳೊಂದಿಗೆ ದಯೆ ಎನ್ನುವ ದೇವತೆಯನ್ನು ಪೂಜಿಸಿದ ಮಾನವನೇ ಶ್ರೇಷ್ಠನು"

**–ಗುರು ನಾನಕ್**



ನಾವು ದುಃಖಿ ಜೀವಿಗಳ ಕಣ್ಣೀರಿನ ಆರ್ತನಾದಗಳನ್ನು ಕೇಳಲು ಸಿದ್ಧವಾಗಿಲ್ಲ. ಆದರೆ ನೆನಪಿನಲ್ಲಿಟ್ಟುಕೊಳ್ಳಿ ಅವುಗಳ ಹಾಹಾಕಾರವು ನೀವು ಸಾಗುವ ಪರಲೋಕದವರೆಗೂ ಹಿಂಬಾಲಿಸುತ್ತವೆ".

**– ಲಾರ್ಡ್ ಟೋನಿಸನ್**



ಮಾಂಸವನ್ನು ಪ್ರಚಾರ ಮಾಡುವವರೆಲ್ಲರೂ ರಾಕ್ಷಸ ಸಮಾನರೆ ವೇದಗಳಲ್ಲಿ ಎಲ್ಲಿಯೂ ಮಾಂಸ ಭಕ್ಷಣೆಯ ಕುರಿತು ಹೆಸರಿಸಿಲಾಗಿಲ್ಲ

**– ದಯಾನಂದ ಸರಸ್ವತಿ**

# ಶ್ರೀ ರಾಮಧಾಮ ಧ್ಯಾನಕೇಂದ್ರ

**ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು–560 066.**

**ಸಂಪರ್ಕಿಸಿ : ಹೆಚ್. ಎನ್. ಶ್ರೀನಿವಾಸ, 9449695503**

**ವಿಜಯಲಕ್ಷ್ಮೀ ಎಸ್.ಎನ್. 80500 82689**

## ಶ್ರೀ ರಾಮ ಪಬ್ಲಿಕೇಶನ್ಸ್‌ನಲ್ಲಿ ದೊರೆಯುವ ಪುಸ್ತಕಗಳು

| | | |
|---|---|---|
| 1. | ಅಹಿಂಸೆ & ಶಾಖಾಹಾರ | ರೂ. 20 |
| 2. | ನವವಿಧ ಧರ್ಮಗಳು | ರೂ. 40 |
| 3. | ಸಸ್ಯಾಹಾರವೇ ಮಾನವಾಹಾರ | ರೂ. 20 |
| 4. | ಧ್ಯಾನ | ರೂ. 60 |
| 5. | ವಿದ್ಯಾರ್ಥಿಗಳ ವಿಕಾಸಕ್ಕೆ ಧ್ಯಾನ ವಿದ್ಯೆ | ರೂ. 30 |
| 6. | ಭಾಗವತ ಸನ್ನಿವೇಶಗಳ ಅಂತರಾರ್ಥ | ರೂ. 30 |
| 7. | ಶಿರಿಡಿ ಸಾಯಿ ಸಂದೇಶಗಳು | ರೂ. 30 |
| 8. | ಪ್ರಾಣ ಶಕ್ತಿ | ರೂ. 100 |
| 9. | ಜೀವನದ ಸೂಕ್ಷ್ಮಗಳು | ರೂ. 60 |
| 10. | ವಿದ್ಯಾರ್ಥಿ ಜೀವನ ಕ್ರಾಂತಿ | ರೂ. 40 |
| 11. | ಸಂಘಂ ಶರಣಂ ಗಚ್ಛಾಮಿ | ರೂ. 300 |
| 12. | ತುಳಸಿ ದಳ (I) | ರೂ. 200 |
| 13. | ತುಳಸಿ ದಳ (ii) | ರೂ. 220 |
| 14. | ಆಶ್ಚರ್ಯ....ಆಶ್ಚರ್ಯ | ರೂ. 40 |
| 15. | ದುಃಖ ನಿವಾರಣೆಯ ಮಾರ್ಗ | ರೂ. 70 |
| 16. | ಧ್ಯಾನದಿಂದಲೇ ಜ್ಞಾನ | ರೂ. 70 |
| 17. | ಬ್ರಹ್ಮಜ್ಞಾನ | ರೂ. 70 |
| 18. | ಜ್ಞಾನ ಜ್ಯೋತಿ | ರೂ. 90 |
| 19. | ಗೈಡಿಂಗ್ | ರೂ. 100 |
| 20. | ಸಂಕಲ್ಪವೆಂದರೇನು? | ರೂ. 50 |
| 21. | ಕರ್ಮ ಸಿದ್ಧಾಂತ | ರೂ. 70 |
| 22. | ಜ್ಞಾನ ಕುಸುಮಗಳು | ರೂ. 90 |
| 23. | ಆಲೋಚನಾ ಶಕ್ತಿ | ರೂ. 40 |
| 24. | ಆತ್ಮವಿಜ್ಞಾನ ಮತ್ತು ಮೃತ್ಯುವೇ ಇಲ್ಲ | ರೂ. 40 |
| 25. | ಆಧ್ಯಾತ್ಮಿಕ ಶಾಸ್ತ್ರ | ರೂ. 40 |
| 26. | ಭಕ್ತಿ ಮುಕ್ತಿ | ರೂ. 30 |
| 27. | ಧ್ಯಾನ ತರಂಗ | ರೂ. 40 |
| 28. | ಜ್ಞಾನ ಯುಗ | ರೂ. 60 |
| 29. | ಸೇತು ವಿಜ್ಞಾನ | ರೂ. 40 |
| 30. | ಮರಣಿಸುವ ಮುಂಚೆಯೇ ಮರಣಿಸಬೇಕು | ರೂ. 130 |
| 31. | ಅತೀಂದ್ರಿಯ ಶಕ್ತಿಗಳು | ರೂ. 40 |
| 32. | ನಾವು ಇಹಲೋಕ ವಾಸಿಗಳಾ? ಪರಲೋಕ ವಾಸಿಗಳಾ? | ರೂ. 40 |
| 33. | ಆಲೋಚಿಸಿ | ರೂ. 70 |
| 34. | ನಿರ್ವಾಣ ಮಾರ್ಗ | ರೂ. 60 |
| 35. | ಸತ್ಯ | ರೂ. 40 |
| 36. | ಆರ್ಥಿಕ ಪರಿಸ್ಥಿತಿ | ರೂ. 40 |
| 37. | ಚಕ್ರಗಳು | ರೂ. 30 |
| 38. | ಭೂತದಯೆ ಮತ್ತು ದೈವತ್ವ | ರೂ. 80 |

# “ಧ್ಯಾನ ಮಾಡುವ ವಿಧಾನ”

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

## ಧ್ಯಾನವನ್ನು ಯಾರಾದರೂ ಮಾಡಬಹುದು
## ಯಾವ ವಯಸ್ಸಿನವರಾದರೂ ಮಾಡಬಹುದು
## ಯಾವ ಸಮಯದಲ್ಲಿಯಾದರೂ ಮಾಡಬಹುದು
## ಯಾವ ಸ್ಥಳದಲ್ಲಿಯಾದರೂ ಮಾಡಬಹುದು.

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

| | | |
|---|---|---|
| **ಬ್ಯಾಂಕ್ ಹೆಸರು** | **: ಭಾರತೀಯ ಸ್ಟೇಟ್ ಬ್ಯಾಂಕ್** | **– State Bank of India** |
| **ಶಾಖೆಯ ಹೆಸರು** | **: ಚಾಮರಾಜಪೇಟೆ ಶಾಖೆ** | **– Chamarajapete Branch** |
| **ಖಾತೆ ಸಂಖ್ಯೆ** | **: 30828057680 : I.F.S.C. ಕೋಡ್** | **– S.B.I.N 0005794** |
| **ಖಾತೆಯ ಹೆಸರು** | **: ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ** | **– K.P.D.P. Trust A/c. Dhayana Kasturi** |

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**



ನಿನಗಿಂತ ಕೆಳಗಿನ ತಾಯಿಯಲ್ಲಿರುವ ಜೀವಿಗಳ ಮೇಲೆ ದಯೆ ತೋರಿಸಿದಾಗಲೇ,
ನಿನ್ನ ಮೇಲಿನವರು ನಿನಗೆ ದಯೆ ತೋರುತ್ತಾರೆ.

-ಬ್ರಹ್ಮರ್ಷಿ ಪತ್ರೀಜಿ



ಅದ್ವೇಷ್ಟಾ ಸರ್ವಭೂತಾನಾಮ್ ಮೈತ್ರ: ಕರುಣ ಏವಚ(12-13)
ತಾ:- ಸಮಸ್ತ ಪ್ರಾಣಿಗಳ ಮೇಲೆ ದ್ವೇಷವಿಲ್ಲದವನ್ನು ಕರುಣೆ ಸ್ನೇಹ
ಭಾವವುಳ್ಳವನು ಯಾರು ಅವನು ನನಗೆ ಪ್ರೀತಿಪಾತ್ರನು

-ಶ್ರೀ ಕೃಷ್ಣ ಭಗವಾನ್



ಭೂತದಯೆಗೆ ಸಮವಾದ ಪುಣ್ಯವಿಲ್ಲ ಪ್ರಾಣಿ ಪೀಡನೆಗಿಂತ ಮಹಾ ಪಾಪವಿಲ್ಲ

-ಶ್ರೀ ನಾರದ ಮಹರ್ಷಿ



ನಮ್ಮ ಮನಸ್ಸಿನಲ್ಲಿ ದಯೆ ಎನ್ನುವ ಭಾವವು ಇದ್ದರೆ ಈ ಜೀವಿತವು ಅಮೂಲ್ಯವಾದದ್ದು.
ಜನರು ತಾವು ಸ್ವಯಂ ನಿರ್ದಯಿಗಳಾಗಿ ದೇವತೆಗಳಿಂದ ದಯೆಯನ್ನು ಆಶಿಸುಸತ್ತಾರೆ.

-ಬುದ್ಧ ಭಗವಾನ್



ಕರುಣೆ ತೋರಿಸುವವರು, ದಯೆಯುಳ್ಳ ಮನಸ್ಸನ್ನುಳ್ಳವರಿಗೆ ಕರುಣಾಮಯನಾದ ದೇವರು ಅನಂತವಾದ
ಕರುಣೆಯನ್ನು ತೋರುತ್ತಾನೆ. ಆದ್ದರಿಂದ ನೀವು ಭೂಲೋಕ ವಾಸಿಗಳ ಮೇಲೆ ಇತರ ಜೀವಕೋಟಿಗಳ
ಮೇಲೆ ಕರುಣೆ, ದಯೆ ತೋರಿ ಆಗ ಮೇಲಿನವನು ನಿಮ್ಮನ್ನು ಕರುಣಿಸುತ್ತಾನೆ.

-ಮಹಮ್ಮದ್ ಪ್ರಕ್ತ (ಅಬೂದಾವೂದ್)



ನೀನು ಏನು ಸಿಕ್ಕಿದರೆ ಆ ಬೆಳೆಯನ್ನು ಹೊಂದುವೆ ದಯವಿಟ್ಟು ದಯೆ ತೋರದವನ ಮೇಲೆ,
ಪರಮೇಶ್ವರನು ದಯೆ ತೋರುವುದಿಲ್ಲ.

-ಜೀಸಸ್ ಕ್ರೈಸ್ಟ್



ಯಾವ ಮಾನವನ ಹೃದಯದಲ್ಲಿ ದಯೆ ಇಲ್ಲವೋ ಆತನೊಳಗೆ ಜ್ಯೋತಿ ಪ್ರಕಾಶ ಉಂಟಾಗುವುದಿಲ್ಲ.

-ಗುರು ನಾನಕ್



ಪ್ರತಿ ಮತಕ್ಕೂ ಹಿಂದೂ, ಸಿಖ್, ಮಹಮ್ಮದೀಯ, ಯಹೂದಿ, ಜೈನ, ಬೌದ್ಧ, ಕ್ರೈಸ್ತ ಮೊದಲಾದ ಮತಗಳೆಲ್ಲದರ
ಸಾರವು ಒಂದೇ ಪ್ರತಿ ಮತದ ಒಂದು ಮುನಾದಿಯೇ ದಯೆ.

-ಸರ್ದಾರ್ ಸಂತೋಷ್ ಸಿಂಗ್

ರೂ 80/-


**ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ**

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada ● www.meditationeverywhere.org ● www.pssmovement.org

# ಶ್ರೀರಾಮ ಪಬ್ಲಿಕೇಶನ್ಸ್

ಶ್ರೀರಾಮಧಾಮ ಧ್ಯಾನಕೇಂದ್ರ, ನಾರಾಯಣಪ್ಪ ಗಾರ್ಡನ್, ವೈಟ್ ಫೀಲ್ಡ್, ಬೆಂಗಳೂರು - 560 066

ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449695503   ವಿಜಯಲಕ್ಷ್ಮಿ ಎಸ್.ಎನ್. + 91 80500 82689